Sri G. VENKATAI GOWDA.— The question raised was whether the Government is in a position to contradict what has appeared in the press.

Mr. DEPUTY SPEAKER.— That matter was ended; then Sri U.M. Madappa began to speak and at that time, Sri Suryanarayana Rao raised a point of order.

2-30 P.M.

Sri K. S. SURYANARAYANA RAO.— Sir, my point of order is this. I only wish our friends had allowed me to say what I had to say. Before I said what the point of order was, the Members interpreted. It is a sad comment. Sir, you were pleased to give a ruling that privilege motion moved by the leader of the Opposition was not according to the prescribed rules. Mr Madappa rose to substantiate the proposition mooted by the Leader of the Opposition saying that no notice of a privilege motion be given and all that. My point of order is, when once the Speaker gives a ruling that a privilege motion of any nature has to come in the prescribed form to the Secretary first, is it open to any Hon'ble Member of this House to get the question reopened and debate upon over again?

Mr. DEPUTY SPEAKER.— I will answer the point. I did say that a question of privilege could be raised by an Hon'ble Member after giving notice of it when that matter is sent to the Secretary before the commencement of the sitting. That is the Rule. Even after the notice is received, it is necessary also that the Speaker should give permission and consent to it. Unless the Speaker gives his consent to it, the privilege motion cannot sustain; I did say this, In spite of that, some Members persist and go on questioning the ruling of the Chair; this is not fair. The rule is perfectly clear. The notice should be sent to the Secretary and the Speaker must approve of it. That being so, I cannot understand the arguments and counter-arguments of Hon'ble Members even after a ruling is given.

Sri U. M. MADAPPA.— Sir, there is a proviso to that rule which says, if the Speaker is satisfied about the urgency of the matter, he may allow. Government is looking out information to the Press in camera. You must take action against the Government for this. Even now, you may consider the urgency of the matter and allow it. I appeal to the Chair.

Mr. DEPUTY SPEAKER.— I cannot decide at this stage. If he wants to raise a privilege motion, he can give notice and send it to the Secretary and I will consider it. The matter should end now. I call upon Sri B. G. Khot to speak.

BUDGET ESTIMATES FOR 1961-62

(General Discussion—*contd.*)

Sri B. G. KHOT (Sadalga).— Sir, I was stating yesterday how the State is passing through adverse financial conditions The revenue is increased mainly by taxation. The very table given by the Finance Minister shows that the direct taxes are raised from 10:9·64 lakhs to 1404.15 lakhs which means 4 times. Indirect taxes are raised from 13 3.12 lakhs to 2210·50 lakhs which means 1½ times. But the nontax revenue is raised from 456 to 502-only by 50 lakhs. For developmental departments, the expenditure is from 2081.93 lakhs to 2991.49 lakhs and for capital works like major and medium irrigation, roads etc., from 1351.21 lakhs to 2745·99 lakhs. There is a deficit of 4.31 crores this year. Last year also, there was a deficit and similarly, the year previous to last year. They brought supplementary demands for grants. Though it was seemingly a surplus budget, in fact, it was a deficit budget. So, Sir, continuously for two to three years. we are facing dificit budgets. The conception of the Finance Minister is that deficit or unbalanced budget will certainly suffer in financial field and they will lead to monetary inflations That is what we are experiencing these three or four years. If it is left uncontrolled, it certainly leads to National disaster also.

Therefore, it needs some control and there should not be such deficits.

Sri T. MARIAPPA (Minister of Finance).—Will the Hon'ble Member kindly suggest the directions in which we have to cut down developmental expenditure.

Sri B. G. KHOT.—In course of time, I will deal with that point.

We have no hopes of any relief in taxation also and there could be no reasonable expectation for the upliftment of financial conditions. In my opinion, it would not be economic prudence to leave such a gap Apart from capital expenditure, it is not proper that there should be any defecit at all successively in this manner. I do agree that it may not be possible to have big surpluses in revenue because ours is a developing economy. Likewise, I agree that it may not be even possible to cut down our social services. It is also not possible for us to step into steep taxation on account of the fear of getting unpopular with the public. Yet, by simple taxation measures or by other kinds of revenue resources or by central aid, somehow, we ought to fill this widening gap and there should be no such successive defecits, especially on revenue account. I wish to emphasise this point. On the ground of stepping up nation-building activities, there is a great temptation to incur heavy expenditure and for this purpose increasingly rely on public loans. It may be expedient to raise a loan but it would not be beneficial to the financial condition of the State. It wohld be harmful in the long run, and that is the reason we are facing adverse financial conditions today.

(Sri B. G. KHOT)

I may recall to the memory of the Finance Minister that the Finance Commission headed by Sri Santhanam had said in its report that no State in the Country should try to raise loans for developmental works. The Commission had also uttered a note of warning that there should be no deficits of any kind, particularly on revenue account

Sri T. MARIAPPA.—It was a suggestion given to all the States that they should as far as possible avoid defecits. We did not have defecits before. This year. there is defecit and next year, there will be still higher defecit. We are still in the current year. Next year, *i. e.*, 1961-62, the defecit would be of the order of six crores. That has been disclosed. There is nothing new in it.

Sri B. G. KHOT.—My request to Government is that they should aim at a surplus budget ; at least, there should be no defecit on revenue account. The defecit on revenue account is 431.52 lakhs and the overall defecit is 539.47 lakhs. Besides this, there is a considerable amount of debt. In 1959 to 60, the debt amount was 129 crores and now in the current year, it is 152 crores. In this 152 crores for Mysore State, there is nearly 100 crores. The liability of interest is six crores. Besides the debt amount, and besides the liability of discharge of interest on the debt, I wish to point out that loan finance is a costly adventure and it is painful. We have to play two roles : one to pay interest and second to discharge the debt. Our sinking fund is only 18 crores 38 lakhs. Our Finance Minister has assured us that we have assets to the extent of 39 crores.

Sri T. MARIAPPA.—According to book value, it is 39 crores. Actually, the market value will be something stupendous. Take Krishnarajasagar, for example.

Sri B. G. KHOT.—That is where I differ from you. Thirtynine crores is the asset shown in the Memorandum.

Sri T. MARIAPPA.—Over and above the liabilities, it is 39 crores.

Sri B. G. KHOT.—My friend, Mr. Mallaradhya, has rightly pointed out that it is not real asset. A few batch of roads or a white-washed building or some machinery here and there cannot form real assets.

Sri T. MARIAPPA.—Mr. Mallaradhya had pointed out that roads are not assets. Without roads, communication will not improve. Even a country tract is an asset.

Sri B. G. KHOT.—I ask the question : what is the real asset of the Country ? The real asset, considred to be so throughout the World, is the tax-paying capacity of the common man. These buildings, machineries and patched-up roads cannot be permanent assets of the country.

I suggest in this connection that there should be legislation regarding the raising of loans and levy of taxation. There should be a percentage fixed by law. There may be some concession but loans and taxes should be restricted to a certain percentage of the revenue.

I request the Government that there should be a legislation in order to fix the percentage of taxation and the percentage of loan to be raised. These must always bear some definite proportion to the revenue of a State. Such a legislation should be passed with the concurrence of the Assembly. There should be some margin for raising loans and also for taxation. Therefore, I say that there should be some form of policy in this matter and unless there is that policy, we are not going to give our consent to this.

Then Sir, in order to make up this deficit, taxation measures are mentioned in the Budget Speech. Surcharge on land revenue is proposed to give you 130 lakhs, tax on electricity consumption is expected to give you 40 lakhs and tax on Motor Vehicles about 90 lakhs. Even with all these taxes which total to 260 lakhs, there still remains a deficit of 175 lakhs uncovered, and nowhere it is mentioned how this deficit can be made up. Opening Balance also is in deficit and no other measures are proposed. Therefore, what I say is, so for as surcharge is concerned, I am against this surcharge and I have reasons for that. You are recovering land assessment at present. There is further the agricultural income tax. In addition, you have the betterment and water levy. After land revenue survey and settlement is effected, I think there will again be a revision of land tax.

Sri T. MARIAPPA.—This surcharge will be temporary pending revision settlement.

Sri G. VENKTAI GOWDA.—In Madras Karnataka, that surcharge is already paid. Whether that will be taken into consideration in levying this surcharge, I want to know.

Sri T. MARIAPPA.—That will be taken into consideration.

Sri B. G. KHOT.—I am also suggesting that so far as this Agricultural income-tax, excluding plantations, it may be withdrawn. You can have plantations for agriclutural income tax. We have no complaint and instead of agricultural income-tax, you may levy this surcharge on land as you propose.

Sri T. MARIAPPA.—What is the rate per acre particularly for tobacco lands in Nippani area ? You are making Rs. 2,000 or Rs. 3,000 per acre.

Sri B. G. KHOT.—I will have some discussions with you on that point afterwards.

Besides, in my constituencies, there are 12 merged villages coming from ex-Kolhapur State. They have already land assessment which is four times the present assessment. This surcharge will fall on them very heavily and it will be very difficult for the raiyats of that area.

(Sir B. G. Khot)

You must kindly take note of that position. Sir, I am suggesting to you in this connection, why not propose tax on urban buildings ? You are quite at liberty.

Mr. Deputy Speaker.—His time is up. He may please wind up.

Sri B. G. Khot.—Tax on mines and minerals you can raise. You can have tax on advertisements ; tax on professions and trades and also tax on capitation which is a very important and easy source. You have family as unit and levy tax. Leave alone the lower strata of society ; at the top, if you can have a family as a unit, you will have the tax.

Sri C. M. Arumugham.—Sir, I see there is some mutual understanding between Mr. Khot and the Finance Minister and therefore, he is able to follow my friend. I am not able to understand him.

Sri B. G. Khot.—Whether it suits the Finance Minister or not, I do not know. What I feel, I am saying. Natural resources also may be increased. There is ample scope. You are free to re-afforest huge forest areas and be that also, you can get money.

Sri T. Mariappa.—In fact, they are giving us very good income. The forest income has been incresing every year.

Sri B. G. Khot.—And before you think of levying new taxes, I suggest that economy should first be effected.

Sri T. Mariappa.—Perfectly right.

Mr. Deputy Speaker.—His time is over. He must conclude.

Sri B. G. Khot.—I am concluding Sir. Economy should be effected first. I do not know how far the Gorwala report is implemented. Even if it is implemented, to want extent it is implemented, I do not know. I do not know what this resource and economy committee is doing and whether it is necessary. I think without implementing the suggestions of the Gorwala report; it is quite unnecessary expenditure for us to have the Economy and Resource Committee. My suggestion is therefore that economy should be introduced effectively and then only you will have a right to tax further. Till then, the Economy and Resource Committee should be suspended.

Coming to small savings, we say that we should save something and contribute towards small savings. But when there is already inflation, how can we save ?

Mr. Depaty Speaker.—Is he continuing his speech or concluding ?

Sri B. G. Khot.—I am concluding. My only request is that much of my time was taken by you and so, I may be given more time.

Mr. Deputy Speaker.—He has taken more than the allotted time. He must adhere to the time-limit.

Sri B. G. Khot.—I am helpless because you have taken much of my time.

MR. DEPUTY SPEAKER.—He should not argue like that. He has already taken more time. Let him conclude.

Sri B. G. KHOT.—With these remarks, I conclude.

MR. DEPUTY SPEAKER.—The House will now rise and meet after half-an-hour.

The House adjourned for recess at Five Minutes Past Three of the Clock and re-assembled at Forty Minutes Past Three of the Clock.

[MR. DEPUTY SPEAKER (in the Chair)].

† ಶ್ರೀ ಪಿ. ಬಿ. ಸಿದ್ಧಾಂತಿ (ಮುದ್ದೇಬಿಹಾಳ್).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಹಣಕಾಸಿನ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ಈಗ ನಮ್ಮ ಆರ್ಥಿಕ ಸಚಿವರು ಸಭೆಯ ಮುಂದೆ ಖೋತಾ ಬಡ್ಜೆಟ್ಟನ್ನಿಟ್ಟಿದ್ದಾರೆ. ನಾವು ಹೀಗಿದ್ದರೂ ನಮ್ಮ ನಮ್ಮ ಚುನಾವಣೆ ಕ್ಷೇತ್ರಗಳಲ್ಲಿ ಈ ಹಣವನ್ನು ವಸೂಲ್ ಮಾಡಲೇಬೇಕಾಗಿದೆ. ಹೀಗೆ ತೆರಿಗೆ ಹಾಕಿರತಕ್ಕ, ಅದರಲ್ಲೂ ಇಂಥ ಚುನಾವಣೆ ಬರತಕ್ಕ ಕಾಲದಲ್ಲಿ, ಏನು ತೋರಿಸುತ್ತಿದೆಯೆಂದರೆ ನಮ್ಮ ಮಂತ್ರಿಗಳ ಧೈರ್ಯವನ್ನು ತೋರಿಸುತ್ತೆ. ಆದರೆ ಇದಕ್ಕೆ ವಿರೋಧಪಕ್ಷದವರು ಪ್ರತಿಭಟಿಸುವುದು ಏನು ತೋರಿಸುತ್ತೆ ಎಂದರೆ ಅವರ ಅಂಜುಬುರುಕತನವನ್ನು ಅದು ಸೂಚಿಸುತ್ತದೆ. ಪ್ರಾರಂಭದಲ್ಲಿ ಇಷ್ಟು ಒಂದು ಪ್ರಸ್ತಾಪನೆ ಸಂಬಂಧವನ್ನು ಹೇಳಿ ನಾನಿನ್ನು ಯಾವ ಯಾವ ಇಲಾಖೆಯ ಬಗ್ಗೆ ಏನೇನು ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೋ ಅವುಗಳನ್ನೀಗ ನಾನು ಹೇಳಬಯಸುತ್ತೇನೆ.

ಇಲ್ಲಿಗೆ ಮೂರು ವರ್ಷಗಳ ಕೆಳಗೊಮ್ಮೆ ಪೋಲೀಸ್ ಇಲಾಖೆಯನ್ನು ರೀ-ಆರ್ಗನೈಜೇಷನ್ ಮಾಡಿದರು. ಆಗ ಸರ್ಕಾರದವರೇನು ರೀ-ಆರ್ಗನೈಜೇಷನ್ ಮಾಡಿದರು ಅಂತ ಕೇಳಿದರೆ ಪೋಲೀಸ್ ಸಿಪಾಯರನ್ನು ಕಡಿಮೆ ಮಾಡಿದ್ದೇ ಆ ರೀ-ಆರ್ಗನೈಜೇಷನ್. ಆದರೆ ಇನ್ನೊಂದು ಕಡೆ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿದರು. ಆದರೆ ಸರ್ಕಾರಕ್ಕೆ ಅಲ್ಪಸ್ವಲ್ಪ ಉಳಿತಾಯವಾಗಿದ್ದರೂ ಆಗಿರಬಹುದು. ಆದರೆ ಆ ಅಲ್ಪ ಉಳಿತಾಯಕ್ಕಾಗಿ ಅಪಾರ ಮಂದಿ ಪೋಲೀಸ್ ಸಿಪಾಯಿಗಳನ್ನು ಕಡಿಮೆಮಾಡಲಾಗಿದೆ. ಹಾಗೇ ಇದರ ಜೊತೆಯಲ್ಲಿ ಪೋಲೀಸ್ ಔಟ್‌ಪೋಸ್ಟುಗಳನ್ನೂ ಸಹ ಕಡಿಮೆ ಮಾಡಲಾಗಿದೆ. ಅನೇಕ ಕಡೆ ಈ ಔಟ್-ಪೋಸ್ಟುಗಳನ್ನು ತೆಗೆದುಹಾಕಿದ್ದಾರೆ. ಷಹರುಗಳಲ್ಲಿ ಚೌಕಿಗಳನ್ನು ತೆಗೆದುಹಾಕಿದ್ದಾರೆ. ಇದರಿಂದ ಈ ದಿವಸ ಏನಾಗಿದೆ ಎಂದರೆ ಹಳ್ಳಿಗಾಡುಗಳಲ್ಲೂ ಷಹರಗಳಲ್ಲೂ ಅನೇಕ ದುಷ್ಪರಿಣಾಮಗಳುಂಟಾಗಿದೆ. ಪುಂಡುಜನರು ಅಲ್ಲೆಲ್ಲ ಪೂರಾ ತುಡುಗು ಮಾಡಲಿಕ್ಕೆ ಹತ್ಯಾದಾರೆ, ಚೌಕಿಗಳು ಇದ್ದಾಗ ಆಗ ಎಷ್ಟು ತುಡುಗುಗಳಾಗಲಿಕ್ಕೆ ಹತ್ತಿದ್ದವೋ ಈಗ ಅದಕ್ಕೆ ಹತ್ತರಷ್ಟು ಜಾಸ್ತಿಯಾಗಲಿಕ್ಕೆ ಹತ್ಯಾವೆ. ಆದಾಗ್ಗೂ ಪೋಲೀಸ್ ಶಿಪಾಯರ ಸಂಖ್ಯೆ ಇಷ್ಟೇ ಸಾಕೆಂದು ಹೇಳುತ್ತಿದ್ದಾರೆ. ಕೆಲವು ಕೆಲಸ ವಿಲ್ಲದ ಮಂದಿ ಕೋಣೆಯಲ್ಲಿ ಕೂತು ಯಾವಾಗಲೂ ಚಹಾ ಕುಡಿದುಕೊಂಡು ತಮ್ಮತಮ್ಮ ವಾರ್ಡ ಗಳಲ್ಲಿ ಹಾಗೇ ಅಡ್ಡಾಡುತ್ತಿದ್ದಾರೆ. ಸಿನೇಮ, ಇತ್ಯಾದಿಗಳಿಗೆ ಇವರು ಹೋಗಿ ಅಲ್ಲಿ ನಡೆಯತಕ್ಕದ್ದನ್ನೆಲ್ಲ ನೋಡಿಕೊಂಡು ಅದರಂತೆಯೇ ಈ ಜನರು ತಮ್ಮ ತಮ್ಮ ವಾರ್ಡದಲ್ಲಿ ಲಗು-ಬಗಿ ಹೇಗೆ ಬರುತ್ತೆ ಅನ್ನುವುದನ್ನು ನೋಡಿಕೊಂಡು ಮನೆ ಒಳಗೆ ನುಗ್ಗಿ ಬೇಕಾದಹಾಗೆಲ್ಲ ತುಡುಗು ಮಾಡಿಕೊಂಡು ಹೋಗುತ್ತಿದ್ದಾರೆ. ನಾವು ಸ್ಥಳೀಯ ಪೋಲೀಸ್ ಅಧಿಕಾರಿಗಳಿಗೆ ದೂರು ಒಯ್ದರೆ ಅವರು ನಾವೇನು ಮಾಡೋಣ ? ನಮ್ಮಲ್ಲಿ ಸಾಕಷ್ಟು ಚೌಕಿಗಳಿಲ್ಲ, ಶಿಪಾಯಿಗಳಿಲ್ಲ, ಸಾಕಷ್ಟು ಔಟ್-ಪೋಸ್ಟುಗಳಿಲ್ಲ, ನಮ್ಮ ಕೈಲೇನಿದೆ, ಎಲ್ಲಾ ಸರ್ಕಾರದವರು ಮಾಡಿದ್ದಾರೆ.

(ಶ್ರೀ ಪಿ. ಜಿ. ಸಿದ್ಧಾಂತಿ)

ಎಂತ ಅವರು ಹೇಳುತ್ತಿದ್ದಾರೆ. ಈಗ ನಾನು ಹೇಳುತ್ತಿರುವ ತೊಂದರೆ ಕೇವಲ ನಮ್ಮ ಒಂದು ಜಿಲ್ಲೆಯಲ್ಲಿರತಕ್ಕ ವಿಚಾರವಲ್ಲ. ಹುಬ್ಬಳ್ಳಿ, ಬೆಳಗಾಂ ಈ ಎಲ್ಲ ಕಡೆಗಳಲ್ಲೂ ಇದೇ ಸ್ಥಿತಿ ಇದೆ. ಈ ಕಾರಣಗಳಿಂದ ಸರ್ಕಾರದವರು ಈಗಿರತಕ್ಕ ಹುಕುಂ ತೆಗೆದುಹಾಕಿ ಹಿಂದೆ ಇದ್ದಹಾಗೇ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಸರ್ಕಾರಕ್ಕೆ ಸ್ವಲ್ಪ ಹೆಚ್ಚಿಗೆ ಖರ್ಚುಗಳು ಬರ ಬಹುದು. ಆದರೆ ಹಿಂದೆ ನಾವು ಮುಂಬೈ ಸರ್ಕಾರದಲ್ಲಿದ್ದಾಗ ಮೂರು ಕೋಟಿ ಜನರ ಯೋಗಕ್ಷೇಮದ ಬಗ್ಗೆ ಪೋಲೀಸ್ ಖಾತೆಗೆ ಒಂಭತ್ತು ಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತು. ಆದುದರಿಂದ ನಾವೀಗ ಇಲ್ಲಿ ಈ ಇಲಾಖೆಗೆ ಖರ್ಚು ಮಾಡುತ್ತಿರುವುದೇನೂ ಜಾಸ್ತಿಯಲ್ಲ. ಪೋಲೀಸ್ ಶಿಪಾಯಿಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಹಳೇ ಮೈಸೂರು ಏರಿಯಾಕ್ಕೂ-ಹೊಸ ಮೈಸೂರು ಏರಿಯಾಕ್ಕೂ ಕೆಲವು ವಿಚಾರಗಳಲ್ಲಿ ಬಹಳ ಏರುಪೇರುಗಳಿವೆ. ಇಲ್ಲಿಯ ಜಿಲ್ಲೆಗಳು ಪೂರಾ ಚಿಕ್ಕವು. ಇಲ್ಲಿ ಸಾಮಾನ್ಯವಾಗಿ ಸೆಷನ್ ಕೋರ್ಟುಗಳಲ್ಲಿ ಕೇಸುಗಳು ಅಷ್ಟೇನೂ ಬಾಕಿ ಇರುವುದಿಲ್ಲ. ಈ ಕಡೆ ಎರಡು-ಮೂರು ಜಿಲ್ಲೆ ಗಳಿಗೊಂದು ಸೆಷನ್ ಕೋರ್ಟು ಇರುತ್ತೆ. ನಮ್ಮಲ್ಲಿ ಒಂದೊಂದು ಜಿಲ್ಲೆಗೆ 2-3 ಸೆಷನ್ ಕೋರ್ಟು ಗಳಿದ್ದರೂ ಸಾಲದು. ಅಲ್ಲಿ ವರ್ಷಂಪ್ರತಿ 80-90 ಕೇಸುಗಳು ಬಾಕಿ ನಿಲ್ಲುತ್ತವೆ. ಖೂನಿ ಮತ್ತು ಇತರ ದೊಡ್ಡ ದೊಡ್ಡ ಖಟ್ಲೆಗಳೆಲ್ಲ ಬೇಗ ತೀರ್ಮಾನವಾಗುವಂತೆಯೇ ಇಲ್ಲ. ಈಗ ಈ ಕೇಸುಗಳು ಲಗೂ ಮುಗಿವಂತೆ ಏನಾದರೂ ವ್ಯವಸ್ಥೆ ಮಾಡಿ ಎಂತ ಕೇಳಬೇಕಾದ ಅಗತ್ಯ ಒದಗಿದೆ. ನಾವು ಈ ಬಾಬಿಗೀಗ ಖರ್ಚು ಮಾಡುತ್ತಿರುವ ಹಣ ಏನೇನೂ ಸಾಲದು. ಇದನ್ನು ಜಾಸ್ತಿ ಮಾಡಲೇ ಬೇಕಾಗಿದೆ. ಯಾವುದು ಏನೇ ಆಗಲಿ, ಒಟ್ಟಿನಲ್ಲಿ ದೇಶದಲ್ಲಿ ಪ್ರಥಮಃ ಲಾ ಅಂಡ್ ಆರ್ಡರು ಇದ್ದೇ ತೀರಬೇಕು. ದೇಶದಲ್ಲಿರತಕ್ಕ ಜನರನ್ನು ಸುರಕ್ಷಿತವಾಗಿಡತಕ್ಕ ಜವಾಬ್ದಾರಿ ಸರ್ಕಾರದವರ ಮೇಲಿದೆ. ಇದು ಅವರ ಆಧ್ಯ ಕರ್ತವ್ಯ. ಈ ಎಲ್ಲ ಕಾರಣರಗಳಿಂದ ನಾನು ಆ ಚಾಕಿಗಳನ್ನು-ಶಿಪಾಯಿಗಳನ್ನು ಜಾಸ್ತಿ ಮಾಡಲೇಬೇಕೆಂದು ಕುತೊತ್ತಮ್ಮೆ ಕೇಳಿಕೊಳ್ಳುತ್ತೇನೆ.

ಇನ್ನು ಮೊನ್ನೆತಾನೆ ರಿವೈಜ್ ಮಾಡಿದ ಸಂಬಳ ಸಾರಿಗೆಗಳ ವಿಚಾರಕ್ಕೆ ಬಂದರೆ-III ಕ್ಲಾಸ್ ನಾಕರರಿಗೆ ಸಾಮಾನ್ಯವಾಗಿ ಪಗಾರವನ್ನೀಗ ಜಾಸ್ತಿ ಮಾಡಿದ್ದೇವೆಂದು ಸರ್ಕಾದವರು ಹೇಳುತ್ತಿದ್ದಾರೆ. ಆದರೆ ಇವರನ್ನು ಆಯಾಯ ಜಿಲ್ಲಾಮಟ್ಟದಲ್ಲೇ ನಾಕರಿಗೆ ತೆಗೆದುಕೊಳ್ಳ ಬೇಕು. ಈ ರೀತಿ ಸರ್ಕಾರದವರೊಂದು ವ್ಯವಸ್ಥೆ ಮಾಡಿಕೊಡಬೇಕು. ಈ ಮೂರನೇ ದರ್ಜೆ ನಾಕರರೂ—ಶಾಲಾ ಮಾಸ್ತರುಗಳೂ ಬೆಂಗಳೂರಿಗೆ ನಾಕರಿ ಹುಡುಕಿಕೊಂಡು ಈ P. S. C. ಗೆ ಬರಬೇಕೆಂದರೆ ಇದು ಸಾಧ್ಯವಿಲ್ಲ. ಅವರು ಇಲ್ಲಿಗೆ ಬರುವುದು ತ್ರಾಸಾಗುತ್ತೆ ಆದ್ದರಿಂದ ಇಲ್ಲಿಗೆ ಅವರು ಬರುವುದು ಬೇಡ, ಇವರನ್ನು ಆಯಾಯಾ ಜಿಲ್ಲಾ ಮಟ್ಟದಲ್ಲೇ ನೇಮಿಸಿಕೊಳ್ಳುವ ಹಾಗೆ ಮಾಡಿದರೆ ಒಳ್ಳೆಯದು. ಈ ಕನ್ನಡ ಸಾಲೆ ಮಾಸ್ತರುಗಳನ್ನು ಮುಂಜಾನೆಗೆ ಹೋಗಿ ಸಂಜೆಗೆ ಸಾಲೆ ಮುಗಿಸಿಕೊಂಡು ಅಡ್ಡಾಡಿಕೊಂಡು ಬರುವುದಕ್ಕೆ ಅವಕಾಶವಿರುವಂತೆ ಮಾಡಿಕೊಡಿ. ಆದರೆ ಈ ತೆರನಾದ ಅನುಕೂಲತೆಯನ್ನು ಸರ್ಕಾರದವರು ತತ್ರಾಪಿ ಹೊಸ--ಮೈಸೂರು ಪ್ರದೇಶ ಗಳಾದ ಮದ್ರಾಸ್, ಹೈದ್ರಾಬಾದ್ ಮತ್ತು ಮುಂಬೈ ಕರ್ಣಾಟಕ ಪ್ರದೇಶಗಳಿಗೆ ಕಡ್ಡಾಯ ವಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವರಿಗೆ ಈ ಬೆಂಗಳೂರಿಗೆ P. S. C. ಆಫೀಸಿಗೆ ಅಡ್ಡಾಡೋ ಕೆಲಸ ಮಾತ್ರ ಹಚ್ಚಬೇಡಿ. ಇನ್ನುಳಿದ ಈ ಒಂದು ಮತ್ತು ಎರಡನೇ ದರ್ಜೆ ನಾಕರರನ್ನು ಆ P. S. C. ವ್ಯಾಪ್ತಿಗೆ ಒಳಮಾಡಿದರೂ ಮಾಡಿ. ಆದರೆ ಈಗ P. S. C.ನಲ್ಲಿ ಕೇವಲ ಮೂರು ಜನ ಮಾತ್ರ ಮೆಂಬರುಗಳಿದ್ದರೆ ಕೆಲಸ ಬಹಳ ನಿಧಾನವಾಗುತ್ತದೆ. ಅದಕ್ಕಾಗಿ ಈ ಕಮೀಷನ್ನಿನ ಸಂಖ್ಯೆಯನ್ನು ಹೆಚ್ಚಿಸಲು ಇದಕ್ಕೆ ಇನ್ನಿಬ್ಬರನ್ನಾದರೂ ಸೇರಿಸಲೇಬೇಕು. ಹೀಗಾದರೆ ಈ ಕಮೀಷನ್ನಿನ ಕೆಲಸ ಸುಲಲಿತವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಸ್ವಲ್ಪ ಹಣ ಜಾಸ್ತಿ ಆದರೂ ಚಿಂತೆಯಿಲ್ಲ. ಇದಕ್ಕೆ ನಾಲ್ಕು ಲಕ್ಷ ಖರ್ಚು ಹೆಚ್ಚಾದರೆ ಪರವಾಯಿಲ್ಲ.

ಈಗ ನಾನು ಮತ್ತೊಂದು ಬಹು ಮುಖ್ಯವಾದ ಅಂಶವನ್ನು ಈಗಲೇ ಸರ್ಕಾರದವರ ಗಮನಕ್ಕೆ ತರಲಚ್ಛಿಸುತ್ತೇನೆ. ಇದು ನನ್ನ ಒಂದು ವಿನಂತಿ. ಈ ನಾಲ್ಕನೇ ವರ್ಗದ ಶಿಬ್ಬಂದಿಯನ್ನು ಇತ್ತೀಚೆಗೆ ಬಹಳ ಕಡಮೆ ಮಾಡಲಾಗಿದೆ. 1957ರಲ್ಲೇ ನಮ್ಮ ಭಾಗ ಮುಂಬೈ ಸರ್ಕಾರಕ್ಕೆ ಸೇರಿದ್ದಾಗ ಆಗಲೇ ಅಲ್ಲಿ ಈ ಸಿಬ್ಬಂದಿ ವರ್ಗವನ್ನು ಬಹಳ ಕಡಮೆ ಮಾಡಲಾಗಿತ್ತು, ಆದರೆ ಈಗ ಆದರಮೇಲೆ ಮೊನ್ನೆ ಮೊನ್ನೆ ಈ ಸರ್ಕಾರ ಇನ್ನೊಂದು ಹುಕುಂ ಹೊರಡಿಸಿ ಜಿಲ್ಲಾಧಿಕಾರಿಗಳಿಗೂ ಮತ್ತು ಅಸಿಸ್ಟೆಂಟ್ ಕಮೀಷನರಿಗೂ ಈ ನಾಲ್ಕನೇ ವರ್ಗದ ಸಿಬ್ಬಂದಿಯನ್ನು ಮತ್ತಷ್ಟು ಕಡಮೆ ಮಾಡಿದ್ದಾರೆ. ಹೀಗಾಗಿ ಈ ಅಧಿಕಾರಿಗಳು ಹೊರಗಡೆ ಟೂರ್ ಹೋದಾಗ ಅವರ ಸಂಗಡ ಈ ನಾಲ್ಕನೇ ವರ್ಗದ ಸಿಬ್ಬಂದಿಯನ್ನು ಕರೆದುಕೊಂಡು ಹೋಗಬಾರದೆಂದು ಹುಕುಂ ಮಾಡಿದ್ದಾರಂತೆ. ಇದು ಬಹಳ ವಿಚಿತ್ರವಾಗಿದೆ. ಈ ದಿವಸ ಒಬ್ಬ ಜಿಲ್ಲಾಧಿಕಾರಿಯಾಗಲೀ, ಅಸಿಸ್ಟೆಂಟ್ ಕಮೀಷನರಾಗಲೀ ಒಬ್ಬ ಕ್ಲಾಸ್ ಫೋರ್ ಸರ್ವೆಂಟನ್ನು ತಮ್ಮ ಸಂಗಡ ಗ್ರಾಮಾಂತರ ಪ್ರವಾಸ ಕಾಲದಲ್ಲಿ ಕರೆದುಕೊಂಡು ಹೋಗದಿದ್ದರೆ ಹಳ್ಳಿಯ ಜನರು ಈ ಅಧಿಕಾರಿಗಳನ್ನು ಪತ್ತೆ ಹಚ್ಚುವುದೇ ಕಷ್ಟವಾಗುತ್ತದೆ. ಅನೇಕರು ಇವರನ್ನು ಯಾವುದೋ ಕಂಪನಿಯ ಏಜೆಂಟರೆಂತ ಅವರು ತಿಳಿಯುತ್ತಾರೆ ; ಹಳ್ಳಿ ಜನಗಳ್ಯಾರೂ ಇವರ ಹತ್ತಿರ ಬರುವುದೇ ಇಲ್ಲ. ಇವರೇನಾದರೂ ಜನರಿಗೆ ಹೇಳುವುದಕ್ಕೆ ಹೋದರೆ ಅವರು ಇವರ ಮಾತುಗಳನ್ನೂ ಕೂಡ ಕೇಳುವುದಿಲ್ಲ. ಇಂಥ ವಿಚಿತ್ರ ಪರಿಸ್ಥಿತಿ ಆಗಬಾರದೆಂದಿದ್ದರೆ ಅವರಿಗೆ ಈ ನಾಲ್ಕನೇ ವರ್ಗದ ಶಿಬ್ಬಂದಿಯನ್ನು ಸ್ವಲ್ಪ ಹೆಚ್ಚಿಸಬೇಕಾದ ಅಗತ್ಯವಿದೆ. ಆದರೆ ಸರ್ಕಾರದವರೇನಾದರೂ ಈ ಶಿಬ್ಬಂದಿಯನ್ನು ಹೆಚ್ಚು ಮಾಡದೆ ಹೋದಲ್ಲಿ ಮುಂದೆ ಇದರಿಂದ ಇನ್ನೂ ದುಷ್ಪರಿಣಾಮಗಳಾಗಬಹುದೆಂದು ಹೇಳುತ್ತೇನೆ. ಆದರೆ ಸರ್ಕಾರದವರು ಇಂಥ ವಿಚಾರದಲ್ಲಿ ಸ್ವಲ್ಪ ವಿವೇಚನೆ ಮಾಡಿನೋಡಬೇಕು. ಈ ದಿವಸ ನಮ್ಮ ಬಿಜಾಪುರದಲ್ಲಿ ಕೇವಲ ಇನ್‌ಕಂಟ್ಯಾಕ್ಸ್ ವಸೂಲಿಗಾಗಿ ಒಬ್ಬ ಅಸಿಸ್ಟೆಂಟ್ ಕಮೀಷನರನ್ನು ನೇಮಕ ಮಾಡಿದ್ದಾರೆ. ಆದರೆ ನಾವು ಈ ಪೋಸ್ಟ್ ಅನಗತ್ಯ. ಡಿ. ಸಿ.ಗೆ ಒಬ್ಬ ಪರ್ಸನಲ್ ಅಸಿಸ್ಟೆಂಟನ್ನು-ಹೆಡ್-ಕ್ವಾರ್ಟರ್ ಅಸಿಸ್ಟೆಂಟ್ ಎಂತ ನೇಮಕ ಮಾಡಿಕೊಡಿ ಎಂದರೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಯಾವುದನ್ನು ನಾವು ಕೇಳುತ್ತೇವೋ ಅದಿಲ್ಲ. ನಾವು ಯಾವುದನ್ನು ಬೇಡವೆನ್ನುತ್ತೇವೋ ಅದನ್ನು ಜರೂರು ಮಾಡುತ್ತಿದ್ದಾರೆ ಅಲ್ಲ ಈಗ ಒಬ್ಬ ಒಳ್ಳೆ ತಹಶೀಲ್‌ದಾರ್ ಅಥವ ಕಮೀಷನರು ಜಾಸ್ತಿ ಇದ್ದಾರೆ. ಬಾಗೇವಾಡಿ, ಮುದ್ದೇಬಿಹಾಳ್ ತಾಲ್ಲೂಕುಗಳನ್ನು ಸೇರಿಸಿ ಒಂದು ಡಿವಿಜನ್ ಮಾಡಿ ಅದಕ್ಕೆ ಒಬ್ಬ ತಹಶೀಲದಾರರ ನೇಮಕ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರ್ ಬೇರೆ ಇನ್‌ಕಂಟ್ಯಾಕ್ಸ್ ಕಮೀಷನರ್ ಬೇರೆ ಇಡುವುದು ಜರೂರಿಲ್ಲ. ಅಸಿಸ್ಟೆಂಟ್ ಕಮೀಷನರ್ ಅವರಿಗೆ ಈ ಕೆಲಸ ಕೊಟ್ಟರೆ ಸಾಕು. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರ್ ಆಗಿ ಹೊಸಬರು ಬರುತ್ತಾರೆ. ಅವರಿಗೆ ನಮ್ಮ ಪ್ರದೇಶದಲ್ಲಿಯ ಅನುಭವ ಇರುವದಿಲ್ಲ. ಅವರಿಗೆ ಏನೂ ಗೊತ್ತಿರುವದಿಲ್ಲ. ಇದರಿಂದ ತೊಂದರೆಯಾಗುತ್ತದೆ. ಇದನ್ನು ನಿವಾರಣೆ ಮಾಡಬೇಕಾದುದು ಅಗತ್ಯ. ಇನ್ನೂ Third class servants ಕಡಿಮೆ ಮಾಡಬೇಡಿ ಎಂದು ಹೇಳುತ್ತೇನೆ. ಅಂಥವರನ್ನು ಸರಕಾರಿ ಕೆಲಸಕ್ಕೆ ಇಟ್ಟು ಕೊಳ್ಳಬೇಕು. ಇದರ ಬಗ್ಗೆ ತಪ್ಪುಭಾವನೆ ಮಾಡಿಕೊಳ್ಳಬಾರದು. ನಮ್ಮ ವಿಜಾಪುರ ಜಿಲ್ಲೆಯ ಬಗ್ಗೆ ನಾನು ಹೇಳುತ್ತಿದ್ದೇನೆ.

ಇನ್ನೊಂದು ವಿಷಯ. ಮೈದಾನ ಪ್ರದೇಶದಲ್ಲಿ ಎಲ್ಲೆಲ್ಲ ನೀರಿನ ಅಭಾವವಿದೆಯೋ ಅಲ್ಲಿ ಬಾವಿ ತೆಗೆಯಿಸಬೇಕು. ಇಂಥ ಬಾವಿ ತೆಗೆಯಿಸುವ ಯೋಜನೆಗೆ 500 ರೂ ಸಬ್‌ಸಿಡಿ ಕೊಡಬೇಕೆಂದು ಇದೆ. ಇದು ಕಡಿಮೆಯಾಗುತ್ತದೆ. 750 ರೂಪಾಯಿ ಹಣ ಒದಗಿಸಬೇಕು ಎಂದು ನನ್ನ ಸೂಚನೆ. ಈ ಯೋಜನೆಗೆ ಭಾರತ ಸರಕಾರ ಹಣಸಹಾಯ ಕೊಡುತ್ತಾರೆ. ಅದಕ್ಕೆ ನಮ್ಮ ಸರಕಾರದವರೂ ಸಹ ಸಬ್‌ಸಿಡಿ ಸೇರಿಸಿ ಕೊಡುತ್ತೇವೆಂದು ಹೇಳಿದ್ದರೆ ಚೆನ್ನಾಗಿತ್ತು. ಸಬ್‌ಸಿಡಿ 500 ರೂ.ಗಿಂತ ಹೆಚ್ಚು ಮಾಡಿದರೆ ಇನ್ನೂ ಜಾಸ್ತಿ ಬಾವಿಗಳು ಆಗುತ್ತವೆ. ಅಭಾವ ಪ್ರದೇಶದಲ್ಲಿ ಒಂದು

(ಶ್ರೀ ಪಿ. ಜಿ. ಸಿದ್ಧಾಂತಿ)

ಬಾವಿ ತೆಗೆದರೆ ಉತ್ಪನ್ನ ಜಾಸ್ತಿಮಾಡಲು ಸಾಧ್ಯವಾಗುತ್ತದೆ. ಒಕ್ಕಲತನ ಹೆಚ್ಚಿಸಿದರೆ ನಿರುದ್ಯೋಗ ಪ್ರಶ್ನೆ ಬಿಡಿಸಿದಂತಾಗುತ್ತದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗೆ ಕೊಡುವ ಹಣ ಕಡಿಮೆ ಮಾಡಿ ಬಾವಿಗಳಿಗೆ ಹಣ ಒದಗಿಸಬೇಕು. ನಮ್ಮ ಪ್ರದೇಶದಲ್ಲಿ ಸಣ್ಣ ಸಣ್ಣ ಕೆರೆಗಳು ಆಗುವದಿಲ್ಲ. ಬಾವಿ ತೆಗೆಯಿಸುವುದು ಅಷ್ಟು ಸಾಧ್ಯವಿದೆ. ಬಾವಿಯ ಮೂಲಕ ನೀರಾವರಿ ಯೋಜನೆ ಮಾಡುವುದು ಅಭಾವ ಪ್ರದೇಶದಲ್ಲಿ ಬಹಳ ಅಗತ್ಯವಾಗಿದೆ. ಹೋದ ವರ್ಷ ಎರಡು ಕೋಟಿ ರೂಪಾಯಿ ಖರ್ಚಾಗಿದೆ. ಈ ವರ್ಷದ ಬಜೆಟ್ಟಿನಲ್ಲಿ ಈ ಯೋಜನೆಗಾಗಿ ಸಾಲ ಕೊಡಲಿಕ್ಕೆ ಮತ್ತು ಎರಡು ಕೋಟಿ 88 ಲಕ್ಷ ರೂಪಾಯಿ ಒದಗಿಸಲಾಗಿದೆ. ಇಷ್ಟೇ ಹಣ ಸಾಲದು. ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಕು. ಹೋದ ವರ್ಷ 15 ನೂರು ಭಾವಿಗಳ ಕೆಲಸ ಪ್ರಾರಂಭವಾದದ್ದು ಅಷ್ಟಕ್ಕೇನೇ ಬಿಟ್ಟಿದ್ದಾರೆ. ಈ ವರ್ಷ ಅವುಗಳನ್ನು ಪೂರ್ತಿ ಮಾಡಬೇಕಾಗಿದೆ ಆದ್ದರಿಂದ ಹೆಚ್ಚಿಗೆ ಸಾಲ ಕೊಡಬೇಕು. ಈ ಯೋಜನೆಗೆ ಜಾಸ್ತಿ ಸಾಲ ಕೊಟ್ಟರೆ ಬಹಳ ಉಪಕಾರವಾಗುತ್ತದೆ. ಇದರ ಬಗ್ಗೆ ಏನಾದರೂ ಮಾಡಿ. ಭಾರತ ಸರಕಾರದಿಂದ ಸಾಲವನ್ನಾದರೂ ತೆಗೆದುಕೊಂಡು ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಏಪ್ರಿಲ್-ಮೇ ತಿಂಗಳುಗಳಲ್ಲಿ ಅಂದರೆ ಬೇಸಿಗೆಯಲ್ಲಿ ಜನರಿಗೆ ಕೆಲಸವಿರುವದಿಲ್ಲ. ಈ ಅವಧಿಯಲ್ಲಿ ಬಾವಿ ತೆಗೆಯಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಬೇಸಿಗೆಕಾಲದಲ್ಲಿ ಸಾಲದ ಹಣಕೊಟ್ಟರೆ ಉಪಯೋಗವಾಗುತ್ತದೆ. ಆದರೆ ಈ ಕೆಲಸ ಹೇಗೆ ನಡೆಯುತ್ತಿದೆ ಎಂದರೆ ಅಕ್ಟೋಬರ್ ತಿಂಗಳಿನಲ್ಲಿ ಸಾಲ ಒದಗಿಸುವ ಬಗ್ಗೆ ಪ್ರಚಾರ ಮಾಡಲಾಗುತ್ತದೆ. ಸುಮಾರು 4 ಸಾವಿರ ಅರ್ಜಿಗಳನ್ನು ಕಳಿಸಲಾಗಿತ್ತು ಅವುಗಳಲ್ಲಿ ಎರಡು ಸಾವಿರ ಅರ್ಜಿಗಳು ಸಕಾಲದಲ್ಲಿ ಬಂದಿರಲಿಲ್ಲವೆಂದು ತಿಳಿದುಬಂದಿದೆ. ಪುನಃ ಅರ್ಜಿ ಹಾಕುವದಕ್ಕೆ ವೇಳೆ ಇರುವದಿಲ್ಲ. ಈ ರೀತಿ ಜನರಿಗೆ ಅನನುಕೂಲ ಮಾಡದೆ ಬಂದಿರುವ 4 ಸಾವಿರ ಅರ್ಜಿಗಳಿಗೆಲ್ಲ ಬಾವಿ ತೆಗೆಯಿಸಲಿಕ್ಕೆ ಸಬ್‌ಸಿಡಿ ಕೊಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

[Mr. SPEEKER. in the Chair]

ಇನ್ನು ಸಣ್ಣ ಸಣ್ಣ ಕೆರೆಗಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಒಂದೊಂದು N.E.S. Blockಗೆ ಒಂದು P.W.D. Sub Division ಕನಿಷ್ಟ ಪಕ್ಷಕ್ಕೆ ತೆರೆಯಬೇಕು. ಅಂದರೆ ಪರಿಶೀಲನೆ ಮಾಡಲು ಅನುಕೂಲವಾಗುವುದು. ನಾನು ಸೂಚಿಸಿದ ಪ್ರಕಾರ ಒಂದು P.W.D. Sub Division ಸ್ಥಾಪನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ರೀತಿ ಸೂಚನೆ ಮಾಡುವುದು ನನ್ನ ಕರ್ತವ್ಯವಾಗಿದೆ. ಆದ್ದರಿಂದ ಈ ವಿಷಯ ಸರಕಾರದ ಗಮನಕ್ಕೆ ತರುತ್ತೇನೆ.

4-00 P.M.

ಬಿಜಾಪುರದೊಳಗೆ ಒಬ್ಬ ಸಿವಿಲ್ ಸರ್ಜನ್ ಇರುತ್ತಾರೆ. ಇವರಿಗೆ ಶಸ್ತ್ರಚಿಕಿತ್ಸೆ ಬರುವುದಿಲ್ಲ. ಬಿಜಾಪುರದಲ್ಲಿ ಯಾರಿಗಾದರೂ ಶಸ್ತ್ರಕ್ರಿಯೆ ನಡೆಯಬೇಕಾದರೆ ಅಲ್ಲಿ ಖಾಸಗಿ ಸರ್ಜನ್‌ರೂ ಇಲ್ಲ, ಜಿಲ್ಲೆಯಲ್ಲಿಯೂ ಯಾರೂ ಇಲ್ಲ. ಎಲ್ಲರೂ ಸರ್ಕಾರಿ ದವಾಖಾನೆಗೆ ಹೋಗಬೇಕು. ಸರ್ಜರಿ ಗೊತ್ತಿಲ್ಲದವನಿಗೂ ಸಿವಿಲ್ ಸರ್ಜನ್ ಎಂದು ಹೆಸರಿಟ್ಟಿರುತ್ತಾರೆ. ಅವರಿಗೆ ಹೆಣ್ಣ ಕೊಯ್ಯುವುದಕ್ಕೆ ಬರುತ್ತದೆ. ಮನುಷ್ಯರನ್ನು ಕೊಯ್ಯುವುಕ್ಕೆ ಬರುವುದಿಲ್ಲ. ಅವರು ಪೋಸ್ಟ್‌ಮಾರ್ಟೆಮ್ ಮಾಡುತ್ತಾರೆ. ನಮಗೆ ಏನಾದರೂ ಜಡ್ಡು ಆಯಿತೆಂದರೆ ಮಹಾರಾಷ್ಟ್ರ ದೇಶಕ್ಕೆ ಹೋಗಬೇಕು, ಇಲ್ಲವೆ 130 ಮೈಲಿ ದೂರವಿರುವ ಹುಬ್ಬಳ್ಳಿಗೆ ಹೋಗಬೇಕು. ದಯವಿಟ್ಟು ಸರ್ಜರಿ ಬಲ್ಲವರನ್ನು F.R.C.S. ಆಗಿರುವವರನ್ನು ಸಿವಿಲ್‌ಸರ್ಜನ್ ಆಗಿ ಕಳಿಸಿಕೊಡಿರಿ.

ವಿದ್ಯಾಖಾತೆಯ ಮಂತ್ರಿಗಳಿಗೆ ಹೇಳುವುದೇನೆಂದರೆ ನಮ್ಮ ಜಿಲ್ಲೆ ವಿದ್ಯಾಭ್ಯಾಸದಲ್ಲಿ ಹಿಂದುಳಿದಿದೆ. ಪ್ರಾಥಮಿಕ ಶಾಲೆಯಲ್ಲಿ ಕಡ್ಡಾಯಶಿಕ್ಷಣವನ್ನು ಜಾರಿಗೆ ತರುತ್ತೀರಿ.

ಹೈಸ್ಕೂಲುಗಳೂ ಉಂಟು. ಅದರ ವಿಷಯವಾಗಿ ಮಾತನಾಡುವುದಿಲ್ಲ. Technical Educationನಲ್ಲಿ ನಮ್ಮ ಜಿಲ್ಲೆ ಬಹಳ ಹಿಂದುಳಿದಿದೆ. ಬಡಬಗ್ಗರಿರುವಕಡೆ technical education ಕೊಡಲಿಲ್ಲವೆಂದರೆ ಶುಭವಲ್ಲ. ನಮ್ಮ ಜಿಲ್ಲೆಯಲ್ಲಿ ಒಂದು ಪಾಲಿಟೆಕ್ನಿಕ್ ಮಾಡಿರಿ. ಮೂರನೆಯ ಯೋಜನೆಯಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜನ್ನು ಬೊಂಬಾಯಿ ಕರ್ನಾಟಕದೊಳಗೆ ಹಾಕಬೇಕೆಂದಿರುವುದಾಗಿ ಸರ್ಕಾರದವರು ಕೊಟ್ಟ ಪುಸ್ತಕದಿಂದ ಓದಿ ತಿಳಿದಿದ್ದೇನೆ. ಆ ಇಂಜಿನಿಯರಿಂಗ್ ಕಾಲೇಜನ್ನೂ ಬಿಜಾಪುರಕ್ಕೆ ಹಾಕಿರಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮಲ್ಲಿ ಉದ್ಯೋಗಗಳು ಯಾವುವೂ ಇಲ್ಲ. ಅಲ್ಲಿ ಒಂದು ಕೈಗಾರಿಕೆಯನ್ನು ಮಾಡುತ್ತೇವೆಂದು ಒಂದು Co-operative Spinning Mill ಮಾಡುತ್ತೇವೆಂದು ಹತ್ತು ಲಕ್ಷ ರೂಪಾಯಿ ಕೂಡಿಸಿ ಬ್ಯಾಂಕಿನಲ್ಲಿ ಹಾಕಿ ಇಟ್ಟಿದ್ದಾರೆ. ಹಣ ಕೊಟ್ಟಿದ್ದ ಜನರು ತಾವು ಕೊಟ್ಟ ರೂಪಾಯಿಗಳು ಏನಾದುವು ಎಂದು ಕೇಳಲಿಕ್ಕೆ ಹತ್ತಿದ್ದಾರೆ. ಈ mill ಸ್ಥಾಪನೆ ಮಾಡಲು ಕಾರ್ಯಕ್ರಮ ತೆಗೆದುಕೊಂಡು ಅದಕ್ಕೆ ಯಾರನ್ನು ಬೇಕಾದರೂ ನೇಮಿಸಿಕೊಳ್ಳಿ. ಒಂದು Spinning mill ಬೇಗನೆ ತೆಗೆದರೆ ಬರೋಬರಿಯಾಗುತ್ತದೆ. ಇಷ್ಟು ವಿಷಯವನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ.

ಘಂಟೆ ಬಡಿಯುವ ಮೊದಲೇ ಕೊಡಬೇಕೆಂದು ಬಯಸಿ, ಈ ಎಲ್ಲ ವಿಷಯಗಳನ್ನೂ ಮಾಡಿಕೊಡಿರಿ ಎಂದು ಸರ್ಕಾರಕ್ಕೆ ತಿಳಿಸಿ,' ಈಗ ನಮ್ಮ ಮುಂದಿರುವ ಅಂದಾಜು ಪಟ್ಟಿ ಏನಿದೆ ಅದಕ್ಕೆ ನನ್ನ ಸಮ್ಮತಿಯನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಯುಗಾದಿಯ ಉಡುಗೊರೆಯಾಗಿ ನಮ್ಮ ಅರ್ಥಿಕ ಮಂತ್ರಿಗಳು ಜನತೆಗೆ ಕೊಟ್ಟಿರುವ ಪ್ಲವನಾಮ ಸಂವತ್ಸರದ ರಾಷ್ಟ್ರೀಯ ಪಂಚಾಂಗ ಅಥವಾ ಆಯವ್ಯಯದ ವರದಿಯನ್ನು ಅಂಗೀಕರಿಸಬೇಕಾದ್ದು ರಾಜಕೀಯ ಕರ್ಮವಾಗಿದೆ. ಅನುಮೋದನೆ ನೀಡಬೇಕಾದ್ದು ನನ್ನ ಧರ್ಮವಾಗಿದೆ. ಹಿಂದಿನ ಆಯವ್ಯಯದ ವರದಿಗಿಂತಲೂ ಇಂದಿನದು ಕರಾರುವಾಕ್ಕಾಗಿರಬಹುದೆಂದು ಒಪ್ಪಿಕೊಳ್ಳಲು ಅಡ್ಡಿಯಿಲ್ಲ. ಅರ್ಥಿಕ ಮಂತ್ರಿಗಳು ಆಯವ್ಯಯದ ವರದಿಯಲ್ಲಿ ಹೀಗೆ ಹೇಳಿದ್ದಾರೆ:

> "......ಜಡವಾದ ಆರ್ಥಿಕ ಪರಿಸ್ಥಿತಿಯು, ಅಧಿಕ ಪ್ರಮಾಣದಲ್ಲಿ ಅಭಿವೃದ್ಧಿಗೆ ಬರುವುದರ ಪರಿಣಾಮವಾಗಿ ಉಂಟಾಗತಕ್ಕ ವಿಶೇಷ ಶ್ರಮದ ಒತ್ತಡವನ್ನು ಎದುರಿಸಬೇಕಾಗುವುದು. ಮುಂದೆ ಬರುವ ಪರಿಸ್ಥಿತಿಯು ಮತ್ತು ದುಸ್ತರವೂ ಹಾಗೂ ಜಟಿಲವೂ ಆದುದು........."

ಎಂದು ಹೇಳಿದ್ದಾರೆ. ಈರೀತಿ ಕರಾರುವಾಕ್ಕು ಭವಿತವ್ಯವನ್ನು ಹೇಳಿದ್ದಕ್ಕಾಗಿ ಅರ್ಥಿಕ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಇನ್ನು ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ದೇಶದ ಅರ್ಥಿಕ ಪರಿಸ್ಥಿತಿ ಜಡವಾಗುವುದೂ, ಮತ್ತು ಜಟಿಲವಾಗುವುದೂ ಸ್ವಾಭಾವಿಕವಾದರೂ ಕೂಡ ಆಡಳಿತ ಯಂತ್ರ ಸೂಕ್ಷ್ಮವೂ, ದೂರ ದೃಷ್ಟಿಯುಳ್ಳದ್ದೂ, ದಕ್ಷತೆಯುಳ್ಳದ್ದೂ ಆಗಿದ್ದರೆ, ಜಡವಾದ ಮತ್ತು ಜಟಿಲವಾದಂಥ ಸಮಸ್ಯೆಗಳನ್ನು ಸಾಧ್ಯವಾದಷ್ಟೂ ಪರಿಹರಿಸಿಕೊಳ್ಳಬಹುದು. ನಮ್ಮ ಸರ್ಕಾರ ಸೂಕ್ಷ್ಮತೆ, ದೂರದೃಷ್ಟಿ ಮತ್ತು ಆಡಳಿತ ದಕ್ಷತೆಯನ್ನು ಹೆಚ್ಚು ಹೆಚ್ಚು ಬೆಳಸಿಕೊಂಡರೆ ದೇಶದ ಆಯವ್ಯಯವನ್ನು ಸರಿದೂಗಿಸಬಹುದು. ಈ ಬಗ್ಗೆ ಸರ್ಕಾರಕ್ಕೆ ಪುಸ್ತಕ-ಪಾಂಡಿತ್ಯಕಿಂತಲೂ ವ್ಯವಹಾರ ಪಾಂಡಿತ್ಯ ಹೆಚ್ಚಾಗಿಬೇಕು. ಇಲ್ಲದೆಯಿದ್ದರೆ ಕಂಟಕಾರಿ ಕಷಾಯ ಕುಡಿದಂತಾಗುತ್ತದೆ. ಕಂಟಕಾರಿ ಕಷಾಯದ ಬಗ್ಗೆ ಒಂದು ಕಥೆ ಹೇಳುತ್ತಾರೆ. "ಒಬ್ಬ ಸಂಸ್ಕೃತ ಪಂಡಿತರಿದ್ದರು. ಅವರಾದರೂ ಘನವಿದ್ವಾಂಸರು. ಅವರಿಗೆ ಪುಸ್ತಕಪಾಂಡಿತ್ಯ ವಿತ್ತೇ ಹೊರತು ವ್ಯವಹಾರ ಪಾಂಡಿತ್ಯವಿರಲಿಲ್ಲ. ಒಂದು ದಿನ ಅವರಿಗೆ ದೇಹಾಲಸ್ಯವಾಯಿತು. ಒಬ್ಬ ವೈದ್ಯರಲ್ಲಿ ಹೋದರು. ವೈದ್ಯರು ಕಂಟಕಾರಿ ಕಷಾಯ ಕುಡಿಯಿರಿ, ಆರೋಗ್ಯ ಸರಿಹೋಗುತ್ತದೆಂದು ತಿಳಿಸಿದರು. ವಿದ್ವಾಂಸರಿಗೆ ಕಂಟಕಾರಿ ಎಂದರೆ ಗಿಡಮೂಲಿಕೆ ಎಂಬುದು ಅರ್ಥವಾಗಲಿಲ್ಲ. ಅವರು ಪದವಿಭಾಗ

(ಶ್ರೀಮತಿ ನಾಗರತ್ನಮ್ಮ ಹೀರೇಮಠ್)

ಮಾಡಿ ಸಂಸ್ಕೃತ ಶಬ್ದಗಳನ್ನು ಅರ್ಥಮಾಡಿದರು. ಕಂಟಕ ಎಂದರೆ ಮುಳ್ಳು-ಅರಿ ಎಂದರೆ ಶತ್ರು, ಎಂದರೆ ಮುಳ್ಳಿಗೆ ಶತ್ರು ಯಾವುದು? ಪಾದರಕ್ಷೆ ಎಂದು ಅರ್ಥಮಾಡಿಕೊಂಡು ಒಂದು ಹಳೆಯ ಪಾದರಕ್ಷೆಯನ್ನು ತೆಗೆದುಕೊಂಡು ಬೇಯಿಸಿ ಅದರ ಕಷಾಯ ಕುಡಿದರು. ರೋಗ ಮತ್ತೂ ಹೆಚ್ಚಿತು. ಪುನಃ ವೈದ್ಯರ ಹತ್ತಿರ ಹೋಗಿ ಗುಣವಾಗಲಿಲ್ಲವೆಂದು ಹೇಳಿದರು. ಹಾಗಾದರೆ ಲಂಘನ ಮಾಡಿ ಎಂದು ಅವರು ಹೇಳಿದರು. ಪಂಡಿತರು ಮನೆಗೆ ಬಂದು ಲಂಘನಮಾಡಿ ಎಂದರಲ್ಲ, ಲಂಘನ ವೆಂದರೆ ಏನು ಎಂದು ಯೋಚಿಸಿದರು. ಲಂಘನ ಎಂದರೆ ಉಪವಾಸ ಎಂಬುದು ವಿದ್ವಾಂಸರಿಗೆ ಗೊತ್ತಾಗಲಿಲ್ಲ. ಲಂಘನ ಎಂದರೆ ಹಾರುವುದು, ಜಿಗಿಯುವುದು ಎಂದು ತಿಳಿದುಕೊಂಡು ಊರಿನ ಮುಂದಿರುವ ಕಾಲುವೆ ಹತ್ತಿರ ಹೋಗಿ, ಹತ್ತಿಪ್ಪತ್ತು ಸಲ ಅದನ್ನು ಹಾರಿ, ಜಿಗಿದು ಮನೆಗೆ ಬಂದರು. ಕೇಳಬೇಕೇ! ರೋಗ ಹೆಚ್ಚಿತು. ಮತ್ತೆ ವೈದ್ಯರಲ್ಲಿಗೆ ಹೋದರು. ಆಗ ವೈದ್ಯರಿಗೆ ಸೋಜಿಗವಾಯಿತು. ನೀವು ಏನೇನು ಮಾಡಿದಿರಿ ಎಂಬುದನ್ನೆಲ್ಲ ಸರಿಯಾಗಿ ಹೇಳಿರಿ ಎಂದು ಪಂಡಿತರನ್ನು ಕೇಳಿದರು. ಹೀಗೆ ಹೀಗೆ ಮಾಡಿದೆ ಎಂದು ಹೇಳಿದರು. ನಿಮ್ಮ ಪರಿಜ್ಞಾನವಿಲ್ಲದ ವಿದ್ಯೆಗೆ ಬೆಂಕಿ ಹಚ್ಚಲಿ, ನಿನ್ನ ಪಾಂಡಿತ್ಯಕ್ಕೆ ಬೆಂಕಿ ಹಚ್ಚಲಿ, ಕಂಟಕಾರಿ ಎಂದರೆ ಒಂದು ಗಿಡದ ಮೂಲಿಕೆ. ನಿಮ್ಮ ಸಂಸ್ಕೃತ ಪಾಂಡಿತ್ಯದಿಂದ ಸಂಸ್ಕೃತ ಶಬ್ದಗಳನ್ನು ಬೇಯಿಸಿ ಕುಡಿದಿದ್ದೀರಿ. ಹಾಗೆ ಮಾಡಬಾರದಾಗಿತ್ತು ಎಂದು ಹೇಳಿ ತಾವೇ ಔಷಧಿ ಮಾಡಿಕೊಟ್ಟರು. ಆಗ ಅವರಿಗೆ ಗುಣವಾಯಿತು.'' ಹಾಗೆ ಈ ಪುಸ್ತಕಪಂಡಿತನಂತೆ ನಮ್ಮ ಸರ್ಕಾರದ ಆಡಳಿತಯಂತ್ರ ವಾದರೆ ವೈದ್ಯರನ್ನು ಹುಡುಕುವ ಪ್ರಜೆಗಳಿಗೆ ಬಹಳ ದೊಡ್ಡ ಸಮಸ್ಯೆಯಾಗುತ್ತದೆಂದು ನಾನು ಹೇಳುತ್ತಿದ್ದೇನೆ. ಈ ದೃಷ್ಟಾಂತ ಕೊಡಲಿಕ್ಕೆ ಇನ್ನೊಂದು ಕಾರಣವೂ ಇದೆ. ಆರ್ಥಿಕ ಮಂತ್ರಿಗಳ ಆಯವ್ಯಯ ಭಾಷಣದಲ್ಲಿ ಪಂಡಿತರಿಗೂ ಒಮ್ಮೊಮ್ಮೆ ಅರ್ಥವಾಗದ ಕಠಿಣ ಶಬ್ದಗಳಿವೆ. ಕೆಲವು ಶಬ್ದಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಮೊದಲನೇ ಪೇಜಿನಲ್ಲಿ ''ದೇಶದಲ್ಲಿ ಆದ್ಯಂತವಾಗಿ ಎಲ್ಲಾ ದಿಶೆಗಳಲ್ಲೂ'' ಎಂದಿದೆ. ಇದನ್ನು ದೇಶಾದ್ಯಂತ ಎಲ್ಲ ರೀತಿ-ನೀತಿಗಳಲ್ಲೂ ಎಂದಿದ್ದರೆ ಸಮಂಜಸವಿತ್ತು, ಇದೇ ಪೇಜಿನಲ್ಲಿ ''ವಿಸದೃಶವಾದ'' ಎಂದಿದೆ. ಎರಡನೇ ಪೇಜಿನಲ್ಲಿ ''ಕಾರ್ಯಸಿದ್ಧಿಗಳು ಉಲ್ಲಖಿತವಾಗಿವೆ, ಕಾರ್ಯಸಿದ್ಧಿಗಳ ಪಟ್ಟಿಯನ್ನು ಸಭೆಯ ಮೇಲೆ ಹೇರಬಯಸುವುದಿಲ್ಲ'' ಎಂದಿದೆ. ಹಾಗೇ ರೆವಿನ್ಯೂ ಆಧಿಕ್ಯ ಅವರ್ತಕ, ''ಸಲೀಸು ಗೊಳಿಸ ಬಹುದು,'' ''ಲೇಖಾನುದಾನ ಕೋರುತ್ತೇನೆ'', ''ಉಚ್ಚ ಅಗ್ರತೆ'', ''ಮೇಲ್ಪಾಟು ಅಂಶದಾನ'', ''ಪೂರ್ವೋಕ್ತ ಪರಮ ಮುಖ್ಯವಾದ ಮೂಲ'', ''ವಿತ್ತೀಯ ಆಯೋಗ (ಫೈನಾನ್ಸ್‌ಕಮಿಷನ್)'' ಇತ್ಯಾದಿ ಉಕ್ಕಿನ ಕಡಲೆಗಳಂತಹ ಶಬ್ದಗಳಿವೆ. ಈ ಶಬ್ದಗಳಿಗೆ ಬದಲಾಗಿ ಎಲ್ಲ ಜನಸಾಮಾನ್ಯರಿಗೂ ಅರ್ಥವಾಗುವ ಶಬ್ದಗಳನ್ನು ಹಾಕಬಹುದು. ಸರಕಾರದ ಭಾಷೆ ಪಂಡಿತ-ಪಾಮರರಿಗೂ ಅರ್ಥ ವಾಗುವಂತಿರಬೇಕು; ಇಲ್ಲವಾದರೆ ಕಂಟಕಾರಿ ಕಷಾಯ ಕುಡಿದಂತಾಗುತ್ತದೆ. ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಗುತ್ತದೆ. ಆದಕಾರಣ ಸರ್ಕಾರ ಪಂಡಿತ-ಪಾಮರರಿಗೂ ಅರ್ಥವಾಗುವ ಭಾಷೆಯನ್ನು ಉಪಯೋಗಿಸಲೆಂದು ನಮ್ರತೆಯಿಂದ ಸೂಚಿಸುತ್ತೇನೆ.

ಈ ಸಾಲಿನ ಆಯವ್ಯಯದಲ್ಲಿ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗಳ ಖೋತಾ ಬಂದಿರುವುದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ಹಿಂದಿನ ಸಾಲ ತೀರಿಸಲು ಮತ್ತೆ ಸಾಲ ತೆಗೆಯುವ ನಿರ್ವಾಹಕ್ಕೆ ವಿಸ್ಮಯಪಡಬೇಕಾಗಿಲ್ಲ. ಅನೇಕ ಕಾರ್ಖಾನೆಗಳು ಮತ್ತು ಕೈಗಾರಿಕೆಗಳು ಮತ್ತು ನೀರಾವರಿ, ವಿದ್ಯುಚ್ಛಕ್ತಿ ಮುಂತಾದವುಗಳ ಮೇಲೆ ಸರ್ಕಾರ ಹಾಕಿರುವ, ಹಾಕುತ್ತಿರುವ ಬಂಡವಾಳದ ಫಲ, ಹೆಚ್ಚಿನ ಪ್ರಮಾಣದಲ್ಲಿ ಇಂದಲ್ಲ, ನಾಳೆ ದೊರೆಯಲಿರುವುದರಿಂದ ನಮ್ಮ ರಾಷ್ಟ್ರೀಯ ಸಾಲವನ್ನು ತೀರಿಸುವ ಭರವಸೆ ಕಾಣುತ್ತಿದೆ. ಆದರೆ ಕಂಡೂ ಕಾಣದೆ ಜನತೆಯ ಮೇಲೆ ಬರುತ್ತಿರುವ ತೆರಿಗೆಗಳಿಗಾಗಿ ವಿಸ್ಮಯ ಪಡಬೇಕಾಗಿದೆ. ಆದರೆ ಈ ತೆರಿಗೆಗಳು ಜನಸಾಮಾನ್ಯರ ಮೇಲೆ ಬೀಳುವುದನ್ನು ತಪ್ಪಿಸಿ ಭೂ-ಸ್ವಾಮಿಗಳು, ಬಂಡವಾಳಗಾರರ ಮೇಲೆ ಬೀಳುವ ಚಾಣಾಕ್ಷತೆಯನ್ನು ಸರ್ಕಾರ ತೋರಿಸಬೇಕು.

ಸರ್ಕಾರಿ ಆಡಳಿತದಲ್ಲಿರುವ ಪೋರ್ಸ್‌ಲೈನು ಫ್ಯಾಕ್ಟರಿ ಮುಂತಾದ ಕಾರ್ಖಾನೆಗಳು ಕಾಣಿಯ ಸಂಪಾದನೆಗೆ, ದುಗ್ಗಾಣಿಯನ್ನು ಖರ್ಚುಮಾಡಿದಂತಾಗುತ್ತದೆ. ಸರ್ಕಾರ ಈ ಬಗ್ಗೆ ಕೂಡಲೇ ಎಚ್ಚರಿಕೆ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ, ಬಡ್ಡಿಯ ಮಾತು ಹಾಗಿರಲಿ, ಅಸಲಿಗೇ ಧಕ್ಕೆಬರುವ ಪರಿಸ್ಥಿತಿ ಬರುತ್ತದೆ. ಮೈಸೂರು ರೋಡು ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ ನಡೆದಿರುವ ಮೋಸ, ವಂಚನೆಯ ಕೃತ್ಯಗಳಿಂದ, ಲಕ್ಷ-ಲಕ್ಷಾಂತರ ರೂಪಾಯಿಗಳು ಕಣ್ಮರೆಯಾಗಿರುವುದೂ ಇದಕ್ಕೆ ನಿದರ್ಶನವಾಗಿದೆ. ರೋಡು ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ ಆಡಳಿತದ ಅವ್ಯವಸ್ಥೆಯಿಂದ ಇಂದಿಗೂ ಹಣ ಪೋಲಾಗುತ್ತಿದೆ. ಲಂಚ, ವಂಚನೆಯ ಧರ್ಮಛತ್ರವಾಗಿದೆ. ರಸ್ತೆ-ಸಾರಿಗೆ ಇಲಾಖೆ, ಇದರಂತೆ, ಅರಣ್ಯಖಾತೆ, ಲೋಕೋಪಯೋಗಿ ಖಾತೆ ಇವುಗಳಲ್ಲಿಯೂ ದಕ್ಷತೆ, ಮಿತವ್ಯಯತೆಗಳ ಅಭಾವದಿಂದ ಹಣ ಪೋಲಾಗುತ್ತಿದೆ. ಅನೇಕ ಇಲಾಖೆಗಳ ದುಂದು ಖರ್ಚುಗಳನ್ನು ನಿಲ್ಲಿಸಿ ಪೋಲಾಗುವ ಹಣವನ್ನು ತಡೆದಲ್ಲಿ, ಕೋಟಿಗಟ್ಟಲೆ ಹಣ ಉಳಿಯುತ್ತದೆ. ಎಲ್ಲರೂ ಪದೇ-ಪದೇ ಈ ಬಗ್ಗೆ ಸರ್ಕಾರವನ್ನು ಎಚ್ಚರಿಸುತ್ತಿದ್ದರೂ ಸರ್ಕಾರ ಈ ಬಗ್ಗೆ ಎಚ್ಚರಗೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ತಪ್ಪುಗಳನ್ನು ನಾವೇ ತಿದ್ದಿಕೊಳ್ಳುವುದು ಶ್ರೇಯಸ್ಕರವಾದುದು. ಬೇರೊಬ್ಬರು ಎಂದರೆ ಶ್ರೀಮಾನ್ ಪುಟ್ಟರಾಮಯ್ಯನವರು ತೋರಿಸಿದ ಮೇಲೆ ತಿದ್ದಿಕೊಳ್ಳುವುದು ಬುದ್ಧಿವಂತಿಕೆಯಲ್ಲ. ಮಂತ್ರಿಗಳು ಮಿತಿಮೀರಿದ ಪ್ರವಾಸದಿಂದ ಖರ್ಚು ಹೆಚ್ಚು ಬರುತ್ತಿದೆ ಎಂದು ಸಾರಿಸಾರಿ ಹೇಳುತ್ತಿದ್ದರೂ, ಒಬ್ಬೊಬ್ಬ ಮಂತ್ರಿ, ಉಪಮಂತ್ರಿಗಳು ಆರು ಸಾವಿರದಿಂದ ಹದಿನೈದು ಸಾವಿರದವರೆಗೆ ಟಿ. ಎ., ಡಿ. ಎ. ತೆಗೆದುಕೊಳುವುದು ಎಂದರೆ, ವ್ಯಸನ ಪಡಬೇಕಾದ ವಿಚಾರ. ಇದು ಸಣ್ಣ ವಿಷಯವಿರಬಹುದು, ಇದರಲ್ಲಿ ಅಡಗಿರುವ ತತ್ವ ದೊಡ್ಡದು. ''ಅರಿತರೆ ಆರು ಪಟ್ಟು, ಮರೆತರೆ ಮೂರು ಪಟ್ಟು'' ಎಂಬ ತತ್ವ ಇದರಲ್ಲಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ಸುಬ್ರಮಣ್ಯಂರವರು, ಬಹಳ ಚೊಕ್ಕವಾದ ಮಾತುಗಳನ್ನು ಆಡಿದ್ದಾರೆ. ಹಳ್ಳಿಯ ರೈತರು ಬೆವರು ಸುರಿಸಿ, ಸರ್ಕಾರಕ್ಕೆ ಕೆತ್ತ ಹಣದಲ್ಲಿ, ಪ್ರತಿಯೊಂದು ಕಾಸೂ ಸದ್ವಿನಿಯೋಗವಾಗಬೇಕು. ಅಪವ್ಯಯ ಮಾಡಿದ್ದೇ ಆದರೆ ಅದಕ್ಕೆ ಕಾರಣರಾದವರು, ನಾಡಿನ ಎರಡು ಕೋಟಿ ಕನ್ನಡಿಗರ ಮನೆಯಲ್ಲಿ ಊಳಿಗದ ಎತ್ತಾಗಿ ಹುಟ್ಟಿ ಪಾಪವನ್ನು ಪರಿಹರಿಸಿಕೊಳ್ಳಬೇಕಾದೀತು'' ಎಂದು ಒಂದು ಕಡೆ ತಮ್ಮ ಭಾಷಣದಲ್ಲ ಹೇಳಿದ್ದಾರೆ. ಇದಕ್ಕಿಂತಲೂ ಸಮಂಜಸವಾದ ಹೇಳಿಕೆ ಕಾಣಬರುವುದಿಲ್ಲ. ಇಂತಹ ಪಾಪದ ಕೆಲಸ, ಪ್ರಜೆಗಳಂತೂ ಮಾಡಲಾರರು. ಮಂತ್ರಿಗಳೂ ಮಾಡಬಾರದೆಂದು ಎಲ್ಲರ ಅಪೇಕ್ಷೆ. ಈ ಅಪೇಕ್ಷೆಯ ಕಡೆಗೆ ನಮ್ಮ ಸರ್ಕಾರದವರು ತುಂಬಾ ನಿಗಾ ಕೊಡಬೇಕಾಗಿ ವಿನಂತಿಸುತ್ತೇನೆ. ''ಹೊಗಳಿಕೆಗೆ ಹಿಗ್ಗಬೇಡಿ, ತೆಗಳಿಕೆಗೆ ತಗ್ಗಬೇಡಿ, ನಿಮ್ಮ ತಪ್ಪುಗಳನ್ನು ನೀವೇ ವಿಮರ್ಶಿಸಿಕೊಂಡು ದುಂದುಗಾರಿಕೆ, ಅ ಮಿತವ್ಯಯಗಳನ್ನು ಆಚರಣೆಗೆ ತರುವುದರಲ್ಲಿ, ಮಂತ್ರಿ, ಉಪಮಂತ್ರಿಗಳಲ್ಲಿಯೇ ಸ್ಪರ್ಧೆ ನಡೆಯಲೆಂದು ನಾನು ಆಶಿಸುತ್ತೇನೆ.'' ಮಂತ್ರಿಗಳಿಗೆ ಉತ್ಸಾಹವೇನೋ ಇದೆ. ಆದರೆ ವಿತರಣೆಯಿಲ್ಲ. ಹೀಗಿರುವುದರಿಂದ, ಒಮ್ಮೊಮ್ಮೆ ಆಡಳಿತದಲ್ಲಿ ಲೋಪ-ದೋಷಗಳು ಎದ್ದು ಕಾಣುತ್ತಿವೆ. ಉದಾಹರಣೆಯಾಗಿ ಇಲ್ಲಿ ಒಂದು ಸನ್ನಿವೇಶ ಹೇಳಬೇಕಾಗಿದೆ. ಒಮ್ಮೆ ಒಬ್ಬ ನವಾಬರ ಮೇಲೆ ಯಾರೋ ಒಬ್ಬ ಕವಿ ಪದ್ಯಮಾಡಿ ಹೇಳಿದ್ದಕ್ಕೆ ನವಾಬರಿಗೆ ಸಂತೋಷವಾಗಿ ಈ ಕವಿಯ ತಲೆಗೆ ಹೂವಿನ ದಂಡೆ ಸುತ್ತಿರಿ ಎಂದು ನವಾಬರ ಆಜ್ಞೆಯಾಯಿತು. ಕವಿಗಳ ತಲೆ ಬೋಳು ತಲೆ, ಹೂವ್ವಿನ ಕುಚ್ಚುಗಳು ನಿಲ್ಲುತ್ತಿರಲಿಲ್ಲ, ಏನು ಮಾಡೋಣವೆಂದು ನವಾಬರನ್ನು ಕೇಳಿದ್ದಕ್ಕೆ ಒಂದು ಮೊಳೆ ಹೊಡೆದು ಹೂವಿನ ಕುಚ್ಚನ್ನು ಕಟ್ಟಿರಿ ಎಂದು ನವಾಬರ ಆಜ್ಞೆಯಾಯಿತು. ನವಾಬರ ಸಂತೋಷಕ್ಕೆ ಬಡಪ್ರಾಣಿ ಕವಿ ಮೊಳೆ ಹೊಡೆಸಿಕೊಂಡು ಬಲಿಯಾಗಬೇಕಾಯಿತು (ನಗು.). ಈ ರೀತಿ ಮಂತ್ರಿಗಳು ವಿಚಕ್ಷಣೆಯಿಲ್ಲದೆ ತೋರಿಸುತ್ತಿರುವ ಅನುಗ್ರಹದಿಂದಲೂ ಪ್ರಜೆಗಳು ತಲೆಗೆ ಮೊಳೆ ಹೊಡೆಸಿಕೊಳ್ಳಬೇಕಾಗುತ್ತದೆ. ಇಂತಹ ಪ್ರಜಾಪ್ರೇಮ ಮಾತ್ರ ತೋರಿಸಬೇಡಿರೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ಅತಿ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಮುಖ್ಯವಾದ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಕಲ್ಯಾಣನಗರಿ ಎನಿಸಿದ ನಮ್ಮ ಈ ಬೆಂಗಳೂರು ನೀರಿಗಾಗಿ ಕಣ್ಣೀರಿಡುತ್ತಿದೆ. ಬೆಂಗಳೂರು ಹನುಮಂತನ ಬಾಲದಂತೆ ಬೆಳೆಯುತ್ತಿದೆ. 1961ನೇ ಸೆನ್ಸ್‌ಸ್ ಪ್ರಕಾರ ಜನಸಂಖ್ಯೆ 12 ಲಕ್ಷ, ಸುತ್ತಮುತ್ತಲ ಪ್ರದೇಶದ ಜನಸಂಖ್ಯೆಯೂ ಸೇರಿದರೆ, ಸುಮಾರು 16 ಲಕ್ಷಕ್ಕೆ ಏರುತ್ತದೆ. ಮೂರು-ನಾಲ್ಕು ಲಕ್ಷ ಜನಸಂಖ್ಯೆ ಇದ್ದಾಗಿನ ಸೌಕರ್ಯವನ್ನೇ 12 ಲಕ್ಷ ಜನರೂ ಹಂಚಿಕೊಳ್ಳಬೇಕೆಂದರೆ, ನೀರು ದೊರೆಯದೆ ಕಣ್ಣೀರು ಇಡುವುದರಲ್ಲಿ ಆಶ್ಚರ್ಯವಿಲ್ಲ. ಮೇಕೆದಾಟು ಬಳಿ ಕಾವೇರಿಯಿಂದ ನೀರು ತನ್ನಿ, ಶಾಶ್ವತವಾದ ವ್ಯವಸ್ಥೆಯಾಗುತ್ತದೆ ಎಂದು ನನ್ನಂತೆ ಅನೇಕರು ಸರ್ಕಾರಕ್ಕೆ ಕೇಳಿಕೊಳ್ಳುತ್ತಿದ್ದರೂ, ಇನ್ನೂ ಹೆಸರುಘಟ್ಟ, ತಿಪ್ಪಗೊಂಡನಹಳ್ಳಿಯಿಂದಲೇ ನೀರನ್ನು ತಂದು ಪೂರೈಸುತ್ತೇವೆ ಎಂದು ಇಂಜನೀಯರುಗಳು ಹೇಳುತ್ತಿರುವುದನ್ನು ಸರ್ಕಾರ ಕೇಳುತ್ತಿದೆ. 30–40 ಲಕ್ಷ ರೂಪಾಯಿಗಳ ಸಣ್ಣ ಸಣ್ಣ ಯೋಜನೆಗಳಿಗೆ ಆಸ್ತು ಎನ್ನುತ್ತಿದೆ. ಕಾವೇರಿಯ ನೀರು ತರಲು ಕೋಟಿಗಟ್ಟಲೆ ಹಣ ತೆರಬೇಕು, ಎಲ್ಲಿಂದ ಸಾಧ್ಯ ಎನ್ನುತ್ತಿದೆ ಸರ್ಕಾರ. ಆಸ್ಟ್ರೇಲಿಯಾ ದೇಶದ ಒಂದು ನಗರಕ್ಕೆ 350 ಮೈಲಿಗಳ ದೂರದಿಂದ ನೀರು ಒದಗಿಸಿದ್ದಾರೆ. ಆ ಸರ್ಕಾರ ಪ್ರಜಾಸೌಕರ್ಯಕ್ಕೆ ಮಹತ್ವ ಕೊಟ್ಟಿದೆ, ನಮ್ಮ ಸರ್ಕಾರ ದುಡ್ಡಿಗೆ ಮಹತ್ವ ಕೊಟ್ಟಿದೆ. "ಅಕ್ಕಿ ಮೇಲೆ ಆಶೆ, ನೆಂಟರ ಮೇಲೆ ಪ್ರೀತಿ" ಎಂಬ ಈ ಜಿಪುಣತನ ಹೋಗಬೇಕು, ಜನರ ಪ್ರಾಣಾಧಾರವಾದ ನೀರನ್ನು ರಾಜಧಾನಿಯ ಜನರಿಗೆ ಎಷ್ಟೇ ಖರ್ಚು ಬರಲಿ ಒದಗಿಸಬೇಕು. ಮೊನ್ನೆ ಯುಗಾದಿಯ ದಿವಸ ಕಾಟನ್‌ಪೇಟೆ, ಕೆಮ್ಮಣ್ಣು ಗುಂಡಿ ಪ್ರದೇಶ, ಗಾಂಧಿನಗರ, ಮುಂತಾದ ಕೆಲವುಕಡೆ ಆದ ನೀರಿನ ಭವಣೆ ನಮ್ಮ ಸೋದರಿಯರು ಕೊಡಗಳನ್ನು ಹಿಡಿದುಕೊಂಡು ನಿಂತಿದ್ದುದನ್ನು ನೋಡಿದರೆ, ಕಣ್ಣೀರು ಬರುವಂತೆ ಇದ್ದಿತು. ಅಷ್ಟೇ ಅಲ್ಲ. ಸರ್ಕಾರದಲ್ಲಿ ಕುಡಿಯಲಿಕ್ಕೆ ನೀರೇ ಸಿಕ್ಕುತ್ತಾ ಇಲ್ಲ ಎಂದು ನಮ್ಮನ್ನು ಬೈಯ್ಯುತ್ತಾರೆ. ಪ್ರಾಣಾಧಾರವಾದ ನೀರನ್ನು ರಾಜಧಾನಿಯ ಜನರಿಗೆ ಎಷ್ಟೇ ಖರ್ಚು ಬರಲಿ ಒದಗಿಸಬೇಕು. ಮೊನ್ನೆ ಯುಗಾದಿಯ ದಿವಸ, ಕಾಟನ್‌ಪೇಟೆ, ಕೆಮಣ್ಣುಗುಂಡಿ ಪ್ರದೇಶ, ಗಾಂಧೀನಗರ, ಮುಂತಾದ ಕಡೆಗಳಲ್ಲಿ ಉಂಟಾದ ನೀರಿಗ ಭವಣೆ ಕಣ್ಣೀರು ಬರುವಂತೆ ಇದ್ದಿತು! ಹೆಣ್ಣುಮಕ್ಕಳಿಗೆ ಬಾವಿಗಳನ್ನು ಹುಡುಕಿಕೊಂಡು ಹೋಗುವುದಕ್ಕೆ ಎಷ್ಟು ಕಷ್ಟವಾಗುತ್ತಿತ್ತೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಕಾಂಗ್ರೆಸ್ ಸರ್ಕಾರ ಒಂದು ನಲ್ಲಿಗಳು, ಕೆರೆಗಳು, ಬಾವಿಗಳು ಬತ್ತಿಹೋಗುತ್ತಿವೆಯಲ್ಲಾ ಎಂದು ಹೇಳುತ್ತಿರುವುದನ್ನು ನಾನು ಕೇಳಿದ್ದೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇನ್ನೂ 6 ಸಾವಿರ ಹಳ್ಳಿಗಳಿಗೆ ನೀರು ಒದಗಿಸದೇ ಇರುವ ಪರಿಸ್ಥಿತಿ ಸರ್ಕಾರಕ್ಕೆ ಗೊತ್ತಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ನಾವು ಸಿಟಿಯವರದು ಹೇಳುತ್ತೇವೆ. ನೀವು ಹಳ್ಳಿಯವರದು ಹೇಳುತ್ತೀರಿ. ಇಲ್ಲಿನ ಸ್ಥಿತಿಯನ್ನು ನೋಡಿದರೆ ನಿಜವಾಗಿ ಕಣ್ಣೀರು ಬರುತ್ತದೆ. ಆದರೆ ಸರ್ಕಾರಿ ಉದ್ಯಾನವನಗಳಲ್ಲಿ ಮತ್ತು ಸರ್ಕಾರಿ ಬಂಗಲೆಗಳಲ್ಲಿ ಒಂದೇಸಮನೆ ಯಥೇಚ್ಛವಾಗಿ ನೀರು ಧಾರಾಕಾರವಾಗಿ ಪೋಲಾಗುತ್ತಿದ್ದರೆ ಮೇಲೆ ಹೇಳಿದ ಪ್ರದೇಶಗಳಲ್ಲಿರತಕ್ಕ ನಲ್ಲಿಗಳಲ್ಲಿ ನೀರೇ ಕಾಣುವುದಿಲ್ಲ. ಹೀಗಾದರೆ ನಮ್ಮ ಜನರ ಗತಿಯೇನು? ನಿಜವಾಗಿಯೂ ಜನರು ಸುಮ್ಮನಿರುತ್ತಾರೆಯೇ? ಆದ್ದರಿಂದ ಎಷ್ಟೇ ಸರ್ಕಾರಕ್ಕೆ ಖರ್ಚಾದರೂ ಬೆಂಗಳೂರಿಗೆ ಸಾಕಷ್ಟು ನೀರನ್ನು ಒದಗಿಸಬೇಕಾದುದು ಸರ್ಕಾರದ ಧರ್ಮ. ಶ್ರೀಮಾನ್ ಹನುಮಂತಯ್ಯನವರು ಎಷ್ಟೇ ಖರ್ಚಾಗಲಿ, ಯಾರೇ ಟೀಕೆಮಾಡಲಿ, ಹೆದರದೆ ವಿಧಾನಸೌಧವನ್ನು ಕಟ್ಟಿಸಿದರು. ಅವರ ಹೆಸರು ಇನ್ನೂ ಶಾಶ್ವತವಾಗಿ ಉಳಿದಿದೆ. ಅಂತೆಯೇ ಬೆಂಗಳೂರಿಗೆ ಕಾವೇರಿ ನದಿಯಿಂದ ನೀರನ್ನು ಒದಗಿಸುವ ಕಾರ್ಯವನ್ನು ಶ್ರೀಮಾನ್ ಜತ್ತಿಯವರೇ ಮಾಡಲಿ, ಬೇರೆ ಯಾರೇಮಾಡಲಿ, ಜಾಗ್ರತೆಮಾಡಿದವರ ಶಿಲಾಪ್ರತಿಮೆಯನ್ನು ಬೆಂಗಳೂರಿನ ಮುಖ್ಯ ಸ್ಥಳದಲ್ಲಿ ಸ್ಥಾಪಿಸುತ್ತೇವೆಂಬ ಭರವಸೆಯನ್ನು ನಾನು

ಬೆಂಗಳೂರಿನ ಜನತೆಯು ಪಾವವಾಗಿ ಕೊಡುತ್ತೇನೆ. ಕೊನೆಗೆ ಮನೆಮನೆಗಾದರೂ ಹೋಗಿ ಚಂದಾ ಎತ್ತಿ ಸಾಕಷ್ಟು ನೀರನ್ನು ಒದಗಿಸಿದವರ ಶಿಲಾಪ್ರತಿಮೆಯನ್ನು ಅಮೃತಶಿಲೆಯಿಂದ ನಗರದ ಮಧ್ಯಭಾಗದಲ್ಲಿ ಸ್ಥಾಪಿಸುವ ಕಾರ್ಯಕ್ರಮವನ್ನು ನಾನು ಕೈಗೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ನೀರು ಆ ರೀತಿ ಒದಗಿಸಿದವರು ಜಾಗ್ರತೆ ಸಾಯಬೇಕು, ಅವರ ಪ್ರತಿಮೆ ನಗರದ ಮಧ್ಯೆಬರುವುದಕ್ಕೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ನಿಮ್ಮ ಕಾಲದಲ್ಲಿ ಸತ್ತವರು ಮಾಡಿದ್ದು, ನಮ್ಮ ಕಾಲದಲ್ಲಿ ಬದುಕಿದ್ದವರದೇ ಮಾಡುತ್ತೇವೆ. ಆದ್ದರಿಂದ ಆದಷ್ಟು ಜಾಗ್ರತೆ ಸರ್ಕಾರದವರು ಎಷ್ಟು ಖರ್ಚಾದರೂ ಕೂಡ ಹಿಂದುಮುಂದು ನೋಡದೆ ಜನಗಳ ಹಿತಕ್ಕಾಗಿ, ಅವರ ಒಂದು ಸುಖಕ್ಕಾಗಿ ಪ್ರಾಣಾಧಾರವಾದ ನೀರನ್ನು ಬೆಂಗಳೂರು ನಗರದಲ್ಲಿ ಒದಗಿಸುವ ಕಾರ್ಯಕ್ರಮವನ್ನು ಕೈಗೊಳ್ಳ ಬೇಕೆಂದು ನಾನು ಸರ್ಕಾರದವರನ್ನು ನಮ್ರತೆಯಿಂದ ವಿನಂತಿಸುತ್ತೇನೆ.

ಇನ್ನು ಕೆಲವು ಮುಖ್ಯವಾದ ರೀತಿ-ನೀತಿಗಳನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಕರ್ಣಾಟಕ ಏಕೀಕರಣವಾಗಿ ಇಷ್ಟು ವರ್ಷಗಳಾದರೂ, ಕನ್ನಡ ರಾಜ್ಯಭಾಷೆಯಾಗಲಿಲ್ಲ, ಇನ್ನೂ ಕನ್ನಡದಲ್ಲಿ ಪಾರಿಭಾಷಿಕ ಶಬ್ದಗಳ ಕೊರತೆ ಇದೆ. ಕನ್ನಡ ಟೈಪ್‌ರೈಟರುಗಳೂ ಇಲ್ಲ. ಅದಕ್ಕೋಸ್ಕರ ಕನ್ನಡ ರಾಜ್ಯಭಾಷೆಯಾಗಲಿಲ್ಲವೆಂಬ ಕಾರಣವನ್ನು ಸರ್ಕಾರದವರು ಕೊಡುತ್ತಾರೆ. ಒಂದು ವೇಳೆ ಪಾರಿಭಾಷಿಕ ಶಬ್ದಗಳು ದೊರೆಯದಿದ್ದರೆ ಜನಸಾಮಾನ್ಯ ಬಳಕೆಯ ಶಬ್ದವನ್ನೇ ಉಪಯೋಗಿಸಬಹುದು. ಕನ್ನಡ ಟೈಪರೈಟರ್ ಜಾರಿಗೆ ಬರುವವರೆಗೂ ಸ್ಲೈಕ್ಲೋಸ್ಟೈಲ್ ಉಪಯೋಗಿಸ ಬಹುದು ಎಂದು ಸರ್ಕಾರಿ ಆಜ್ಞೆ ಮಾಡಬೇಕು. ''ಮನಸ್ಸಿದ್ದಲ್ಲಿ ಮಹಾದೇವನಿರುತ್ತಾನೆ, ಮನಸ್ಸಿಲ್ಲದಿದ್ದಲ್ಲಿ ಮಹಾದೇವನೆಲ್ಲಿ ಬರುತ್ತಾನೆ'' ನೀವು ಮನಸ್ಸುಮಾಡಿ ಕನ್ನಡ ಭಾಷೆಯನ್ನು ಬಳಕೆಗೆ ತನ್ನಿ. ಎಲ್ಲವೂ ಒದಗುತ್ತದೆ. ಇದರಂತೆಯೇ ಕನ್ನಡ ನಾಡಿಗೆ ಕರ್ಣಾಟಕ ಪ್ರಾಂತ ಎಂದು ಕರೆಯುವ ನಿರ್ಣಯವನ್ನು ಸಹ ಕೈಕೊಳ್ಳಬೇಕು. ಆ ಬಗ್ಗೆ ನೀವು ಗಮನ ಕೊಡದಿದ್ದಲ್ಲಿ ಕನ್ನಡಾಭಿಮಾನಿಗಳನ್ನೇ ಮಂತ್ರಿಗಳನ್ನಾಗಿ ಆರಿಸಿ ಎಂಬ ಚಳುವಳಿ ಇಂದಲ್ಲ, ನಾಳೆ ಆದೀತು! ಅಷ್ಟಕ್ಕೆ ಅವಕಾಶವನ್ನು ಕೊಡಬೇಡಿ ಎಂದು ನಾನು ಕೇಳಿಕೊಳ್ಳುತ್ತೇನೆ!

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಗ ಮುಖ್ಯಮಂತ್ರಿಗಳು ತಾವೇ !

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಆ ರೀತಿ ನಾನಾದರೆ ನಿಮಗೆ ಇಷ್ಟುಮಾತನಾಡು ವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ.

ಇನ್ನು ಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸಬೇಕೆಂಬ ನೀತಿಯನ್ನು ಸರ್ಕಾರ ಆಚರಣೆಗೆ ತರದಿರುವುದಕ್ಕೆ ವಿಷಾದಿಸಬೇಕಾಗಿದೆ. 'ಹಳ್ಳಿಯಿಂದಲೇ ದಿಲ್ಲಿ' ಎಂಬುದನ್ನು ಸರ್ಕಾರ ಮರೆಯಬಾರದು. ಇದರಿಂದ ಪಟ್ಟಣಗಳು ಮಿತಿಮೀರಿ ಬೆಳೆಯುವುದು ತಪ್ಪುತ್ತದೆ. ಬೆಂಗಳೂರಿನಲ್ಲಿ ಕೈಗಾರಿಕೆ ಎಸ್ಟೇಟುಗಳನ್ನು ಸ್ಥಾಪಿಸುತ್ತೀರಿ. ಕೈಗಾರಿಕಾ ಕ್ಷೇತ್ರಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮತ್ತು ನೀರಿನ ಸರಬರಾಯಿ ಮಾಡುತ್ತೀರಿ. ಅಂದಮೇಲೆ ನೀರು, ವಿದ್ಯುಚ್ಛಕ್ತಿ ಕೊರತೆ ನಗರಗಳಿಗೆ ಬಂದೇ ಬರುತ್ತದೆ. ಸಣ್ಣ ಸಣ್ಣ ಕೈಗಾರಿಕೆಗಳಿಗೆ ನಿಜವಾಗಿ ತೊಂದರೆಯಾಗುತ್ತದೆ. ಹ್ಯಾಂಡ್‌ಲೂಂ, ಹಿಟ್ಟಿನ ಗಿರಣಿ ಇಟ್ಟುಕೊಂಡಿರುವವರಿಗೆ ಈಗ ವಿದ್ಯುಚ್ಛಕ್ತಿ ಕೊರತೆ ಬಹಳವಾಗಿದೆ. ರಾತ್ರಿ 12 ಗಂಟೆ ಮೇಲೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುತ್ತೇವೆಂದು ಅವರಿಗೆ ಹೇಳುತ್ತಾರೆ. ಯಾರು ಬಂದು ರಾತ್ರಿ ಹೊತ್ತು ಜೋಳ, ಅಕ್ಕಿ, ರಾಗಿಯನ್ನು ಹಿಟ್ಟಿನ ಗಿರಣಿಗಳಿಗೆ ಹಾಕಿಸುತ್ತಾರೋ ನನಗಂತೂ ಗೊತ್ತಾಗುವುದಿಲ್ಲ. ತಮ್ಮ ಜೀವನವನ್ನು ಸಾಗಿಸಲು ಹೊಟ್ಟೆ ಹೊರೆಕೊಳ್ಳಲು ಹಿಟ್ಟಿನ ಗಿರಣಿಯಿಂದ ಸಂಪಾದಿಸಿದ ದುಡ್ಡಿನಿಂದ ಕಾಲಕಳೆಯುತ್ತಿದ್ದಾರೆ. ಅಂತಹ ಜೀವನವನ್ನು ಮಾಡುತ್ತಿದ್ದಾರೆ. ಅಂದಮೇಲೆ ಅಂತಹವರಿಗೆ ರಾತ್ರಿಯ ಹೊತ್ತು ವಿದ್ಯುಚ್ಛಕ್ತಿ ಸರಬರಾಯಿ ಮಾಡಿದರೆ ಹೇಗೆ ಅವರು ಜೀವನ ಮಾಡಬೇಕು ? ಇಂತಹ ಕೈಗಾರಿಕಾ ಕ್ಷೇತ್ರ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಗಳು ಗ್ರಾಮಾಂತರ ಪ್ರದೇಶಗಳಿಗೆ ಹೋದಲ್ಲಿ ಹಳ್ಳಿಗಳು ಉತ್ತಮ ರೀತಿಯಲ್ಲಿ ಅಭಿವೃದ್ಧಿಯಾಗುತ್ತದೆ. ನಿರುದ್ಯೋಗ ಸಮಸ್ಯೆಯೂ ಕಡಮೆಯಾಗುತ್ತದೆ. ದಿಳ್ಳಿಯ ತೊಂದರೆಯೂ ತಪ್ಪುತ್ತದೆ. ಈ ತತ್ವವನ್ನು ಜಾರಿಗೆ ತರಲು ಸರ್ಕಾರದವರು ಕೂಡಲೇ ಒಂದು ದೃಢಸಂಕಲ್ಪವನ್ನು ಮಾಡಬಹುದೆಂದು ನಾನು ನಂಬಿದ್ದೇನೆ.

ಇನ್ನು ಸರ್ಕಾರದ ಸಹಕಾರ ತತ್ವದ ಆಡಳಿತ ಸರಿಯಾಗಿಲ್ಲ. ಬೇಕಾದಷ್ಟು ಸಹಕಾರಸಂಘಗಳನ್ನು ಮತ್ತು ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸಿರಬಹುದು. ಆಡಳಿತ ಸರಿಯಾಗಿಲ್ಲದೆ ಹಣ ಪೋಲಾಗುತ್ತಿದ್ದರೆ, ದೇಶಕ್ಕೆ ಏನೂ ಉಪಯೋಗವಿಲ್ಲ. ಅನೇಕ ಸಹಕಾರ ಸಂಘಗಳಲ್ಲೂ, ಸಹಕಾರ ಬ್ಯಾಂಕುಗಳಲ್ಲೂ ಹಣ ದುರೂಪಯೋಗವಾಗಿದೆ. ಆದರೂ ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. '' ಮುಖ ನೋಡಿ ಮಣೆ ಹಾಕುವ ನೀತಿಯಿಂದ ಈ ಬಗ್ಗೆ ನಡೆದಿರುವ ಅಪರಾಧಗಳು ಬೈಲಿಗೆ ಬರುತ್ತಾ ಇಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ಬಗ್ಗೆ ಯೋಗ್ಯ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

ಇನ್ನು ಆಸ್ಪತ್ರೆಗಳ ರೀತಿ-ನೀತಿಗಳನ್ನು ಜಾಗ್ರತೆಯಾಗಿ ಸುಧಾರಿಸಬೇಕು. ಪ್ರಭಾವ, ಇಲ್ಲವೇ ಹಣವಿಲ್ಲದವರ ಪಾಡು ಕೆಲವು ಆಸ್ಪತ್ರೆಗಳಲ್ಲಿ ನಾಯಿಪಾಡು. ಲಂಚ ಕೊಟ್ಟರೆ ರೋಗಿಗಳಿಗೆ ಉಪಚಾರ, ಇಲ್ಲದಿದ್ದರೆ ಅಪಚಾರ. ಇದು ನನ್ನ ಒಬ್ಬಳ ಟೀಕೆಯಲ್ಲ. ಸಾರ್ವತ್ರಿಕ ಟೀಕೆಯಾಗಿದೆ. ಅಂತಹ ಸಾರ್ವತ್ರಿಕ ಟೀಕೆಯನ್ನು ಸರ್ಕಾರ ನಿರ್ಲಕ್ಷಿಸುವುದು ದೇಶಕ್ಕೆ ಅಪಾಯಕರ. ಬೆಂಗಳೂರಿನ ಕ್ಷಯರೋಗದ ಆಸ್ಪತ್ರೆಯಲ್ಲಿ ಸ್ಥಳದ ಅಭಾವದಿಂದ ಅಲ್ಲಿ ರೋಗಿಗೆ ಸ್ಥಳ ದೊರೆಯುವುದರೊಳಗೆ ಆ ರೋಗಿಗಳು ಸತ್ತೇ ಹೋಗಿರುತ್ತಾರೆ. ಸತ್ತ ಮೇಲೆ ಸ್ಥಳ ಸಿಕ್ಕುತ್ತದೆ. ಒಂದು ವೇಳೆ ಸರ್ಕಾರದಲ್ಲಿ ಹಣವಿಲ್ಲದಿದ್ದರೆ ಸಾರ್ವಜನಿಕರಿಂದ ಚಂದಾ ಎತ್ತಿಯಾದರೂ ಕ್ಷಯರೋಗದ ಆಸ್ಪತ್ರೆಯನ್ನು ಬಡಾವಣೆ ಮಾಡಿ ಏಕೆ ಜನಗಳಿಗೆ ಸೌಕರ್ಯವನ್ನು ಮಾಡಿಕೊಡಬಾರದು ಎಂದು ನಾನು ಕೇಳುತ್ತೇನೆ. ಎಲ್ಲಾ ಮಂತ್ರಿಗಳಿಗಿಂತಲೂ ಆರೋಗ್ಯ ಮಂತ್ರಿ, ವಿದ್ಯಾ ಮಂತ್ರಿ ಮತ್ತು ಆಹಾರ ಮಂತ್ರಿ ಈ ಮೂವರ ಕರ್ತವ್ಯ ಬಹಳ ಪವಿತ್ರವಾದ ಕರ್ತವ್ಯ. ಈ ಮಂತ್ರಿಗಳಲ್ಲಿ ತುಂಬಾ ಕರ್ತವ್ಯ ದೃಷ್ಟಿ, ಕರುಣತೆ ಇರಬೇಕು. ಮೊನ್ನೆತಾನೇ ಒಂದು ವಿಷಾದಕರವಾದ ಸಂಗತಿ ನಡೆಯಿತು. ಮೊನ್ನೆ ತಾನೇ ವಿಧಿವಶರಾದ ನಮ್ಮ ಸಹೋದ್ಯೋಗಿ ಚಂದ್ರಶೇಖರ ಪಾಟೀಲರಿಗೆ ಆಸ್ಪತ್ರೆಯಲ್ಲಿ ಸಕಾಲಕ್ಕೆ ದೊರೆಯಬೇಕಾದ ಔಷದೋಪಚಾರಗಳ ಚಿಕಿತ್ಸೆ ದೊರೆಯಲಿಲ್ಲ ಎಂದು ಪ್ರತ್ಯಕ್ಷವಾಗಿ ನೋಡಿದ ನನ್ನ ಆತ್ಮವೇ ಹೇಳುತ್ತದೆ. ಇಂತಹ ಆಕ್ಸಿಡೆಂಟಾಗಿ ಸೀರಿಯಸ್ ಆದ ಪೇಷಂಟ್ ಬಂದಾಗ ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಕೇವಲ 5-10 ನಿಮಿಷಗಳಲ್ಲಿ ಎಲ್ಲಾ ಎಕ್ಸ್‌ಪರ್ಟ್ಸ್ ಸೇರಿಕೊಂಡು ರೋಗಿಯನ್ನು ಪರೀಕ್ಷಿಸಿ ತಕ್ಕ ಉಪಚಾರ ಮಾಡುತ್ತಾರೆ. ಆದರೆ ಇಲ್ಲಿ ಅಂತಹ ಚಿಕಿತ್ಸೆ ಅವರಿಗೆ ದೊರೆಯಲಿಲ್ಲ. ಈ ಆಸ್ಪತ್ರೆಯಲ್ಲಿ ಇನ್ನೊಂದು ವಿಚಿತ್ರ ಪದ್ಧತಿ ಇದೆ. ಒಬ್ಬ ರೋಗಿಯನ್ನು ಒಬ್ಬ ಡಾಕ್ಟರ್ ನೋಡುತ್ತಿದ್ದರೆ ಪ್ರಾಣಹೋಗುವ ಸಮಯದಲ್ಲೂ ಅದೇ ಡಾಕ್ಟರ್ ಬಂದು ಪ್ರಾಣಹೋಗುತ್ತಿದೆಯೆಂದು ಹೇಳಬೇಕೇ ಹೊರ್ತು ಬೇರೆ ಡಾಕ್ಟರ್ ಬಂದು ನೋಡುವುದಿಲ್ಲ, ಹೇಳುವುದಿಲ್ಲ. ಮಾನವೀಯತೆಯ ದೃಷ್ಟಿಯಿಂದಲಾದರೂ ಡಾಕ್ಟರುಗಳಲ್ಲಿ ಈ ಸ್ಪರ್ಧೆ ಹೋಗಬೇಕು. ದಿವಂಗತ ಚಂದ್ರಶೇಖರ ಪಾಟೀಲರ ಬಗ್ಗೆ ಇದು ನಡೆದಿದೆ. ಆರೋಗ್ಯ ಮಂತ್ರಿಗಳು ಇದನ್ನು ಸರಿ ಎಂದು ಒಪ್ಪುತ್ತಾರೆಯೇ ? ಇನ್ನಾದರೂ ಇದನ್ನು ಸರಿಪಡಿಸುತ್ತಾರೆಯೇ ಎಂದು ಅವರನ್ನು ನಾನು ಕೇಳುತ್ತೇನೆ. ಇಂತಹ ಆಕ್ಸಿಡೆಂಟ್ ಆಗಿ ಸೀರಿಯಸ್ ಕೇಸ್ ಬಂದಿರುವಾಗ ಎಕ್ಸ್‌ಪರ್ಟ್ ಡಾಕ್ಟರುಗಳೆಲ್ಲರೂ ಸೇರಿಕೊಂಡು ಆ ರೋಗಿಯನ್ನು ಒಂದೆರಡು ಕ್ಷಣದಲ್ಲಿ ಉಪಚಾರಮಾಡುವುದು ಡಾಕ್ಟರುಗಳ ಕರ್ತವ್ಯವಲ್ಲವೇ? ಅಂಥಾದ್ದನ್ನು ಬಿಟ್ಟು ಡಾಕ್ಟರುಗಳು ನಾಳೆ ನೋಡೋಣ, ನಾಡಿದ್ದು ನೋಡೋಣ ಎಂದು ಹೇಳುವುದು ಈಗಿರತಕ್ಕ ಪದ್ಧತಿ. ಹೀಗಾಗಿ ಅನೇಕ ರೋಗಿಗಳನ್ನು ಸಾವಿಗೆ ಬಲಿಕೊಡುತ್ತಿದ್ದೇವೆ. ಪರದೇಶಗಳಲ್ಲಿ ಇಂತಹ ಕೇಸುಗಳು

ಬಂದರೆ ತಕ್ಷಣ ಚಿಕಿತ್ಸೆ ಮಾಡುತ್ತಾರೆ. ನಮ್ಮ ಕೆಲಸವನ್ನು ನಾವು ಮಾಡಬೇಕೆಂಬ ನೀತಿ ಡಾಕ್ಟರುಗಳಿಗೆ ಮೊದಲು ಬರಬೇಕು. ಇಂತಹ ನೀತಿಯನ್ನು ಈಗಿನ ಆಸ್ಪತ್ರೆಗಳಲ್ಲಿ ಅನೇಕ ಕಡೆಗಳಲ್ಲಿ ಅನುಸರಿಸುತ್ತಿಲ್ಲ. ಆರೋಗ್ಯ ಮಂತ್ರಿಗಳು ತಮ್ಮ ಒಬ್ಬರ ಆರೋಗ್ಯವನ್ನು ನೋಡಿ ಕೊಳ್ಳದೆ ಬಡ ಜನಗಳ ಆರೋಗ್ಯವನ್ನು ಸಹ ನೋಡಿಕೊಳ್ಳಬೇಕು.

ಡಾ.ಬಿ. ಕೆ. ನಾಗೂರ್. — ಪರದೇಶಗಳಲ್ಲಿ ಇಂತಹ ಆಕ್ಸಿಡೆಂಟುಗಳು ಸರ್ಕಾರದ ಪರವಾಗಿ ನಡೆದರೆ ಮಂತ್ರಿಗಳು ರಾಜೀನಾಮೆ ಕೊಡುತ್ತಾರೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ನಾನು ಅದನ್ನು ಓದಿಲ್ಲ. ಇನ್ನು ಅಲ್ಲಿಗೆ ಹೋಗಿಯೂ ಬಂದಿಲ್ಲ. ಆಸ್ಪತ್ರೆಗಳಲ್ಲಿ ನೂರು ರೂಪಾಯಿಗಿಂತ ಕಡಿಮೆ ಇರುವ ಸರ್ಕಾರಿ ನೌಕರರುಗಳಿಗೆ ಸ್ಪೆಷಲ್ ವಾರ್ಡ್ ಕೊಡುವುದಿಲ್ಲ. ಅವರು ಇಂಜೆಕ್ಷನ್‌ಗೆ, ಔಷಧಿಗೆ ಛಾರ್ಜು ಕೊಡಬೇಕು, ಸಾವಿರ ರೂಪಾಯಿ ಸಂಬಳ ಬರುವವರಿಗೆ ಹತ್ತು ರೂಪಾಯಿ ವಾರ್ಡನ್ನು ಫ್ರೀಯಾಗಿ ಕೊಟ್ಟು ಟಾನಿಕ್, ಔಷಧಿ, ಎಲ್ಲಾ ಫ್ರೀಯಾಗಿ ಕೊಡಬೇಕು, ಇದು ಯಾವ ಧರ್ಮವೋ ಯಾವ ನೀತಿಯೋ. ಇದನ್ನು ನೀವು ತಪ್ಪಿಸಬೇಕು. 150 ರೂಪಾಯಿಗೆ ಕಡಿಮೆ ಬರುವ ಕೆಳದರ್ಜೆ ನೌಕರರಿಗೂ 2½ ರೂಪಾಯಿ ವಾರ್ಡನ್ನು ಫ್ರೀಯಾಗಿ ಕೊಡಬೇಕು. ಆ ಸ್ಪೆಷಲ್ ವಾರ್ಡುಗಳು ಮಂತ್ರಿಗಳು ಟಾನಿಕ್ ಇಂಜೆಕ್ಷನ್ ತೆಗೆದುಕೊಂಡು ಮಸ್ತು ಬೆಳಸಿಕೊಳ್ಳಲಿಕ್ಕೆ ಇಲ್ಲ. ಜನಸಾಮಾನ್ಯರಿಗೂ ಅವುಗಳಲ್ಲಿ ಸಮ ನಾದ ಅವಕಾಶ ಇರಬೇಕು, ಇಲ್ಲದಿದ್ದರೆ ಸಮತಾವಾದ ನೀತಿಗೆ ಏನು ಬೆಲೆ?

4. 30 P.M.

ಆಹಾರ ಪದಾರ್ಥಗಳ ಬೆಲೆ ಏರುತ್ತಿದೆ. ಮೊನ್ನೆ ಸೆಂಟ್ರಲ್ ಗೌರ್ನಮೆಂಟ್ ಹಾಕಿದ ಟೀ, ಬೆಂಕಿಪೊಟ್ಟಣ ಮುಂತಾದ ಕೆಲವು ಪದಾರ್ಥಗಳ ಮೇಲೆ ಚಿಲ್ಲರೆ ಸುಂಕ ಬೀಳದೆ ಇದ್ದರೂ ವ್ಯಾಪಾರಸ್ಥರು ಹೆಚ್ಚಿನ ಬೆಲೆಗೆ ಪದಾರ್ಥಗಳನ್ನು ಮಾರಿದ್ದಾರೆ. ಇದ್ದ ಮಾಲನ್ನು ಕತ್ತಲು ಕೋಣೆಗೆ ಸಾಗಿಸಿ ಇಲ್ಲವೆಂದು ಹೇಳಿದ್ದಾರೆ. ಎಕ್ಸ್‌ರೇ ಕಣ್ಣಿರುವ ಶ್ರೀ ಚನ್ನಬಸಪ್ಪನವರು ಗೃಹ ಮಂತ್ರಿಗಳಾಗಿದ್ದಾರೆ. ಅಂತಹವುಗಳನ್ನು ಪತ್ತೆ ಹಚ್ಚಿಸಿ ಜನತೆಗೆ ಉಪಕಾರ ಮಾಡಲಿ, ಆದರೆ ಪತ್ತೆ ಹಚ್ಚುವುದಕ್ಕೆ ಪ್ರಾಮಾಣಿಕರನ್ನು ಕಳುಹಿಸಲಿ. ''ಕುರಿ ಕಾಯುತ್ತೀಯಾ ತೋಳ ಎಂದರೆ ಸಂಬಳವೇ ಬೇಡ'' ಎಂದು ಹೇಳುವಂತಹವರನ್ನು ಕಳುಹಿಸಬೇಡಿ. ನಗರ ಮತ್ತು ಸುತ್ತ ಮುತ್ತಲ ಪ್ರದೇಶಗಳಲ್ಲಿ ಜೂಜುಕೋರತನ, ಕಳ್ಳಭಟ್ಟಿ ಸಾರಾಯಿ, ಅನೀತಿ, ಅಕ್ರಮ, ರಸ್ತೆಗಳಲ್ಲಿ ಲಾರಿಗಳ ಹುಚ್ಚಾಪಟ್ಟೆ ಹಾವಳಿ, ಇಂತಹವುಗಳನ್ನು ನಿಲ್ಲಿಸಲು ಶ್ರೀ ಚನ್ನಬಸಪ್ಪನವರು ಎಕ್ಸ್-ರೇ ಕಣ್ಣುಗಳನ್ನು ಉಪಯೋಗಿಸಿ ಸುವ್ಯವಸ್ಥೆ ಮಾಡಬೇಕು. ಆಹಾರದ ಮಂತ್ರಿಗಳು ಲಕ್ಷ ಟನ್ ತರಿಸುತ್ತಾ ಇದ್ದೇವೆ, ಆಹಾರ ಪರಿಸ್ಥಿತಿ ಸರಿಯಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಎಂದಾ ದರೂ ಮದರಾಸು ಆಹಾರ ಮಂತ್ರಿಗಳಂತೆ ಮಾರ್ಕೆಟ್ಟಿಗೆ ಹೋಗಿ ಆಹಾರದ ಬೆಲೆ ಹೇಗೆ ಏರಿದೆ ಎಂದು ನೋಡಿದ್ದಾರಾ! ಅಕ್ಕಿಯ ಬೆಲೆ ಒಂದು ರೂಪಾಯಿಗೆ ಒಂದು ಸೇರಾಗಿದೆ. ನಮ್ಮ ಆಹಾರ ಸಚಿವರು ಒಂದು ದಿವಸವಾದರೂ ಮಾರ್ಕೆಟ್ಟಿಗೆ ಹೋಗಿ ನೋಡದೆ ಇಲ್ಲಿ ನಮ್ಮ ಪ್ರಶ್ನೆಗಳಿಗೆ ಎಲ್ಲಾ ಸರಿಯಾಗಿದೆ, ಆಹಾರ ಬೇಕಾದಷ್ಟು ಇದೆ ಎಂದು ಉತ್ತರ ಕೊಟ್ಟರೆ ಆಹಾರ ಬರುತ್ತದೆಯೆ? ಎಲ್ಲಿದೆ ಆಹಾರ? ಒಂದು ದಿವಸವಾದರೂ ಆಹಾರ ಮಂತ್ರಿಗಳು ಹಾಗೆಯೇ ಹೋಗಿ ಆಹಾರದ ಬೆಲೆ ಹೇಗಿದೆ ಎಂದು ತಿಳಿದುಕೊಂಡು ಬಂದು ಹೇಳಲಿ. ಉಳಿದ ಮಂತ್ರಿಗಳು ಹಳ್ಳಿಗಳ ಕಡೆ ಹೋಗಿ ವಿಚಾರಿಸಲಿ ಎಂದು ಹೇಳುತ್ತಾ ಇದ್ದೇನೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರ ಗತಿ ಏನಾಗುತ್ತದೆ. ಜನ ಕಲ್ಲು ತೆಗೆದುಕೊಂಡು ಹೊಡೀತ್ತಾರೆ. ಸಚಿವರು ಹೊಡೆಸಿಕೊಳ್ಳಲಿ ಅಂತ ಆಸೆಯೇ !

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಒಂದು ಮುಖ್ಯವಾದ ರಾಷ್ಟ್ರೀಯ ಪ್ರಶ್ನೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಿಂದೂಸ್ಥಾನಾದ್ಯಂತ ಎಲ್ಲರ ಗಮನವನ್ನೂ ಸೆಳೆದಿರುವ ಪಾನನಿರೋಧದ ಯಶಸ್ಸಿನ ಬಗ್ಗೆ ಯೋಚಿಸುವ ಪ್ರಸಂಗ ಬಂದಿದೆ. ಪಾನನಿರೋಧ ನೀತಿಯನ್ನು ಯಾರೂ ಅಲ್ಲಗಳೆಯುವುದಿಲ್ಲ. ಸ್ವರ್ಗಕ್ಕೆ ಹೋಗುವೆಯಾ ಎಂದರೆ ಯಾರು ಬೇಡವೆನ್ನುತ್ತಾರೆ? ಆದರೆ ಸ್ವರ್ಗಕ್ಕೆ ಹೋಗುವ ಮಾರ್ಗ ಕಿರುಕುಳವಿಲ್ಲದೆ ಇರಬೇಕಲ್ಲವೆ? ಇಂದು ಪಾನನಿರೋಧದ ನೀತಿಯಲ್ಲಿ ತುಂಬಾ ಎಡರುತೊಡರುಗಳು ಉಂಟಾಗಿವೆ. ಕಳ್ಳಭಟ್ಟಿ ಸಾರಾಯಿ ತಯಾರಿಕೆ, ಕಳ್ಳತನದ ಕುಡಿತ ಮಿತಿಮೀರಿದೆ. ಪಾನನಿರೋಧ ನೋಡಿಕೊಳ್ಳಲು ನೇಮಿಸಲ್ಪಟ್ಟಿರುವ ಸಿಬ್ಬಂದಿ ವರ್ಗ ಹಣ ಗಳಿಸುತ್ತಿದೆ. ಕುಡುಕರ ಹಣ ಮೊದಲು ಎಕ್ಸೈಜ್ ಕಂಟ್ರಾಕ್ಟರಿಗೆ ಸೇರುತ್ತಿತ್ತು, ಅದೇ ಹಣ ಈಗ ಪಾನನಿರೋಧದ ಸಿಬ್ಬಂದಿ ವರ್ಗಕ್ಕೆ ಸೇರುತ್ತಿದೆ. ಇಷ್ಟೇ ವ್ಯತ್ಯಾಸ. ಈ ಬಗ್ಗೆ ನಾವು ರಾಮನನ್ನು ಮಾಡ ಹೋಗಿ ರಾಮ ದೂತನನ್ನು ಮಾಡಿದೆವೇನೋ, ಊರ ಹೊರಗಿದ್ದ ಮಾರಿಯನ್ನು ಮನೆಯೊಳಗೆ ತಂದುಕೊಂಡೆವೇನೋ ಎಂಬ ಸಂದೇಹ ಬರುತ್ತಿದೆ. ಪಾನನಿರೋಧದ ನೀತಿಯಲ್ಲಿರುವ ಅಡ್ಡಿ ಆತಂಕಗಳನ್ನು ಬಗೆಹರಿಸಲು ರಾಷ್ಟ್ರಪ್ರೇಮಿಗಳೆಲ್ಲರೂ ಯೋಚಿಸಬೇಕಾಗಿದೆ. ಹಿಂದಿನ ಪಾನನಿರೋಧದ ನೀತಿ ಹೇಗಿದೆ ಎಂಬುದಕ್ಕೆ ಒಂದು ಸಣ್ಣ ಕಥೆ ಹೇಳುತ್ತೇನೆ :

''ಒಬ್ಬ ಜಿಲ್ಲಾಧಿಕಾರಿಗಳು ಒಂದು ದಿವಸ ಪಾನನಿರೋಧ ಪ್ರಚಾರಸಭೆಯ ಅಧ್ಯಕ್ಷತೆ ವಹಿಸಿದ್ದರು. ತಮ್ಮ ಆಫೀಸು ಜವಾನ ತಿಮ್ಮಯ್ಯನನ್ನು ಸಭೆಯವರಿಗೆ ತೋರಿಸಿ: ''ನೋಡಿ, ಈ ನಮ್ಮ ತಿಮ್ಮಯ್ಯ ಮೊದಲು ಹುಚ್ಚಾಪಟ್ಟೆ ಕುಡಿಯುತ್ತಿದ್ದ. ಪಾನನಿರೋಧ ಜಾರಿಗೆ ಬಂದ ಮೇಲೆ ಕುಡಿಯುವುದನ್ನು ಬಿಟ್ಟಿದ್ದಾನೆ. ಈಗ ಹೊಟ್ಟೆ ತುಂಬ ಊಟ ಮಾಡುತ್ತಿದ್ದಾನೆ. ಸೊಗಸಾದ ಬಟ್ಟೆ ಹಾಕುತ್ತಿದ್ದಾನೆ. ಈತನಂತೆ ಇತರರೂ ಅನುಸರಿಸಿದರೆ ನಮ್ಮ ರಾಜ್ಯ ರಾಮರಾಜ್ಯವಾಗುವುದರಲ್ಲಿ ಸಂದೇಹವಿಲ್ಲ'' ಎಂದು ಹೇಳಿ, ''ತಿಮ್ಮಯ್ಯ, ಕುಡಿತ ಬಿಟ್ಟ ಅನುಭವವನ್ನು ಸಭಿಕರಿಗೆ ತಿಳಿಸು'' ಎಂದು ಹೇಳಿದರು. ತಿಮ್ಮಯ್ಯ ಹೇಳಿದ ''ಅಣ್ಣ ತಮ್ಮಂದಿರೇ, ಅಕ್ಕ ತಂಗಿಯರೇ, ನಮ್ಮ ಸಾಹೇಬರು ಹೇಳಿದ್ದು ನಿಜ. ನಾನು ಮೊದಲು ತುಂಬ ಕುಡುಕನಾಗಿದ್ದೆ. ಸೇರಿಗೆ 3 ಆಣೆ ಕೊಟ್ಟು ನೀರು ಬೆರೆತ 3 ಸೇರು ಹೆಂಡ ಕುಡಿಯುತ್ತಿದ್ದೆ. ಆದರೂ ನಿಸೆಯೇ ಬರುತ್ತಿರಲಿಲ್ಲ. ಸರ್ಕಾರ ಕುಡಿಯುವುದನ್ನು ತಪ್ಪಿಸಿದ ಮೇಲೆ ನನ್ನಂಥವರಿಗೆ ತುಂಬ ಉಪಕಾರವಾಗಿದೆ. ಮೊದಲು ಎಕ್ಸೈಜ್ ಕಂಟ್ರಾಕ್ಟರ್ ಆಗಿದ್ದ ದೇವಪ್ಪನವರು ಈಗ ಬಾರ್ ಇಟ್ಟಿದ್ದಾರೆ, 6 ಆಣೆ ಕೊಟ್ಟರೆ ಒಂದು ಸಣ್ಣ ಸೀಸೆಯಲ್ಲಿ ಏನೋ ಕುಡಿಯಲು ಕೊಡುತ್ತಾರೆ. ರಾತ್ರಿ ಕುಡಿದು ಮಲಗಿದರೆ ಬೆಳಗಾದ ಮೇಲೆಯೇ ಎಚ್ಚರ. ಆಗ 9 ಆರಣೆ ಒಂದು ಖರ್ಚಾದರೂ ನಿಶೆಯೇ ಬರುತ್ತಿರಲಿಲ್ಲ. ಅಲ್ಲದೆ, ಮುನಿಸಿಪಾಲಿಟಿಯಲ್ಲಿರೋ ಜಾತಾನಾಯಕ 1 ರೂಪಾಯಿಗೆ ಒಂದು ಡ್ರಾಂ ಕೊಡುತ್ತಾನೆ. ಅದು ಭಟ್ಟಿ ಸಾರಾಯಿಯಂತೆ! ಕುಡಿದರೆ ದಿನವೆಲ್ಲಾ ಬ್ರಹ್ಮಲೋಕದಲ್ಲಿ ಇದ್ದಂತೆ ಇರುತ್ತೇನೆ. ಇಂತಹ ಉಪಕಾರ ಮಾಡಿರುವ ಸರ್ಕಾರವನ್ನು ಹಾಡಿ ಹರಸುತ್ತೇನೆ'' ಎಂದು ಹೇಳಿ ಭಾಷಣ ಮುಗಿಸಿದ. ಕೇಳಬೇಕೆ! ಜಿಲ್ಲಾಧಿಕಾರಿಗಳು ಪೆಚ್ಚಾದರು. ಅಂದಿನಿಂದ ಪಾನನಿರೋಧ ಪ್ರಚಾರ ಸಭೆಯನ್ನು ಏರ್ಪಡಿಸುವ ಗೋಜಿಗೇ ಹೋಗುವುದಿಲ್ಲ ಎಂದರು. ಹೀಗಿದೆ, ಇಂದಿನ ನಮ್ಮ ಪಾನನಿರೋಧದ ನೀತಿ. ಪಾನನಿರೋಧವನ್ನು ಯಶಸ್ವಿಗಳಿಸಲು ಸರ್ಕಾರ ಕಟ್ಟುನಿಟ್ಟಾದ ಕಾರ್ಯಕ್ರಮ ಕೈಗೊಂಡಿಲ್ಲ. ಕಾರಣ, ಸರ್ಕಾರ ಮತ್ತು ರಾಷ್ಟ್ರೀಯ ಮುಖಂಡರು ಇದರ ಯಶಸ್ಸಿನ ಬಗ್ಗೆ ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು? ಇಲ್ಲವೆ ಇದನ್ನು ಪುನಃ ವಿಮರ್ಶಿಸುವ ಕಾಲ ಬಂದಿದೆ ಎಂದು ಮಾತ್ರ ನಾನು ಹೇಳಬಯಸುತ್ತೇನೆ. ಇನ್ನೊಂದು ಆಶ್ಚರ್ಯಕರವಾದ ವಿಚಾರವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಈಗಾಗಲೇ ಪಾರ್ಲಿಮೆಂಟ್ ಸದಸ್ಯರ ನಮ್ಮ ಅಸೆಂಬ್ಲಿ ಸದಸ್ಯರ, ಮೈಸೂರು ದೇಶದ ಪ್ರಜೆಗಳ ಗಮನವನ್ನು ಸೆಳೆದಿರುವ ವಿಚಾರ. ಅದು ಹುಚ್ಚರ ಆಸ್ಪತ್ರೆಯ ವಿಚಾರ. ಮೈಸೂರು ಸರ್ಕಾರ ಮತ್ತು ಇಂಡಿಯಾ ಸರ್ಕಾರದ ಈ ಎರಡು

ಸರ್ಕಾರಗಳ ಸಹಾಯ ದ್ರವ್ಯದಿಂದ ನಡೆಯುತ್ತಾ ಹೆಸರು ಗಳಿಸಿರುವ ಮಾನಸಿಕ ರೋಗಗಳ ಆಸ್ಪತ್ರೆ ಮತ್ತು ಸಂಶೋಧನಾಲಯಕ್ಕೆ ಕೂಡ ಈಗ ಕ್ರೂರ ಗ್ರಹಗಳ ವಕ್ರದೃಷ್ಟಿ ಬಿದ್ದಿದೆ. ಇದರಲ್ಲಿ ಎರಡು ಭಾಗಗಳಿವೆ. ಇದು ಸ್ಥಾಪಿಸಲ್ಪಟ್ಟ ಪ್ರಾರಂಭದಲ್ಲಿ ತಾಂತ್ರಜ್ಞರ ಕೊರತೆಯಿಂದ ಎರಡು ಭಾಗಗಳನ್ನೂ ಒಬ್ಬರೇ ನೋಡಿಕೊಳ್ಳಬಹುದೆಂದು ತಾತ್ಕಾಲಿಕ ವ್ಯವಸ್ಥೆಯಿತ್ತು. ಈ ವ್ಯವಸ್ಥೆಯಿಂದ ಆಸ್ಪತ್ರೆಯ ಆಡಳಿತ ವಿಭಾಗಕ್ಕೆ ತೊಂದರೆಯಾಗುತ್ತಿರುವುದನ್ನು ಗಮನಿಸಿ ಸರ್ಕಾರದವರು ಒಂದು ಸಲಹಾ ಸಮಿತಿಯನ್ನು ಮೇಜರ್ ಜನರಲ್ ಎಸ್.ಎಲ್. ಭಾಟಿಯಾ ಅವರ ನೇತೃತ್ವದಲ್ಲಿ ಏರ್ಪಡಿಸಿದರು. ಆಸ್ಪತ್ರೆ ಮತ್ತು ಸಂಶೋಧನಾಲಯ ಎರಡರ ಬಗ್ಗೆ ವಿಮರ್ಶಿಸಿ ಆಡಳಿತಭಾಗವು ಡೈರೆಕ್ಟರ್ ಆಫ್ ಮೆಡಿಕಲ್ ಸರ್ವೀಸಸ್‌ರವರ ಅಧೀನಕ್ಕೊಳಪಟ್ಟು ಒಬ್ಬ ಸೂಪರಿಂಟೆಂಡೆಂಟ್ ನೋಡಿಕೊಳ್ಳಬೇಕೆಂತಲೂ, ಸಂಶೋಧನಾಲಯ ಮತ್ತು ಶಿಕ್ಷಣ ವಿಭಾಗ ಒಬ್ಬ ಡೈರೆಕ್ಟರ ಅಧೀನದಲ್ಲಿರಬೇಕೆಂತಲೂ 30ನೇ ಡಿಸೆಂಬರ್ 1959ರ ಆದೇಶದ ಮೇರೆಗೆ ನಮ್ಮ ಸರ್ಕಾರ ಒಪ್ಪಿಕೊಂಡಿದೆ. ಆಪ್ರಕಾರ ಆಸ್ಪತ್ರೆಯ ಆಡಳಿತವಿಭಾಗಕ್ಕೆ ವಿದೇಶಶಿಕ್ಷಣ ಪಡೆದು ತಜ್ಞರಾದ ಒಬ್ಬ ಸೂಪರಿಂಟೆಂಡೆಂಟ್ ನೇಮಿಸಿದೆ. ಆಡಳಿತ ಸುಗಮವಾಗಿ ನಡೆಯುತ್ತಾ ಇದೆ. ಸಂಶೋಧನೆ ಮತ್ತು ಶಿಕ್ಷಣ ವಿಭಾಗಕ್ಕೆ ಇಂಡಿಯಾ ಸರ್ಕಾರಕ್ಕೆ ಜವಾಬ್ದಾರಿ ಇರುವ ಒಬ್ಬ ಡೈರೆಕ್ಟರ್ ಇದ್ದಾರೆ. ಅವರು ನೋಡಿಕೊಳ್ಳುತ್ತಿದ್ದಾರೆ. ಈ ಮಧ್ಯೆ ರಾಜಕೀಯ ಪ್ರಭಾವ, ಪಕ್ಷಪಾತಗಳಿಗೆ ಒಳಪಟ್ಟೇ ಇರಬೇಕು. ಇಂಡಿಯಾ ಸರ್ಕಾರದ ಆರೋಗ್ಯ ಮಂತ್ರಿಗಳು ಇವೆರಡೂ ಒಂದೇ ಆಡಳಿತದಲ್ಲಿರಬೇಕು. ಇಲ್ಲವಾದರೆ ಸಂಶೋಧನಾಲಯವನ್ನು ಬೇರೆ ಕಡೆಗೆ ಬದಲಾಯಿಸಬೇಕಾಗುತ್ತದೆ ಎಂಬ ರೀತಿಯ ಬೆದರಿಕೆಯನ್ನು ತೋರಿಸುತ್ತಿದ್ದಾರೆ. ಸಂಶೋಧನಾಲಯಕ್ಕೆ ಭವ್ಯವಾದ ಕಟ್ಟಡ ಆಗುತ್ತಿದೆ. ಎಲ್ಲಾ ಕಾರ್ಯಕಲಾಪಗಳೂ ಸುಗಮವಾಗಿ ನಡೆಯುತ್ತಿವೆ. ಇಂತಹ ಪ್ರಸಂಗದಲ್ಲಿ ತಮಗೆ ಬೇಕಾದ ಸಂಶೋಧನಾಲಯದ ಡೈರೆಕ್ಟರ ಪ್ರತಿಷ್ಠೆಯನ್ನು ಬೆಳೆಸಬೇಕೆಂದು ಈ ರೀತಿ ಮಾಡುವುದು ಸೂಕ್ತವೇ ಎಂದು ಪ್ರಶ್ನಿಸಬೇಕಾಗಿದೆ. ಡೆಲ್ಲಿಯ ರಾಜಕೀಯ ಇಲ್ಲಿಯ ಆದಳಿತದಲ್ಲ ಪ್ರವೇಶಿಸಿದರೆ ನಮ್ಮ ಗತಿ ಏನು! ಅಪ್ಪಟ 16 ಆಣೆ ಕನ್ನಡಿಗರಾದ ಇಂಡಿಯಾ ಸರ್ಕಾರದ ಆರೋಗ್ಯ ಮಂತ್ರಿಗಳು ಮಾನಸಿಕ ರೋಗಗಳ ಸಂಶೋಧನಾಲಯವನ್ನು ಬೇರೆ ಕಡೆಗೆ ಸಾಗಿಸಿ ಎರಡು ಕೋಟಿ ಕನ್ನಡಿಗರ ಆಗ್ರಹಕ್ಕೂ, ಆ ಶಾಪಕ್ಕೂ ಗುರಿಯಾಗಲಾರರು ಎಂದು ಭಾವಿಸಿದ್ದೇನೆ. ಯಾವುದೋ ವ್ಯಕ್ತಿಯ ಅನುಕೂಲಕ್ಕಾಗಿ ಈಗಿರುವ ಪದ್ಧತಿಯನ್ನು ಬದಲಾಯಿಸಲಾಗಲಿ, ಇಲ್ಲವೇ ಸಂಶೋಧನಾಲಯವನ್ನು ಬೇರೆ ಕಡೆಗೆ ಬಿಟ್ಟುಕೊಡಲಾಗಲಿ ನಮ್ಮ ಸರ್ಕಾರ ಒಪ್ಪಕೂಡದೆಂದು ವಿನಂತಿಸುತ್ತೇನೆ.

ನಾನಿನ್ನು ಕೊನೆಯದಾಗಿ ನಮ್ಮ ಸರ್ಕಾರದವರಿಗೆ ಒಂದು ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಬಸವಣ್ಣನವರು ಮಂತ್ರಿಗಳಾಗಿದ್ದಾಗ ‘‘ಎನ್ನ ಒಡಲಾಣೆ, ಎನ್ನ ಮಡದಿ-ಮಕ್ಕಳಾಣೆ, ನಿಮ್ಮ ಚರಣ ಸೇವೆ ಮಾಡುತ್ತೇನೆ’ ಎಂಬುದಾಗಿ ಹೇಳಿ ಹೇಗೆ ನಿಷ್ಠೆಯಿಂದ ಮಂತ್ರಿಯಾದಾಗ ರಾಜ್ಯವನ್ನು ಆಳಿದರೋ, ಹಾಗೆಯೇ ಈಗಿರತಕ್ಕ ಮಂತ್ರಿಗಳೂ ಅವರ ನಿಷ್ಠೆಯನ್ನು ಅನುಸರಿಸಬೇಕೆಂದು ಹೇಳಿ, ಈಗ ಈ ಸಭೆಯ ಮುಂದಿರತಕ್ಕ ಪ್ಲವನಾಮ ಸಂವತ್ಸರದ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತೇನೆ.

†Sri V. S. PATIL (Belgaum I).—Sir, I am really thankful to you for giving me the opportunity to speak on the most important subject—the Budget. During the last four years, every time, I have pressed one important point according to me and that is about the discharge of the huge debts that has piled upon us year after year... Sir, according to the figures furnished by the Hon'ble Finance Minister, it appears, that have to pay interest this year which will amount to 5 crores seventy-six lakhs and the total debt has gone to 152 crores. From 1950 onwards, every year, we are seeing the figure of debt is in increasing. Correspondingly, the Hon'ble Minister has given us the figure of the assets in the Budget

(Sri V. S. PATIL)

Memorandum of this year and it is something like 280 crores. But, he has calculated this figure on the actual expenditure made on the various schemes. Is that the real price? Is any examination held by any department to ascertian the real value of these works? There is nothing of that sort at all. I submit, simply to throw some dust on the face of the members, he has shown these figures as 280 crores. This is not the real value or asset at all which the State possesses. If we go deeper and deeper into debts, our posterity will certainly blame us for creating such huge debts and not investing it on useful work. Sir, even the Congress Members have remarked that there is much leakage and much wasteage and much corruption in all these ventures. This shows that the valuation of these assets is not correctly assessed by the Finace Minister.

Then, Sir, on page 21, physical targets are given and the first is the food grain. He has given the achievement as five lakhs tons. I want to know from the Minister as to how he has come to this definite figure of five lakhs tons; what is the basis? Has he taken this figure from the Tahsildars of every taluk or every officer of every village or from the Agricultural Department? Sir, I had made this suggestion last time that in every village, we have got the Village Panchayet now and these village panchayets should be charged with the duty of examining the stages every now and then and the actual yield of every field and collect figures. Then alone, we can have correct figures. Figures collected for sample surveys cannot be applied to the whole district. The Taluka Boards and the Village Panchayets should be entrusted with this work of collecting figures after actually finding out the yield in every village.

Sir, on page 2, the Finance Minister has said, "Expansion of Social service was given its proper share. The question of removal of unemployment and underemployment was also kept in view". I do not understand wheter this unemployment and under employment is meant only to the educated classes because Government has absolutely no statistics regarding the underemployment or unemployment of the educated classes at all. I had suggested that the Village Panchayet should be entrusted with this work of finding out as to who has got employment and who has got half-employment and who is unemployed. This should be collected from the Village Panchayet level and not from the Secretariat level.

Even though the Hon'ble Minister has stated here that his Government has kept in view the question of unemployment and undermployment, Government have done nothing absolutely in this regard for the last four years. I do not think Government has any scheme or the real intention to find out the actual condition of the people in the rural areas. I repeat my suggestion that it should be made obligatory on the panchayats to furnish real statistics.

I would now speak about our revenue from the Centre. The Budget Memorandum on page 8 speaks of the basis on which the Centre makes allocations to the States. From excise on the basis of our population, we get 6·52, from income tax, we get on the basis of population 5.14, from estates duty, we get 5·43 based on population, proceeds from taxes on railways are allocated on the basis of mileage running through a State. I would now like to ask why there is such disparity in the percentage of allotment on the first three items mentioned by me, when the basis for all of them is the same, that is, the population of the State. How has 6·52 reduced itself to 5.14. I would like the Finance Minister to enlighten us on this point.

Regarding taxes on railway, the details are furnished on page 11. It is based on the ratio of road mileage within each State with due allowance for wide variations of density of traffic between railway zones and as between various guages in each zone. It is a well known fact that Northern India has been provided with more railway lines than the South and if this share is to be based on the length of railway passing through each State, then naturally, the South will suffer. In the first place, Northern India has been favoured with more railways and now in paying shares of proceeds on railways, if the length of railway is the criterion, the South will get double injustice and would suffer a loss. This aspect ought to have focussed on the Centre by this Government and they should try to increase this source of revenue.

I would not dwell in detail on the question of Prohibition because one of the worthy friends on the other side, who holds a high position in the Congress organisation, has definitely stated on the floor of this House that Prohibition Policy must be scrapped. By the way, I do not know how the Congress party or the ruling party allows these things to be stated on the floor of the House. About two days ago, one Hon'ble Member had alleged that when he was travelling along with one of the Ministers in a truck, he has actually seen the giving of a bribe by the driver to the police constable and this had happened six times. This is a very serious charge made by a Hon'ble Member on the Congress side. I do not know whether the Member was sleeping when we on the Opposition were shouting that the administration is corrupt. When an offence is committed in his presence and he does not try to prevent it, he becomes an accomplice to the commission of the offence. That is the law and the practice. I do not know why my friend belonging to the other side kept quiet when the bribe was given in his presence. He moreover says that the Minister was also present. If these things are tr e, both the Ministers and the Congress Member concerned, do not deserve to be Members of this Assembly. According to their own admission, they are accomplices in the crime of bribing and giving of encouragement to bribery. They are abettors. I submit that Chief Minister or the Leader of the House......

Sri B. D. JATTI.—Hon'ble Revenue Minister has not admitted.

Sri V. S. PATIL.—Whether he has admitted or not, my submission is simple. I have written about this matter to give me permission to speak on this subject. I now take this opportunity to appeal to the Chief Minister that when his own colleague was present at the time of the commission of the offence–if it is a fact–he must resign and get out of Government. If his colleague says that he was not present at the time of giving the bribe, then the member who has actually made the allegation on the floor of the House must tender an apology to the House and withdraw his statement. One of the two, ought to happen.

Sri B. D. JATTI.—Hon'ble Revenue Minister has heard the allegation very carefully. He has the right to reply and he will make a statement here. There is no doubt about it. Why should the Hon'ble Member throw a challenge just now.

Sri V. S. PATIL.—My submission is quite clear. A statement has been made in this House that the bribe was given half–a–dozen times by a particular individual to a police officer. If that statement is correct, the Minister who was present must get out of the cabinet. If that statement is incorrect, then the Member must be forced to withdraw his statement.

Sri B. D. JATTI.—What the Member should do is a matter left to the Speaker. We are not concerned. What the Minister has seen or heard, he is going to make a statement. There is no doubt about it.

Sri V. S. PATIL.—I am asking the leader of the party what he is going to do in this matter.

Sri B. D. JATTI.—I do not understand the mind of the Hon'ble Member. The Minister would reply to the point. What further action could I take? I only know for definite that the Hon'ble Minister for Revenue has not seen any bribe being given. That much I know.

Sri G. VENKATAI GOWDA.—What about the allegation?

Sri B. D. JATTI.—I do not know. I am not concerned.

Sri V. S. PATIL.—We are now governed by a parliamentary system of democracy. The ruling party ought to be disciplined. If they are indisciplined, and if they are to behave like the people on the streets, the Government will loose respect.

Sri B. D. JATTI.—What we have to do in the party is not the concern of the Hon'ble Member. It is left to the party.

Sri V. S. PATIL.—It is not solely for the party...

Mr. SPEAKER.—He can take exception to the statement made by the Hon'ble Member. But with the discipline of the party, we are not concerned here.

Sri V. S. PATIL.—The Government is run by the Ruling Party. Even though we are not Members of the ruling party, we have to see whether that Party is functioning properly because they are our

masters. We are supervisors both of the Party as well as the Government.

5-00 P.M.

Mr. SPEAKER.—We are concerned with the Party discipline only so far as their conduct in the House is concerned.

Sri V. S. PATIL.—Sir, simply because that matter was raked up by one Hon'ble Member, that question came up. Otherwise, I would not have referred to it. I have not referred even to the expansion of the Ministry. Let them have any number of Ministers. But it appears that all these four or five chairs are always kept vacant, possibly they may want to increase the number further.

Sri B. D. JATTI.—For the information of the Hon'ble Member, I may say that these Ministers and the Deputy Ministers are in the Council. Let him not make wrong statements Sir.

Sri V. S. PATIL.—I have always been seeing that these chairs are always kept vacant and even the Cabinet Ministers are sitting on the back-side.

Sri C. M. ARUMUGHAM.—These empty Chairs may be expected to be filled up gradually.

Mr. SPEAKER.—These Chairs are not empty at all. They are vacant because those Ministers are attending the Council which is also sitting.

Sri V. S. PATIL.—Sir, it has become a convention to ventilate grievances at the time of the Budget. That is why I should like to refer to our grievances within a few minutes at my disposal. Our grievance is about the border issue. His Excellency the Governor before the Reorganisation of the State has clearly said in his statement to the Houses that the interests of the minorities will be safeguarded. Then in the first speech of the Governor after the Reorganisation, there is a clear statement made that all the Kannada areas that are lying outside the State will be brought back into the State. The Constitution clearly provides under Articles 28 and 30 that the interests of the minorities and the rights of the minorities will be safeguarded. So far as the linguistic minorities are concerned, there is a provision in the Constitution to safeguard their interests. But what is our Government doing about this? They are forcing or they have passed orders to make Kannada compulsory from the third standard in Marathi schools. If it is not followed, then what would be the result? When a subject is made compulsory, if the student does not pass in that subject, he will have to remain there and he will not be admitted to sit in the next higher class. So a student who will not study Kannada in the third standard, will not be admitted to the fourth standard and thus the very purpose or the very intention of safeguarding the interests of the minorities under the Constitution has been defeated by this particular order of the Government. If the Government wants to persist in it, I submit that

(Sri V. S. Patil)

we will have to go to the highest judicial tribunal to get this order cancelled. But that will create unnecessary trouble and bitterness and hatred in the minds of the minorities. So, I should like to suggest to this Government that in order to safeguard the interests of the minorities, a separate officer just on the lines of the Central Government may be created and send that officer to see whether the minorities have been discriminated or have been put to any loss, should be examined. If this is not done, then I submit Sir, that no justice can be had in this State so far as the minorities are concerned. One of the Members has referred to the administration here. He said two years back, he made one representation. For the last two years, he is trying to get things done but papers are not available. He subsequently said 'if this is the fate of Members, what about the general public'. I go a step further and say: 'if this is the fate of the general public, where there are two communities which are the ruling communities in the State—in one sentence—what about minorities'. 'Who is going to look after them'? This is the condition to which we have been reduced and even though we are trying to get out of this State—we, not individuals, but parts of the territory which is predominantly Marathi—for that purpose, my friend the Chief Minister has several times tried to advice us by saying 'act according to the Constitution in a constitutional way'. He has pressed in very vehemently and several times. May I ask him through you Sir, that since 1955, we have put in applications signed by lakhs and lakhs of people, we have held meetings and passed resolutions practically in every village in the border area. We held conferences and there also, we have passed resolutions subscribing to this particular view that particular parts must go to Marathi State, Then we had opportunities of sending deputations to the various persons concerned. When all these means failed, then only we had to resort to the method which Mahatma Gandhi had adopted for getting independence to our Country, *i.e.*, peaceful satyagraha. In the first satyagraha, more than 5,000 people resorted to jail. In the second satyagraha—when assurance was given in 1956 under the Reorganisation Act was to be passed, that Zonal Council will be set up and that Zonal Council will decide our question, then we withdrew Satyagraha in 1956. When the Zonal Council also failed in this attempt, we had again to start another Satyagraha. In that second Satyagraha, more than 16,000 resorted to jail in a peaceful manner. When that also failed and did not give any hopes, we had to resort, as a last resort to the no-tax campaign. That was also peaceful. My friend the Hon'ble Chief Minister has said that once or twice he had gone to a particular village on the border area where people are forced to resort to no-tax campaign and that they were very willing and they had even cordially invited him and even ladies had come to request him to crush down this movement, etc. It is a single village where my friend the Chief Minister had gone in the company of his police officers. I challenge or invite him rather to come with me. I

will take him to every village ; let him get convinced whether people desire to remain in Mysore or whether they desire to go to Maharashtra.

Sri K. PUTTASWAMY.—I think there will be no 'command performance'!.

Sri V. S. PATIL.—No, no. I have got complete faith in the Chief Minister and the Chief Minister also has got faith, I presume, in me. I will not betray him and I do hope that he will also not betray me. There is no question of pre-arranging and making a show.

Sri B. R. SUNTHANKAR.—Let it be a surprise visit at any time.

Sri V. S. PATIL.—Not only that. To follow constitutional methods, we first fought bye-elections in the Bombay Assembly on this ticket, on this issue ; and even though the Congress Party could not find a suitable candidate to contest that election, they had set up a relation of mine in that constituency and we have defeated the congress candidate here, although he was an M.A., LL.B., and a relative of mine as against my friend here an agriculturist.

Sri G. N. PUTTANNA.—Which is that constituency ?

Sri V. S. PATIL.—Belgaum Taluk. Then there was general elections. In all the elections held in the border area, we have won. Then next came the panchayat elections. We have won all the gram panchayats. About the panchayats which decide to remain in Mysore, we have the least objection, but those panchayats deciding that they desire to go to Maharashtra should be allowed to go. Then came the taluk board elections. Even there, we are not claiming all the areas, but we are clamining only such areas where the people have voted for us in a majority. Even take the recent example of the taluk board elections and decide the matter. If even the that is not sufficient. then as Sri Sunthankar has said a few days back, let a plebicite be taken in this area and if the people desire to remain in Mysore, we have the least objection. All those villages where you can get the majority, let them remain in Mysore, and all those villages where they desire to go to Maharashtra, if they are contiguous to Maharashtra, they should be allowed to go to Maharashtra.

MR. SPEAKER.—His time is up.

Sri. V. S. PATIL.—Lastly, we had held a conference at Belgaum. Recently on the 5th we held a conference in which we invited only the people elected either to the taluk Boards or the gram panchayats. Those person had come and they were about 850 in all. They have also passed a resolution. We are supporting the cause of the those Kannada areas that have been included in Karala, Madras, Andhra and even in Maharashtra. Why should those people be made to suffer only for the sake of Belgaum ? The whole hitch is about the City of Belgaum. Why? Because some interested people want that Belgaum must remain in Kannada State. Lakhs of Kannada people outside have been made to suffer only because of Belgaum City. Even in belgaum City, let them

(Sri V. S. PATIL)

take a plebicite. If the Mysore State gets majority even in Belgaum City, we are ready to give up that claim If you are goiug to value the verdict and the opinion of the people in general, then these things should be followed. It is no use challenging or counter–challenging on the floor of this House. So, I submit that this atitude on the part of the Government will unnecessarily create bickerings and a sort of hatred between the two communities, which we must try to avoid. That is why I again appeal on this occasion because perhaps this will be the last occasion to speak because we do not know whether we will be able to speak on the budget next year.

An HON'BLE MEMBER.—You don't want to stand for election ?

Sri V. S. PATIL.—If you decide that question, I will give up politics even. Only for that purpose, I am standing. I do not want to dabble in politics. We will leave it to you, because politics has become very dangerous. People will throw stones at us tomorrow when they come to know that they have to pay such a huge debt. So I submit that our prayer for justice should be considered by the Government and by the people of this state and cordial relations between our people and the Kannada people should be continued for ever.

Mr. SPEAKER.—Now, I can accommodate two Members before we rice. I will give the chance to Sri Madappa and Dr. Naghoor.

I would also like to say another thing. Last time, when I apportioned half–an–hour for each Member, I had also made it clear that the time limit might have to be cut still further towards the end. I do not want to do it to day, but I may do it to morrow. Tomorrow there will be no question hour because questions could not be printed in the press because of the holiday. So, we will use all the time to morrow for the discussion of the budget. Ministers will give their reply on Monday. The time at our disposal tomorrow will be three and half hours. In that can accommodate about Seven members at the rate of half–an–hour each. but if the time taken is less than that I can accommodate more. We will see what happens. I request those friends who cannot get a chance now that they will get a chance at the time of the discussion of the demands for grants.

Sri C. J. MUCKANNAPPA.—Is it true that the Government have agreed to give two days more for general discussion of the budget in the Upper House ?

Mr. SPEAKER.—I do not know. But we have got extension by one day.

† ಯು. ಎಂ. ಮಾದಪ್ಪ.—(ಚಾಮರಾಜನಗರ) ! ಸ್ವಾಮಿ, ನಾನು ಈ ಸಭೆಯಲ್ಲಿ 1952ನೇ ಇಸವಿಯಿಂದಲೂ ಸದಸ್ಯನಾಗಿದ್ದೇನೆ. ಆಯವ್ಯಯ ಪಟ್ಟಿಗಳನ್ನು ಸುಮಾರು ಹತ್ತು ನೋಡಿದ್ದೇನೆ. ಈ ಬಗ್ಗೆ ಒಂದು ವಿಷಯವನ್ನು ಈ ಸಭೆಗೆ ತಿಳಿಸಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. 1952ರಿಂದ 56ರವರೆಗೆ ಡಿಫಿಸಿಟ್ ಬಡ್ಜೆಟ್ಟು ಆಯಿತು. ಆಮೇಲೆ ಶ್ರೀಮಾನ್

ಮರಿಯಪ್ಪನವರು ಆರ್ಥಿಕ ಮಂತ್ರಿಗಳಾಗಿ ಬಂದರು. 1952ರಿಂದ 56ರವರೆಗೆ ಮತ್ತು ಅದಕ್ಕೂ ಹಿಂದಿನಿಂದ ಡಿಫಿಸಿಟ್ಟುಗಳಾಗಿ ಬಂದಿರುವ ಈ ಬಡ್ಜೆಟ್ಟನ್ನು ಭರ್ತಿ ಮಾಡಬೇಕೆಂದು ಮಾಡು ತ್ತಿದ್ದಾರೆ. ಇದನ್ನು ಜ್ಞಾಪಕದಲ್ಲಿ ಇಟ್ಟುಕೊಂಡೋ ಏನೋ 1957ನೇ ಇಸವಿಗೆ ಬಂದಾಗ ಅವರು ಸರ್‌ಪ್ಲಸ್ಸು ಬಡ್ಜೆಟ್ಟನ್ನು ಇಟ್ಟರು.—ಅದನ್ನು ಹಾಗೇ ಮುಂದುವರಿಸಿಕೊಂಡೇ ಬಂದರು. 1956-57ರಿಂದ 1960-61ರವರೆಗೆ ಸರ್‌ಪ್ಲಸ್ ಬಡ್ಜೆಟ್‌ನಿಂದ ಈಗ ಡೆಫಿಸಿಟ್ಟು ಬಡ್ಜೆಟ್ಟಿಗೆ ಬಂದಿದ್ದಾರೆ. ಈ ಯುಗ ತಲಪಿದರು.

ಆದರೂ ಇದು ಇವರಿಗೆ ಹೇಗೆ ಬಂತು ಎಂಬುದಾಗಿ ನಾನು ಯೋಚನೆ ಮಾಡುತ್ತಿದ್ದೇನೆ ನನ್ನಲ್ಲಿ ಈ ಬಗ್ಗೆ ಎಲ್ಲ ಅಂಕಿಅಂಶಗಳೂ ಇವೆ. ಅಂಕಿ ಅಂಶಗಳು ಯಾವ ರೀತಿ ಇದರಲ್ಲಿ ಅಡಕವಾಗಿವೆಯೆಂಬುದು ಅವರಿಗೂ ಗೊತ್ತು. ಸಾರ್ವಜನಿಕರಿಗೂ ಗೊತ್ತು ಎಂಬುದಾಗಿ ನಾನು ಅರ್ಥಮಾಡಿಕೊಂಡಿದ್ದೇನೆ. ಅರ್ಥ ಶಾಸ್ತ್ರಜ್ಞರು ತಿಳಿಸುವುದಕ್ಕೆ ಪ್ರಯತ್ನ ಮಾಡಿದರೂ ಪೂರ್ಣವಾಗಿ ತಿಳಿಯುವುದಕ್ಕಾಗದೆ ಇರುವಂತಹ ಅವಕಾಶ ಇದರಲ್ಲಿ ಇದೆಯೆಂದು ನನ್ನ ಭಾವನೆ. ಈ ಕಾಂಗ್ರೆಸ್ ಸರ್ಕಾರ ಒಂದು ಆರ್ಥಿಕ ನೀತಿಯ ಆಧಾರದ ಮೇಲೆ ಇದನ್ನು ಆಕರ್ಷಣೆ ಮಾಡಿದ್ದಾರೆಂದು ನಾನು ತಿಳಿದಿದ್ದೇನೆ. ಇದು ನಿಜವಾಗಿ ಕೇಂದ್ರ ಸರ್ಕಾರದ ಹಣಕಾಸಿನ ನೀತಿ ಮತ್ತು ಅದನ್ನೇ ಆಧಾರವಾಗಿಟ್ಟುಕೊಂಡು ಮಾಡಿರತಕ್ಕ ರಾಜ್ಯಸರ್ಕಾರದ ಹಣಕಾಸಿನ ನೀತಿ ಎಂಬುದಾಗಿ ನಾನು ಸ್ಪಷ್ಟವಾಗಿ ಹೇಳಬಲ್ಲೆ. ಅದು ಹೇಗೆ ಶ್ರೀಮಾನ್ ಮರಿಯಪ್ಪನವರು ವೈಯಕ್ತಿಕವಾಗಿ ಇವರ ಮಧ್ಯೆ ಹೋಗುತ್ತಿದ್ದಾರೋ ಗೊತ್ತಿಲ್ಲ. ಅವರು ಬಹಳ ಕಷ್ಟಕಾಲದಲ್ಲಿ ಸಿಕ್ಕಿ ನರಳುತ್ತಿದ್ದಾರೆಂದು ನಾನು ಹೇಳಬಲ್ಲೆ. ಒಂದು ಕಡೆ ದೇಶದಲ್ಲಿ ಡಿಫಿಸಿಟ್ ಫೈನಾನ್ಸ್, ಇನ್ನೊಂದು ಕಡೆ ಡೆಫಿಸಿಟ್ ಬಡ್ಜೆಟಿಂಗ್—ಇವೆ ರಡರ ಮಧ್ಯೆ ಸಿಕ್ಕಿ ಅವರು ನರಳುತ್ತಿದ್ದಾರೆ. ಹೀಗಿರುವುದರಿಂದ ಅವರು ದೇಶದಲ್ಲಿ ಏನು ಮಾಡುತ್ತಿದ್ದಾರೆ ಎಂಬುದನ್ನು ಅರ್ಥ ಶಾಸ್ತ್ರ ತಿಳಿದಂತಹ ಜನ ಬಹಳವಾಗಿ ಎದುರು ನೋಡುತ್ತಿದ್ದಾರೆಂದು ನನಗನ್ನಿಸುತ್ತದೆ. ಅವರಿಗೆ ಗೊತ್ತಿರುವ ಹಾಗೆ deficit budget on revenue account ಮತ್ತು deficit buget on copital account ತೋರಿಸಿದ್ದಾರೆ. ಇಂಥಾದ್ದರಲ್ಲಿ ಓವರ್ ಆರ್ ಡಿಫಿಸಿಟ್ ಬಡ್ಜೆಟ್ಟು ಎಷ್ಟು ಎಂಬುದಾಗಿ ನೋಡಿ ದರೆ ಸುಮಾರು 539.47 ಲಕ್ಷ ರೂಪಾಯಿಗಳು ಇವತ್ತಿನ ದಿವಸ ನಮಗೆ ಕಾಣಿಸುತ್ತದೆ. ನಾವು ಹೇಳಿದಂತೆ ರೆವಿನ್ಯೂ ಬಡ್ಜೆಟ್ಟನಲ್ಲಿ ಇವತ್ತಿನ ದಿವಸ 435.2 ಇದೆ. ಆದರೆ ಇವರು ಪ್ರಾರಂಭ ಮಾಡುವಾಗ opening balance ಏನಿತ್ತು ಎಂದರೆ ಮೈನಸ್ 244.44. ಈಗ ಅವರಿಗೆ ಕೊನೆಯದಾಗಿ ಉಳಿದಿರುವುದು ಡಿಫಿಸಿಟ್. ಈ ವರ್ಷದ ಕೊನೆಯಲ್ಲಿ ಸುಮಾರು 295.03 ಮೈನಸ್ ಬೇರೆ ಆಗಿದೆ. ಎಲ್ಲವನ್ನು ಒಟ್ಟಿಗೆ ಸೇರಿಸಿದರೆ 539.47 ಆಗುತ್ತದೆ, ಅಂದ ಮೇಲೆ ಇದು ಎಷ್ಟರಮಟ್ಟಿಗೆ ಸೌಂಡ್ ಆಗಿದೆ ಎಂದು ಹೇಳುವುದು ಕಷ್ಟ. ನಾನು ಯಾವಾಗಲೂ ಬಡ್ಜೆಟ್ ಅಂಕಿಅಂಶಗಳ ಮೇಲೆಯೇ ಸಾಮಾನ್ಯವಾಗಿ ಮಾತನಾಡುವುದು ಎಂದು ಅವರು ಹೇಳುತ್ತಾರೆ. ಅದೇ ಅವರಲ್ಲಿರತಕ್ಕ ಚಾಣಕ್ಯತನ, ಇದೇನು ಹಣಕಾಸಿನ ಸಚಿವರ ನೀತಿಯೇ ? ಹಣ ಎಷ್ಟು ಇದೆ ಎಂಬುದನ್ನು ವಸೂಲಾದ ಮೇಲೂ ಸಹ ಹೇಳಲಿಲ್ಲ. ಅಂದಮೇಲೆ ಇವರು ಇನ್ನು ಎಷ್ಟರಮಟ್ಟಿಗೆ ಯಶಸ್ವಿಯನ್ನು ಗಳಿಸುತ್ತಾರೆಂದು ನನಗನ್ನಿ ಸುತ್ತದೆ. ದೇಶದಲ್ಲಿ ಈ ಬಡ್ಜೆಟ್ ಮೇಲೆ ಟೀಕೆ ಮಾಡುತ್ತಿರುವಾಗ ಮಾರ್ಕೆಟ್ಟಿನಲ್ಲಿ ಅನೇಕ ಆಹಾರ ಪದಾರ್ಥಗಳ ಬೆಲೆಯು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗುತ್ತದೆಂಬು ದನ್ನು ಸರ್ಕಾರದವರು ನೋಡಬೇಕು. ಇದೇನು ಇಂಡಿಯಾ ಸರ್ಕಾರದ ನೀತಿಯೋ ಅಥವಾ ನಮ್ಮ ಸರ್ಕಾರದ ನೀತಿಯೋ ? ಒಟ್ಟಿನಲ್ಲಿ ಎಲ್ಲ ಪದಾಥಗಳ ಬೆಲೆಯೂ ಏರುವುದಕ್ಕೆ ಅವ ಕಾಶವಾಗುತ್ತದೆಂಬುದಾಗಿ ಈಗಾಗಲೇ ಅರ್ಥ ಶಾಸ್ತ್ರಜ್ಞರು ತಿಳಿಸಿದ್ದಾರೆ. ಸಾಮಾನ್ಯ ವಾಗಿ ಇದರಿಂದ ಆ ವಸ್ತುಗಳು ಆ ಬೆಲೆಗೆ ಏರಲೇಬೇಕು. ಯಾವಾಗ ಡಿಫಿಸಿಟ್

(ಯು. ಎಂ. ಮಾದಪ್ಪ)

ಫೈನಾಂನ್ಸಿಂಗ್ ಮತ್ತು ಡಿಫಿಸಿಟ್ ಬಡ್ಜೆಟ್ಟಿಂಗ್ ಇರುತ್ತದೋ ಆಗ ರೆವಿನ್ಯೂ ಅಕೌಂಟಿಗೆ 2 ಕೋಟಿ ಜಾಸ್ತಿ ಕೊಡಬೇಕು. ಪ್ಲಾನ್ ಯಶಸ್ವಿಯಾಗುವುದಕ್ಕೋಸ್ಕರ ಬೆಲೆಗಳಲ್ಲಿ ಸ್ವಲ್ಪ ಏರುಪೇರು ಆಗುತ್ತಿರುತ್ತದೆ. ಇಂತಹ ಪರಿಸ್ಥಿತಿ ಮುಂದೆಯೂ ಬರುತ್ತದೆ. ಅದು ಯಾವಾಗ ಬರುತ್ತದೆ, ಹಣಕಾಸಿನ ಸಚಿವರಲ್ಲಿ ಒಂದು ದಕ್ಷತೆ, ಎಬಿಲಿಟಿ, ಇಲ್ಲದಿದ್ದರೆ ಬರುತ್ತದೆಂದು ನಾನು ನಿರೀಕ್ಷಣೆ ಮಾಡುತ್ತಿದ್ದೇನೆ. ಒಂದು ವೇಳೆ ಸರ್ಪ್ಲಸ್ ಬಡ್ಜೆಟ್ ಇರುವುದಾದರೆ ಅಷ್ಟು ಏರುಪೇರು ಇರುವಾಗ ಮೈನಸ್ ಬಡ್ಜೆಟ್ ಅಂದರೆ ಡಿಫಿಸಿಟ್ ಬಂದರೂ ಆಗ ಇನ್ನು ಎಷ್ಟು ಬೆಲೆ ಏರುತ್ತದೋ ಎಂದು ನನಗೆ ಭಯವಾಗುತ್ತಿದೆ. ದೇಶ ಆಗ ಖಂಡಿತ ವಾಗಿ ಅಧೋಗತಿಗೆ ಹೋಗುತ್ತದೆಂಬುದನ್ನು ತಾವೇ ಯೋಚನೆಮಾಡಬೇಕು. ಈ ರೀತಿ ತಾಪೂಮಾಡಿರುವುದಕ್ಕೆ ಕೇಂದ್ರ ಸರ್ಕಾರ ಮತ್ತು ನೀವು ಜವಾಬ್ದಾರರಾಗುತ್ತಿದ್ದೀರಿ ಎಂದು ನಾನು ಹೇಳಬೇಕಾಗಿದೆ. ಈಗ ಮುಖ್ಯವಾಗಿ ದೇಶದಲ್ಲಿ ಆಗಬೇಕಾದುದು ಮೂರು ವಿಷಯಗಳು ಮೊದಲು Inflation of money, devaluation of money ಮತ್ತು speedy circulation of money, ಇವು ಮೂರು ಈಗ ಬಹಳ ಮುಖ್ಯವಾದವುಗಳು. ಯುದ್ಧಕಾಲ ದಲ್ಲಿ ಆಗತಕ್ಕಂಥ ಕೆಲಸಗಳಿಗೆ ಇವತ್ತಿನ ದಿವಸ ಪ್ಲಾನ್ ಪೀರಿಯಡ್ಡಿನಲ್ಲಿ ಹಣವನ್ನು ಹಾಕಿ ದ್ದಾರೆ. ಪ್ಲಾನ್ ಪೀರಿಯಡ್‌ನಿಂದ ಸಕ್ಸೆಸ್ ಆಗಬೇಕಾದರೆ, supply of money ಬಹಳ ಚೆನ್ನಾಗಿರಬೇಕು. ಒಂದು ವೇಳೆ ಅಷ್ಟು ವೇಗದಲ್ಲಿ ನೀವು ಹೋಗದಿದ್ದರೆ ಈ ಖೋತಾ ಬಡ್ಜೆ ಟ್ಟನ್ನು ಸರಿದೂಗಿಸುವುದು ಬಹಳ ಕಷ್ಟವಾಗುತ್ತದೆಂದು ನಾನು ಹೇಳುತೇನೆ. Supply of money ಬಗ್ಗೆ ತಾವು ವಿಚಾರಮಾಡಿ ಒಂದು ತೀರ್ಮಾನಕ್ಕೆ ಬರುವಾಗ ಅವರಲ್ಲೂ ಹಣಕಾಸಿನ ಮಂತ್ರಿಗಳು ಬಹಳ ಎಚ್ಚರಿಕೆಯಿಂದ ಅಲಾಟ್ ಮಾಡಬೇಕೆಂದು ನಾನು ಅವರಿಗೆ ಹೇಳುತ್ತೇನೆ. ಶ್ರೀ ಬಿ. ಆರ್. ಮಿಶ್ರಾ ಅವರೇ ಇಂಡಿಯನ್ ಫೆಡರಲ್ ಫೈನಾನ್ಸ್ ಕಮಿಷನ್ ಮುಂದೆ ಒಂದು ಮಾತನ್ನು ಹೇಳಿದ್ದಾರೆ, ಅದು ಈ ರೀತಿ ಇದೆ.

> "The Finance Minister should act towards estimates of the spending department as *Advocates diaboli*. As the guardian of the peoples purse and as the man who will have to find the money, it is for him to see that no service is included that is not essential and every service that is included is provided for in the most economical manner. The Finance Minister should really be the watch-dog of economy."

ಇವುಗಳ ಪೈಕಿ ಯಾವೊಂದನ್ನೂ ಶ್ರೀಮಾನ್ ಮರಿಯಪ್ಪನವರು ಮಾಡಲಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಎಲ್ಲೋ ಅವರು ಈ ರೀತಿಯಲ್ಲಿ ಮಾಡುವು ದಕ್ಕೆ ಕಾಲಾವಕಾಶವಿರಲಿಲ್ಲವೆಂದು ನಾನು ತಿಳಿಯಬೇಕಾಗಿದೆ. ಅದು ಹೇಗೆ ಎಂಬುದನ್ನು ಅವರಿಗೆ ಪ್ರೂವ್ ಮಾಡಿ ಬೇಕಾದರೆ ಹೇಳುತ್ತೇನೆ. ಈಗಲೂ ಬೇಕಾದಷ್ಟು ರಿಪೋರ್ಟ್‌ಗಳು ನಮ್ಮಲ್ಲಿವೆ. ಅವನ್ನೆಲ್ಲಾ ತೆಗೆದು ನೋಡಲಿ. ಎಲ್ಲವೂ ಗೊತ್ತಾಗುತ್ತದೆ. ಈಗ "Report of the Public Accounts Committe, Report of the Audit and Accounts Report of the Estimates Committee and Report of the Madhava Rao Committee— ಇವು ಇಷ್ಟೂ ತಮ್ಮ ಮುಂದೆ ಇಟ್ಟುಕೊಂಡು ಅವನ್ನು ಎಷ್ಟರಮಟ್ಟಿಗೆ ಈ ವರೆಗೆ ಕಾರ್ಯಗತ ಮಾಡಿದ್ದೀರಿ ಎಂಬುದರಮೇಲೆ ತಮ್ಮ ಕಾರ್ಯದಕ್ಷತೆ ತೋರಿಸುತ್ತ ದೆಂಬುದಾಗಿ ನಾನು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಮಾಧವರಾವ್ ಕಮಿಟಿ ಹಿಂದಿನ ಕಾಲಕ್ಕೆ ಏನೇನು ಬೇಕಾ ಗಿತ್ತೋ ಅದಕ್ಕೆ ಸರಿಹೊಂದಿದೆ. ಈಗ ಅದಕ್ಕಿಂತಲೂ ಚೆನ್ನಾಗಿರತಕ್ಕ ಕಮಿಟಿ ರಿಪೋರ್ಟ್

ಗಳು ನಮ್ಮಲ್ಲಿವೆ. We have built up reserves. It is an old report which has no relation to the existing facts. ಹಿಂದೆ ಡಿಫಿಸಿಟ್ ಬಡ್ಜೆಟ್ ಇದ್ದುದೆಲ್ಲಾ ಹೋಗಿ ಸರ್ಪ್ಲಸ್ ಬಡ್ಜೆಟ್ ಆಗುತ್ತಲೇ ಬರುತ್ತಿದೆ. ಈ ವರ್ಷ ಮಾತ್ರ ಕೆಲವು ಕಾರಣ ಗಳಿಂದ ಡಿಫಿಸಿಟ್ ಬಡ್ಜೆಟ್ ಆಗಿದೆ.

ಶ್ರೀ ಯು. ಎಂ. ಮಾದಪ್ಪ.—ನಾನು ಇದನ್ನು ಹೇಳಬೇಕೇ, ಬೇಡವೇ ಎಂದು ಯೋಚನೆ ಮಾಡಿದೆ. ಆದರೂ ನಾನು ಈ ಸಂದರ್ಭದಲ್ಲಿ ಹೇಳಿದ್ದು ಸರಿ ಎಂದು ನನಗನ್ನಿಸಿತು. ಈಗ ಶ್ರೀ ವಾರ್ಣ ರಾಮಚಂದ್ರರಾಯರ ನೇತೃತ್ವದಲ್ಲಿ ಮತ್ತೊಂದು ಕಮಿಟಿಯನ್ನು ರಚನೆ ಮಾಡಿದ್ದಿರಿ. ಮಾದವರಾವ್ ಕಮಿಟಿ ರಿಪೋರ್ಟ್‌ಮೇಲೆ ಏನು ಜಯಗಳಿಸಿದ್ದೀರಿ ಎಂಬ ಬಗ್ಗೆ ನಮ್ಮ ಈ ಸಭೆಗೆ ಯಾವ ಒಂದು ವರದಿಯನ್ನೂ ಕೊಡದಿದ್ದಮೇಲೆ ನಿವು ಎಷ್ಟರ ಮಟ್ಟಿಗೆ ಎಕಾನಮಿ ಮಾಡಿದ್ದೀರಿ ಎಂಬುದು ನಮಗೆ ಗೊತ್ತಾಗುತ್ತದೆ. ನಮಗೆ ಆ ಬಗ್ಗೆ ಏನಾಯಿತು ಎಂಬುದನ್ನು ನೀವು ತಿಳಿಸಲೇ ಇಲ್ಲ. ಆ ಬಗ್ಗೆ ಯಾವ ಒಂದು ವರದಿಯೂ ನಮ್ಮ ಮುಂದೆ ಇಲ್ಲ. ಎಷ್ಟರ ಮಟ್ಟಿಗೆ ಜಯ ಗಳಿಸಿದ್ದೀರಿ ಎಂಬುದನ್ನು ಹೇಳಲೂ ಇಲ್ಲ, ಇನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟಿನಲ್ಲಿ ನೋಡಿದರೆ ಸುಮಾರು 10 ವರ್ಷಗಳಿಂದಲೂ ಪೋರ್ಸಲೀನ್ ಫ್ಯಾಕ್ಟರಿಯ ಸ್ಟಾಕ್ ವೆರಿಫಿಕೇಷನ್ ನಡೆದಿಲ್ಲ ಎಂದು ಬರೆಯುತ್ತಿದ್ದಾರೆ. ಹಾಗಾ ದರೆ ಇವರಿಗೆ ಹಣವನ್ನು ಹೇಗೆ ಕೊಟ್ಟಿರಿ ? ಹಣ ಕೊಟ್ಟಂತೆ ಅದಕ್ಕೆ ಸಂಬಂದಪಟ್ಟಂತೆ ಲಾಭ ಬಂದಿದೆಯೇ, ಇಲ್ಲವೇ ಎಂಬುದನ್ನು ದುಡ್ಡು ಕೊಡುವ ಮನುಷ್ಯನಿಗೆ ನೋಡತಕ್ಕ ಜವಾಬ್ದಾರಿ ಬೇಡವೇ ? ಅಲ್ಲಿ ಓಚರ್ ಇವೆಲ್ಲಾ ಹಾಕಿರಬೇಕು. ಒಂದು ವೇಳೆ ಸ್ಟಾಕಿನಲ್ಲಿ ಅವು ಇಲ್ಲದೇ ಇರಬಹುದು, ಇದರಿಂದ ದೇಶಕ್ಕೆ ಎಷ್ಟು ನಷ್ಟವಾಗುತ್ತದೆ? ಹತ್ತು ವರ್ಷಗಳ ಕೆಳಗೆ ಅಲ್ಲಿದ್ದವನು ಸತ್ತಿದ್ದಾನೋ, ಬದುಕಿದ್ದಾನೋ, ಅವನ ಹತ್ತಿರ ಹೋಗಿ ವಸೂಲು ಮಾಡುತ್ತೇವೆಂದು ಈಗ ಹೇಳುತ್ತೀರಿ. ಆದ್ದರಿಂದಲೇ ಶ್ರೀ ಬಿ. ಆರ್. ಮಿಶ್ರಾ ಅವರ ಅಡ್ವೈಜನ್ನು ಈ ಸಭೆಯಲ್ಲಿ ತಮಗೆ ಹೇಳಬೇಕಾಗಿ ಬಂತು. ಆದ್ದರಿಂದ ನೀವು ಅಕೌಂಟುಗಳನ್ನು ನೋಡುವುದರಲ್ಲೂ, ಕೊಡುವುದರಲ್ಲೂ, ಬಡ್ಜೆಟ್ಟನ್ನು ಫ್ರೇಮ್ ಮಾಡಿರುವುದರಲ್ಲೂ ಎಷ್ಟರ ಮಟ್ಟಿಗೆ ವಿತರಣೆಯಿಂದ, ಸತ್ಯದಿಂದ ಮಾಡಿದ್ದೀರಿ ಎಂಬುದನ್ನು ನಾವು ಈಗ ಯೋಚನೆ ಮಾಡಲೇಬೇಕು. ನಮ್ಮ ಕಾನ್‌ಸ್ಟಿಟ್ಯೂಷನ್ ಪ್ರಕಾರ ಎರಡು ಅಕೌಂಟ್ಸ್ ಬಹಳ ಮುಖ್ಯವಾ ದವುಗಳು. ಒಂದು ಕನ್‌ಸಾಲಿಡೇಟೆಡ್ ಅಕೌಂಟ್ಸ್, ಇನ್ನೊಂದು ಕಂಟಿಂಜೆನ್ಸಿ ಫಂಡ್. ಈ ಕನ್‌ಸಾಲಿಡೇಟೆಡ್ ಅಕೌಂಟ್ಸ್ ಫಂಡಿನಲ್ಲಿ ರೆವಿನ್ಯೂ ಅಕೌಂಟ್ಸ್ ಮಾತ್ರ ಡಿಫಿಸಿಟ್ ತೋರಿಸಿದ್ದೀರಿ. ಆದರೆ ಬಾಕಿ ಅಕೌಂಟ್ಸನ್ನು ತೆಗೆದು ನೋಡಿದರೆ ಕನ್‌ಸಾಲಿಡೇಟೆಡ್ ಫಂಡನ್ನು ಬೇರೆಯಾಗಿ ತೆಗೆದುಕೊಂಡಿದ್ದೀರಿ. ಆದ್ದರಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಏನಾಗಿದೆಯೆಂಬುದನ್ನು ತಾವೇ ಕಣ್ಣು ಬಿಟ್ಟು ನೋಡಬೇಕು. 2418.25 ಡಿಫಿಸಿಟ್ ಕನ್‌ಸಾಲಿಡೇಟೆಡ್ ಫಂಡ್ ಒಟ್ಟು ಲೆಖ್ಖದಲ್ಲಿದೆ. ಅಲ್ಲಿಗೆ ದೇಶದ ಹಣ ಎಷ್ಟು ಪೋಲಾಗುತ್ತಿದೆ ಎಂಬುದು ಚೆನ್ನಾಗಿ ಕಾಣುತ್ತದೆ.

ಶ್ರೀ ಟಿ. ಮರಿಯಪ್ಪ.—ನನ್ನ ಭಾಷಣದ ಕೊನೆಯ ಭಾಗದಲ್ಲಿ ಹೇಳಿದ್ದೇನೆ. ಅದು ಸಾಂಡ್ ಆಗಿದೆಯೋ , ಇಲ್ಲವೋ ಎಂಬುದನ್ನು ತಾವು ನೋಡಿ.

5-30 P.M.

ಶ್ರೀ ಯು. ಎಂ. ಮಾದಪ್ಪ.—Capital expenditure outside the Revenue Account: 2891.93. ಈ ಬಾಬಿನಲ್ಲಿ ಪ್ರತಿವರ್ಷ ಸೆಪರೇಟ್ ಅಕೌಂಟ್ ಇಟ್ಟುಕೊಟ್ಟರೆ, ಸರಿಯಾದ ಫಿಗರ್ ಬರುತ್ತದೆ. ಎಲ್ಲಾ ಮಿಕ್ಸ್ ಆಗುವುದು ಬೇಡ. Capital expedtiture ಸೆಪರೇಟ್ ಅಕೌಂಟ್ ಇದ್ದರೆ ಏನು ರಿಟರ್ನ್ ಬರುತ್ತದೆ ಎಂದು ತಿಳಿದುಕೊಳ್ಳಬಹುದು.

ಶ್ರೀ ಟಿ. ಮರಿಯಪ್ಪ.—ಇಂಡಿಯಾ ದೇಶಕ್ಕೆ ಅಕೌಂಟೆಂಟ್ ಜನರಲ್ ಮತ್ತು ಆಡಿಟರ್ ಜನರಲ್‌ರವರು ಅಕೌಂಟ್ಸ್ ಪ್ರಿಸ್‌ಕ್ರೈಬ್ ಮಾಡುತ್ತಾರೆ. ಅದರ ಪ್ರಕಾರ ಅಕೌಂಟ್ಸ್ ಇಡಬೇಕು. ನಾವೊಂದು ನೀವೊಂದು ಹೇಳಿದಹಾಗೆ ಅಕೌಂಟ್ಸ್ ಇಡುವುದಕ್ಕಾಗುವುದಿಲ್ಲ. ಸಪರೇಟ್ ಫಂಡಿಗೆ ಸೆಪರೇಟ್ ಅಕೌಂಟ್ಸ್ ಇಡುವುದಕ್ಕಾಗುವುದಿಲ್ಲ. Financial memorandum ಓದಿದರೆ ತಿಳಿಯುತ್ತದೆ.

ಶ್ರೀ ಯು. ಎಂ. ಮಾದಪ್ಪ.—ದೇಶದ ದೃಷ್ಟಿಯಿಂದ ದಾರಿ ಹೇಳಿರಿ.

ಶ್ರೀ ಟಿ. ಮರಿಯಪ್ಪ.—ಫಸ್ಟ್ ಬಜೆಟ್‌ಮೇಲೆ ಮಾತನಾಡುವಾಗ ಪ್ರೊವಿಷನ್ಸ್ ಆಫ್ ದಿ ಕಾನ್‌ಸ್ಟಿಟ್ಯೂಷನ್, ಸೆಪರೇಟ್ ಅಕೌಂಟ್ಸ್ ವಿಚಾರ ಕ್ಲಿಯರ್ ಆಗಿ ಹೇಳಿದ್ದೇನೆ. ಅದನ್ನು ಮಕ್ಕಳು ಓದಿದರೂ ಅರ್ಥವಾಗುತ್ತದೆ.

ಶ್ರೀ ಯು. ಎಂ. ಮಾದಪ್ಪ.—ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪೂರ ವಿಷಯಗಳು ಗೊತ್ತಾಗುವುದಿಲ್ಲ. ಪಬ್ಲಿಕ್ ಅಕೌಂಟ್ಸ್ ಹೆಡ್ಡಿನಲ್ಲಿ ಡಿಫಿಸಿಟ್ ಸರಿತೂಗಿಸಲು ತಾವು ಪ್ರಯತ್ನ ಪಟ್ಟಿದ್ದೀರಿ. ಇಷ್ಟಾದರೂ ಸರಿದೂಗಿಸುವುದಕ್ಕೆ ಸಾಧ್ಯವಿಲ್ಲವೆಂದು ಬಹಳ ಪೇಚಾಡಿಕೊಂಡು ಹೇಳಿಕೊಂಡಿದ್ದೀರಿ. ಪಬ್ಲಿಕ್ ಅಕೌಂಟ್ಸ್ ಹೆಡ್ಡಿನಲ್ಲಿ ರೂ. 2127.22 ಲಕ್ಷ ಇದೆಯೆಂದು ತಿಳಿಸಿದಿರಿ. ಅದನ್ನು ಇನ್ನೂ ಹೆಚ್ಚಿಸುವುದಕ್ಕೆ ಅವಕಾಶವಿದೆ. ಒಂದು ಕೆಲಸ ಮಾಡಿ ತಾಲ್ಲೂಕು ಟ್ರೆಷರಿಗಳಲ್ಲಿ ಸೇವಿಂಗ್ಸ್ ಬ್ಯಾಂಕ್ ಎಂದು ಹೇಳಿ ಪುರಾತನ ಕಾಲದಿಂದ ಏನು ನಡೆದುಕೊಂಡು ಬಂದಿದೆಯೋ, ಆ ಸೇವಿಂಗ್ಸ್ ಬ್ಯಾಂಕನ್ನು ತಾಲ್ಲೂಕು ಟ್ರೆಷರಿಗಳಲ್ಲಿ ಸರಿಯಾಗಿ ನಡೆಸಬೇಕು. ಹಳೆಯ ಮೈಸೂರು ರಾಜ್ಯದಲ್ಲಿ ಸಾರ್ವಜನಿಕರು ಅದರಲ್ಲಿ ಹಣ ಹೆಚ್ಚಾಗಿ ಡಿಪಾಜಿಟ್ ಮಾಡುತ್ತಿದ್ದರು. ಈಗ ಅದು ಡೆಡ್ ಇನ್‌ಸ್ಟಿಟ್ಯೂಷನ್ ಆಗಿದೆ. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ, ತ್ರಿಫ್ಟ್ ಡಿಪಾಜಿಟ್ಸ್, ಪರ್ಮನೆಂಟ್ ಡೆಪಾಜಿಟ್ಸ್ ಎಂದು ಇದ್ದುವು. ಇವತ್ತು ಆ ಸೇವಿಂಗ್ಸ್ ಬ್ಯಾಂಕ್ ಸರಿಯಾಗಿ ಕೆಲಸಮಾಡುತ್ತಾ ಇದ್ದಿದ್ದರೆ, ಅದಕ್ಕೆ ಜಾಸ್ತಿ ಹಣ ಬರುತ್ತಿತ್ತು. ಜಾಸ್ತಿ ಹಣ ಬರದೆ ಇರುವುದಕ್ಕೆ ಒಂದು ಕಾರಣವೇನೆಂದರೆ, ಅಲ್ಲಿ ಪುರಾತನ ಕಾಲದ ಒಂದು ಪದ್ಧತಿ ಇದೆ: ಚಲನ್ ಪ್ರಕಾರ ಡೆಪಾಜಿಟ್ ಮಾಡಬೇಕು, ಚಲನ್‌ಪ್ರಕಾರ ವಿತ್‌ಡ್ರಾ ಮಾಡಬೇಕು. ಅದಕ್ಕೋಸ್ಕರ ಸಾರ್ವಜನಿಕರು ಅಲ್ಲಿಗೆ ಬರಲು ಇಷ್ಟಪಡುವುದಿಲ್ಲ. ಕೆನರಾ ಬ್ಯಾಂಕ್ ಮುಂತಾದ ಪ್ರೈವೇಟ್ ಬ್ಯಾಂಕ್‌ಗಳ ಹಾಗೆ ಚೆಕ್ ಸಿಸ್ಟಮ್ ಇಂಟ್ರೊಡ್ಯೂಸ್ ಮಾಡಿದರೆ ಸಾರ್ವಜನಿಕರಿಗೆ ಬಹಳ ಅನುಕೂಲವಾಗಿ ತಾಲ್ಲೂಕು ಟ್ರೆಷರಿಗಳಲ್ಲಿಯೇ ಹಣ ಡೆಪಾಜಿಟ್ ಮಾಡುತ್ತಾರೆ. ಈ ಅನುಕೂಲವನ್ನು ಒದಗಿಸಿದೆ you are encouraging private banks.

ಶ್ರೀ ಟಿ. ಮರಿಯಪ್ಪ.—State Bank ಇದೆಯಲ್ಲಾ.

ಶ್ರೀ ಯು. ಎಂ. ಮಾದಪ್ಪ.—ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಎಲ್ಲಿದೆ ? ಆದ್ದರಿಂದ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಚೆಕ್ ಸಿಸ್ಟಮ್ ಇಂಟ್ರೊಡ್ಯೂಸ್ ಮಾಡಬೇಕು. ನೀವು ಈ ಸಲಹೆಯ ಮೇಲೆ ಕೂಡಲೇ ತಕ್ಕ ಆಕ್ಷನ್ ತೆಗೆದುಕೊಳ್ಳದೆ ಹೋದರೆ, ರಾಜ್ಯದ ಹಣಕಾಸಿನ ಪರಿಸ್ಥಿತಿ ಇನ್ನೂ ಕೆಟ್ಟುಹೋಗುತ್ತದೆ. ನೀವು ಚೆಕ್ ಸಿಸ್ಟಮ್ ತಂದರೆ ಹೆಚ್ಚು ಡೆಪಾಜಿಟ್ಟುಗಳು ಬರುವುದಕ್ಕೆ ಅವಕಾಶವಾಗಿ, inflationery money control ಮಾಡಬಹುದೆಂದು ಒತ್ತಿ ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಮೊದಲು ಮೈಸೂರು ಸರ್ಕಾರದಲ್ಲಿ ಸ್ಮಾಲ್ ಸೇವಿಂಗ್ಸ್ ಎಂದು ಸೆಪರೇಟಾಗಿರಲಿಲ್ಲ. ಆಲ್ ಇಂಡಿಯ ಪ್ಯಾಟರ್ನಿಗೋಸ್ಕರ ಅದನ್ನು ಮಾಡಿದ್ದೇವೆ. ಅದರಲ್ಲಿ ನಮಗೆ ಕೆಲವು ಭಾಗ ಬರುತ್ತದೆ.

ಶ್ರೀ ಯು. ಎಂ. ಮಾದಪ್ಪ.—ಅದನ್ನೂ ಇದನ್ನೂ ಮಿಕ್ಸ್ ಮಾಡಬೇಡಿ. ಎರಡನ್ನೂ ನೋಡಿದರೆ, ನಾನು ಹೇಳಿದ್ದು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಎಷ್ಟೋ ದಿವಸಗಳಿಂದ ಸಾರ್ವಜನಿಕರಿಗೆ ಸೇವಿಂಗ್ಸ್ ಬ್ಯಾಂಕಿನಲ್ಲಿ ಲೆಕ್ಕ ಪತ್ರಗಳು ಸಿಗದೆ ಇರುವುದರಿಂದ, ಅಲ್ಲಿ ಡೆಪಾಸಿಟ್

ಮಾಡುವುದನ್ನು ಬಿಟ್ಟಿದ್ದಾರೆ. ಬಡ್ಡಿ ಸರಿಯಾದ ಕಾಲಕ್ಕೆ ಕೊಡುವುದಿಲ್ಲ. ನಿಮ್ಮಲ್ಲಿ ಕಮರ್ಷಿಯಲ್ ಡೀಲ್ ಇಲ್ಲ. ಆದ್ದರಿಂದ ಸಾರ್ವಜನಿಕರಿಗೆ ನಿಮ್ಮಲ್ಲಿ ನಂಬಿಕೆ ಇಲ್ಲವೇನೋ, ಡಿಪಾಜಿಟ್ ಮಾಡುವುದು ಬಿಟ್ಟಿದ್ದಾರೆ.

ಈ ಕಂಟಿಂಜೆನ್ಸಿ ಫಂಡ್ ವಿಚಾರದಲ್ಲಿ ಎಷ್ಟೋ ಸಾರಿ ಹೇಳಿದರೂ, ಅಕೌಂಟ್ ಏಕೆ ಕೊಡುತ್ತಾ ಇಲ್ಲವೋ ಗೊತ್ತಾಗುವುದಿಲ್ಲ. ಪ್ರಿಂಟ್ ಮಾಡಿಸಿಕೊಟ್ಟರೆ ನಮಗೆ ಸರಿಯಾಗಿ ಅರ್ಥವಾಗುತ್ತದೆ. ಪೊಜಿಷನ್ ಏನಿದೆಯೆಂದು ತಿಳಿದುಕೊಳ್ಳಬಹುದು.

ಶ್ರೀ ಟಿ. ಮರಿಯಪ್ಪ.—ಕಂಟಿಂಜನ್ಸಿ ಫಂಡಿನಲ್ಲಿರುವುದು 2 ಕೋಟಿ ರೂಪಾಯಿ. ಅದನ್ನು ತೆಗೆದುಕೊಳ್ಳಬೇಕು, ರೀಕೂಪ್ ಮಾಡಬೇಕು.

ಶ್ರೀ ಯು. ಎಂ. ಮಾದಪ್ಪ.—ಕಂಟಿಂಜನ್ಸಿ ಫಂಡಿನಲ್ಲಿ ವ್ಯತ್ಯಾಸವಿದೆ.

ಶ್ರೀ ಟಿ. ಮರಿಯಪ್ಪ.—2 ಕೋಟಿ ರೂಪಾಯಿ ಹಾಕಬೇಕು, ತೆಗೆದುಕೊಳ್ಳಬೇಕು. ಎರಡು ಕೋಟಿ ರೂಪಾಯಿ ಮೇಲೆ ಒಂದೂ ಕಾಸೂ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಹಾಕುವುದಕ್ಕೆ ಅವಕಾಶವಿದೆ. ಅಂತೂ ಇದರಲ್ಲಿ ದುಡ್ಡಿಲ್ಲ.

Sri T. MARIAPPA.—We have permission to utilise upto two crores of rupees pending recupment by a vote of the Legislature.

ಶ್ರೀ ಯು. ಎಂ. ಮಾದಪ್ಪ.—ನಮ್ಮ ತಲೆಯಲ್ಲಿ ಎಲ್ಲಾ ಕಾಂಪ್ಲಿಕೇಟ್ ಮಾಡಿಬಿಟ್ಟು ನಿಜಾಂಶ ಬರುವುದಿಲ್ಲ.

ಆಸೆಟ್ಸ್ ಮತ್ತು ಲಯಬಿಲಿಟೀಸ್ ತೆಗೆದು ನೋಡಿ. 1959-60 ರಿಂದ 1961-62ರ ವರೆಗೆ ನೋಡೋಣ. 1959-60 ರಲ್ಲಿ 5461-89, 1960-61 ರಲ್ಲಿ 4224.43, 1961-62 ರಲ್ಲಿ 2794.35 ಇದೆ, ಅಂದರೆ 1959ರಿಂದ 1962ರ ಒಳಗೆ ಇಷ್ಟು ಇಳಿಮುಖವಾಗಿದೆ. ಇನ್‌ವೆಸ್ಟ್‌ಮೆಂಟ್ ಮತ್ತು ಕ್ಯಾಷ್‌ಸೈಡಿನಲ್ಲಿ ಬಹಳ ಡಿಫಿಸಿಟ್ ಬರುತ್ತಾ ಇದೆ. ಇದನ್ನು ಯಾವ ರೀತಿ ಸರಿದೂಗಿಸುವುದು. ಇನ್‌ವೆಸ್ಟ್‌ಮೆಂಟ್ ಕಮ್ಮಿ, ಕ್ಯಾಷ್‌ಬ್ಯಾಲೆನ್ಸ್ ಇಲ್ಲ. ಸಾಲ ಎತ್ತಬೇಕು ಅಥವಾ ಏನಾದರೂ ತೆರಿಗೆ ಹಾಕಬೇಕು ಇನ್ನೇನೂ ಮಾಡುವುದಕ್ಕೆ ಸಾಧ್ಯವಿಲ್ಲ, ಈ ರೀತಿ ಸರ್ಕಾರ ನಡೆಸಬೇಕು. ಸರ್ಕಾರ ನಡೆಸಬೇಕಾದರೆ ಗೋಪಾಲ್‌ರಾವ್ ಕಂಪೆನಿ ಆಯಿತು. ಈ ರೀತಿ ಇದೆ ಪರಿಸ್ಥಿತಿ. ಸಾಲ ತೆಗೆದುಕೊಳ್ಳಬೇಕು, ಸಾಲ ತೀರಿಸಬೇಕು. ಈ ರೀತಿ ಒಂದು ರೊಟೇಷನ್ನಿನಲ್ಲಿ ಹೊಗುತ್ತಾ ಇದೆ.

ಶ್ರೀ ಟಿ. ಮರಿಯಪ್ಪ.—ಏಕಾನಮಿ ಬಿಲ್ಡ್ ಅಪ್ ಮಾಡುವುದು ಅದೇರೀತಿ. ಬೇರೆ ದಾರಿ ಇಲ್ಲ. ಚಾಮರಾಜನಗರ ತಾಲ್ಲೂಕಿಗೆ ಒಂದು ಭಾರಿ ಇರಿಗೇಷನ್ ಪ್ರಾಜೆಕ್ಟ್ ಕೇಳುತ್ತೀರ. ಅದಕ್ಕೆ ಹಣ ಎಲ್ಲಿಂದ ಬರಬೇಕು ? ಸಾಲಮಾಡಿ ಕೊಡಬೇಕು, ಅದನ್ನು ಆದಾಯ ರೂಪದಲ್ಲಿ ವಾಪಸು ಪಡೆಯಬೇಕು.

ಶ್ರೀ ಯು. ಎಂ. ಮಾದಪ್ಪ.—ಅದು ಸ್ಲೋಗನ್ ಪಾಲಿಟಿಕ್ಸ್. ನಮ್ಮ ಹಣಕಾಸಿನ ವಿಷಯ ಹೇಗಿದೆ ಎಂದರೆ ನಮ್ಮ ಇನ್‌ವೆಸ್ಟ್‌ಮೆಂಟುಗಳೇನಿದೆ ಇವು ವರ್ಷೇ ವರ್ಷೇ ಕಡಿಮೆಯಾಗುತ್ತಾ ಬರುತ್ತಿವೆ. ನಮ್ಮ ಕ್ಯಾಷ್ ಪೊಜಿಷನ್ ದಿನದಿನಕ್ಕೂ ಡಿಕ್ಲೈನ್ ಆಗುತ್ತಾ ಬರುತ್ತಿವೆ. 1959–60, 1960–61 ಮತ್ತು 1961-62–ಈ ಮೂರು ವರ್ಷಗಳ ವಿಚಾರವನ್ನೇ ತೆಗೆದುಕೊಳ್ಳೋಣ. ನಮ್ಮ ಇನ್‌ವೆಸ್ಟ್‌ಮೆಂಟುಗಳು 1959–60ರಲ್ಲಿ 5461.89 ರೂಪಾಯಿಗಳಿತ್ತು. ಇದು 1960–61ಕ್ಕೆ 4224.44ಕ್ಕೆ ಇಳಿಯಿತು. ಆಮೇಲೆ ಇದು ಈ ಚಾಲ್ತು ಸಾಲಿಗೆ ಅಂದರೆ 1961–62ಕ್ಕೆ 2794.35ಕ್ಕೆ ಇಳಿದಿದೆ. ಅಂದರೆ ಈಗ ನಮ್ಮ ಇನ್‌ವೆಸ್ಟ್‌ಮೆಂಟುಗಳಲ್ಲಿ ಆಗಿರತಕ್ಕ ಡಿಫಿಸಿಟ್ಟು ಎಷ್ಟಾಯಿತು ಎಂದರೆ 1430.09 ರೂ ಗಳಾಗಿರುತ್ತೆ. ಹೇಗೆ ನಮ್ಮ ಕ್ಯಾಷ್ ಪೊಜಿಷನ್ ದಿನದಿನಕ್ಕೂ ಡಿಕ್ಲೈನ್ ಆಗುತ್ತಾ ಬರುತ್ತಿದೆ ಎಂಬುದನ್ನು ಹಣಕಾಸಿನ ಮಂತ್ರಿಗಳು ಗಮನಿಸಬೇಕು.

ಶ್ರೀ ಟಿ. ಮರಿಯಪ್ಪ.—ನಾವು ಯಾವಾಗಲೂ ಹೀಗೇ ಮಾಡಿಕೊಂಡು ಬರುತ್ತಿದ್ದೇವೆ. ನಾಯಿ ಕೆಚ್ಚಲಿನಲ್ಲಿ ಎಷ್ಟು ಹಾಲಿದ್ದರೇನು ? ಆಕಳ ಕೆಚ್ಚಲಿನಲ್ಲಿ ಹಾಲಿದ್ದರೆ ತಾನೇ ಅನುಕೂಲ! ನಾವೂ ಬೇಕಾದಷ್ಟು ರಿಜರ್ವನ್ನು ಬಿಲ್ಡ್ ಮಾಡಿದ್ದೆವು.

ಶ್ರೀ ಯು. ಎಂ. ಮಾದಪ್ಪ.—ಆ ವಿಚಾರವೆಲ್ಲ 1947ಕ್ಕೇ ಮುಗಿಯಿತು. ಈಗ ನಾವು ಈ ಸಿಂಕಿಂಗ್ ಫಂಡನ್ನು ತೆಗೆದುಕೊಳ್ಳೋಣ. ನಮ್ಮ ಲಯಬಿಲಿಟೀಸ್ 1959–60ರಲ್ಲಿ 1833.88 ರೂ.ಗಳಿತ್ತು. ಇದು 1960–61ಕ್ಕೆ 2078.01 ಕ್ಕೇರಿತು. ಅನಂತರ 1961–62ರಲ್ಲಿ ಇದು 2345–59 ರೂಪಾಯಿಗಳಿಗೇರಿರುತ್ತೆ. ಆದರೆ ಇದಕ್ಕೆ ಪ್ರತಿಯಾಗಿ ನಮ್ಮ ಅಸೆಟ್ಸ್ ಗಳೇನಿರುತ್ತೆಂಬುದನ್ನು ನೋಡಿದರೆ–ನಮ್ಮ ಅಸೆಟ್ಸ್ 1959–60ಕ್ಕೆ 1785.66 ಇತ್ತು. ಇದು 1960–61 ಕ್ಕೆ ಅದೇ 1785.66 ಇರುತ್ತೆ. ಈಗ 1961–62ಕ್ಕೆ 1360.93 ರೂ. ಗಳಿವೆ. ನಮಗೆ ಬರುವುದು ಮಾತ್ರ ಏನೂ ಬದಲಾವಣೆಯಾಗದಂತೆ ಹಾಗೆ ಇದ್ದರೂ ನಾವು ತೆರ ಬೇಕಾದ್ದು ಮಾತ್ರ ವರ್ಷೇ ವರ್ಷೇ ಬೆಳೆಯುತ್ತಿದೆ. ಅಸೆಟ್ಸ್ ಸೈಡ್ ಮಾತ್ರ ಕಮಿಯಾಗುತ್ತಿದೆ ಅಂತೂ ನಾನೀಗ ಹಣಕಾಸಿನ ಸಚಿವರ ಗಮನಕ್ಕೆ ಮುಖ್ಯವಾಗಿ ತರಬೇಕಾದ ಅಂಶವೇನೆಂದರೆ ನಮ್ಮ ಇನ್‌ವೆಸ್ಟ್‌ಮೆಂಟುಗಳು ವರ್ಷೇ ವರ್ಷೇ ಕಡಮೆಯಾಗುತ್ತಿದೆ, ತದ್ವಿರುದ್ಧವಾಗಿ ನಮ್ಮ ಲಯಬಿಲಿಟೀಸ್‌ಗಳು ವರ್ಷ ವರ್ಷಕ್ಕೂ ಹೆಚ್ಚಾಗುತ್ತಿದೆ. ಅಸೆಟ್ಸ್ ಕಡಮೆಯಾಗು ತ್ತಿದೆ ಎಂಬುದನ್ನು ಅಂಕಿಅಂಶಗಳ ಆಧಾರಸಹಿತ ಅವರ ಗಮನಕ್ಕೆ ತಂದಿದ್ದಾಯಿತು. ಇದಕ್ಕೆಲ್ಲ ಒಂದು ಮುಖ್ಯ ಕಾರಣವೇನೆಂದರೆ ಹಣಕಾಸಿನ ಮಂತ್ರಿಗಳಿಗೆ ಈ ಎಕ್ಸ್‌ಪೆಂಡಿಚರ್ ಇಲಾಖೆಗಳ ಮೇಲೆ ಸಾಕಷ್ಟು ಕಂಟ್ರೋಲ್ ಇರುವುದಿಲ್ಲ ಎಂಬುದು ಎದ್ದು ಕಾಣುತ್ತಿದೆ, ಈ ಸ್ಪೆಂಡಿಂಗ್ ಇಲಾಖೆಗಳೇನಿವೆ ಅವುಗಳ ಮೇಲೆ ಹಣಕಾಸಿನ ಮಂತ್ರಿಗಳಿಗೆ ಸಾಕಷ್ಟು ನಿಗಾ ಇರಬೇಕು, ಹಾಗೂ ಕಂಟ್ರೋಲಿರಬೇಕು.

ಇದಾದ ಮೇಲೆ ಈ ದಿವಸ ನಮ್ಮ ಸರ್ಕಾರದವರು ಯಾವ ಯಾವ ಉದ್ಯಮ ಮತ್ತು ಸಂಸ್ಥೆಗಳಲ್ಲಿ ಎಷ್ಟೆಷ್ಟು ಷೇರುಗಳನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸಿದ್ದಾರೆ. ಮೈಸೂರ್ ಸ್ಟೇಟ್ ಕೋ-ಅಪರೇಟಿವ್ ಎಪೆಕ್ಸ್ ಬ್ಯಾಂಕಿನಲ್ಲಿ 50 ಲಕ್ಷ ರೂಪಾಯಿಗಳ ಷೇರನ್ನು ಕೊಂಡಿದ್ದಾರೆ. ಅದರೆ ಇಲ್ಲಿಯವರೆಗೂ ನಮಗೆ ಈ ಸಂಸ್ಥೆಯಿಂದ ಒಂದು ಕಾಸು ಡಿವಿಡೆಂಡೂ ಬಂದಿಲ್ಲ. ಇದೇ ರೀತಿ ಕೋ-ಅಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಬೇರೆ 25,37,945 ರೂ. ಗಳ ಬೆಲೆಬಾಳತಕ್ಕ ಷೇರನ್ನು ಕೊಂಡಿದ್ದಾರೆ. ಆದರೆ ಇದರಲ್ಲೂ ತಹಲ್‌ವರೆಗೆ ಡಿವಿಡೆಂಡು ಏನೂ ಬಂದಿಲ್ಲ. ಹೀಗೇ ಇನ್ನೂ ಅನೇಕ ಸಂಸ್ಥೆಗಳಲ್ಲಿ ಲಕ್ಷಾಂತರ ರೂ.ಗಳ ಷೇರನ್ನು ಕೊಂಡಿರುತ್ತಾರೆ. ಆದರೆ ಡಿವಿಡೆಂಡ್ ರೂಪದಲ್ಲಿ ನಮಗೇನು ರಿಟರ್ನ್ ಬರಬೇಕಾಗಿತ್ತೋ ಅದು ಬರುತ್ತಿಲ್ಲ. ಇದು ಏನನ್ನು ಸೂಚಿಸುತ್ತಿದೆಯೆಂದರೆ ನಮ್ಮ ಸರ್ಕಾರಕ್ಕೆ ಈ ಸಂಸ್ಥೆ ಗಳ ಮೇಲೆ ಏನೊಂದು ಕಂಟ್ರೋಲನ್ನು ಇಟ್ಟುಕೊಳ್ಳಬೇಕಾಗಿತ್ತೋ ಆ ಕಂಟ್ರೋಲನ್ನಿಟ್ಟು ಕೊಳ್ಳಲು ಅಸಾಧ್ಯವಾಗಿರುತ್ತೆಂದು ಕಂಡುಬರುತ್ತಿದೆ. ಕಾರಣ ಈ ಅನೇಕ ಸಂಸ್ಥೆಗಳಲ್ಲೆಲ್ಲಾ ಕಾಂಗ್ರೆಸ್ ಪಾರ್ಟಿಗೆ ಸೇರಿದವರೇ ಬಲಾಢ್ಯರಾಗಿದ್ದಾರೆ. ಅದರಿಂದ ಕಂಟ್ರೋಲಿಟ್ಟು ಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದರೆ ಸರ್ಕಾರದವರು ಈ ಸಂಸ್ಥೆಗಳ ಮೇಲೆ ಒಂದು ಕಂಟ್ರೋಲನ್ನು ಇಟ್ಟುಕೊಳ್ಳುವುದೊಂದೇ ಅಲ್ಲದೆ ಆ ಸಂಸ್ಥೆಗಳ ವಾರ್ಷಿಕ ವರದಿಯನ್ನು ಈ ಸಭೆಯ ಮುಂದೆ ತಪ್ಪದಂತೆ ಇಡಬೇಕಾದ್ದು ಅತ್ಯಗತ್ಯ.

ಶ್ರೀ ಟಿ. ಮರಿಯಪ್ಪ.—ಆ ಸಂಸ್ಥೆಗಳಲ್ಲೆಲ್ಲಾ ನಮ್ಮ ಪ್ರತಿನಿಧಿಗಳಿರುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ಇರಬಹುದು. ಆದರೆ ಈ ಕಂಪೆನಿಗಳು ಲಿಕ್ವಿಡೇಟಾದರೇನು ಮಾಡುತ್ತೀರಿ ? ಅದಕ್ಕಾಗೇ ನಾನೀಗ ತಾವು ಇವುಗಳ ಮೇಲೆ ಒಂದು ವಾಚ್-ಡಾಗ್ ಆಗಿರ ಬೇಕೆಂದು ಹೇಳಿದ್ದು. ಹಾಗಿಲ್ಲವಾದರೆ ನಮ್ಮ ಅಸೆಟ್ಸ್ ಅಂಡ್ ಲಯಬಿಲೀಟೀಸ್‌ಗಳನ್ನು ನಿಗಾ ನೋಡಿಕೊಳ್ಳುವವರು ಯಾರು ? ನಮ್ಮಲ್ಲಿ ಈ ಸಂಸ್ಥೆಗಳ ಸರ್ಟಿಫೈಡ್ ಅಕೌಂಟ್ಸ್‌ಗಳು

ಇಲ್ಲದೆ ಹೋದರೆ ನಾವು ಏನು ಮಾಡುವುದಕ್ಕಾಗುತ್ತದೆ? ಪಬ್ಲಿಕ್ ಅಕೌಂಟ್ಸ್ ಕಮಿಟಿ ಮುಂದೆ ಸಹ ಇದೇ ವಿಚಾರ ಬಂದಿತ್ತು. ಅಕೌಂಟೆಂಟ್ ಜನರಲ್‌ರವರೂ ಸಹ ಈ ವಿಚಾರದಲ್ಲಿ ಅನೇಕ ಕೊಯರಿಗಳನ್ನು ಎತ್ತಿದ್ದಾರೆ. ಆ ಬಗ್ಗೆ ಸರ್ಕಾರದವರೇಕೆ ಆನ್ಸರ್ ಮಾಡಿಲ್ಲ?

ಇನ್ನು ನಮ್ಮ ಅರಣ್ಯಶಾಖೆ, ಸಂಚಾರ ಸಾರಿಗೆ ಇತ್ಯಾದಿ ವಿಚಾರಗಳನ್ನು ತೆಗೆದುಕೊಂಡರೆ ಬಹಳ ಚಿಂತಾಜನಕವಾದ ಸ್ಥಿತಿಯಲ್ಲಿರುತ್ತವೆ, ಈ ಬಾಬುಗಳು. ನಾವು ಈ ಬಾಬುಗಳಲ್ಲಿ ಎಷ್ಟು ಇನ್ವೆಸ್ಟ್ ಮಾಡಿದ್ದೇವೋ ಅಷ್ಟಕ್ಕೆ ಸರಿಯಾದ ರಿಟರ್ನ್ ಬರುತ್ತಿಲ್ಲ.

ಶ್ರೀ ಟಿ. ಮರಿಯಪ್ಪ.—ನಮಗೆ ಈ ಬಾಬುಗಳಿಂದ ಎಷ್ಟು ಬಡ್ಡಿ ನಮಗೆ ಬರಬೇಕೋ ಅದೂ ಬರುತ್ತಿದೆ. ಜೊತೆಗೆ ಆದಾಯ ಕೂಡ ಬರುತ್ತಿದೆ. ಈ ಐಟಂಗಳನ್ನೆಲ್ಲ ನಾನೀಗ ನಾನ್-ಟ್ಯಾಕ್ಸಬಲ್ ಐಟಂಗಳ ಕೆಳಗೆ ತೋರಿಸಿದ್ದೇನೆ.

ಶ್ರೀ ಯು. ಎಂ. ಮಾದಪ್ಪ.—ಮಾನ್ಯ ಹಣಕಾಸಿನ ಮಂತ್ರಿಗಳು ನಾನು ಏನು ಹೇಳುತ್ತಿದ್ದೇನೆಂಬುದನ್ನು ಅರ್ಥ ಮಾಡಿಕೊಳ್ಳದೆ ಏನೇನೋ ಹೇಳುತ್ತಿದ್ದಾರೆ. ನಾನು ಹೇಳುತ್ತಿರುವುದು ಈ ಬಾಬುಗಳಿಂದ ನಮಗಿನ್ನು ಹೆಚ್ಚಿನ ವರಮಾನ ಬರುವುದಕ್ಕೆ ಅವಕಾಶವಿದೆ ಅನ್ನುವುದನ್ನು ತಿಳಿಸುತ್ತಿದ್ದೇನೆ. ಈಗ ಈ ಇಲಾಖೆಗಳಲ್ಲಿ ಲೀಕೇಜ್ ಬಹಳ ಜಾಸ್ತಿ ಆಗುತ್ತಿದೆ. ನಾವು ಬೆಂಗಳೂರಲ್ಲಿ ಬಸ್ ಹತ್ತಿದರೆ ನಮಗೆ ಕಂಡಕ್ಟರು ಟಿಕೇಟ್ ಕೊಡುವುದು ಬಸ್ ಚೆನ್ನಪಟ್ಟಣ ತಲುಪಿದ ಮೇಲೆ. ಈ ವಿಚಾರ ನಮಗೇ ಅಲ್ಲ, ಮಾನ್ಯ ಹಣಕಾಸಿನ ಸಚಿವರಿಗೂ ಗೊತ್ತಿದೆ. ಹೀಗೆ ಲೀಕೇಜಾಗುವುದಕ್ಕೆ ಕಾರಣವೇನೆಂದರೆ ಇಲಾಖೆಯಲ್ಲಿರುವ ಕೆಲವು ನೌಕರರೂ ಮತ್ತು ಈ ಬಸ್ಸುಗಳಲ್ಲಿರತಕ್ಕ ಕಂಡಕ್ಟರು, ಇತ್ಯಾದಿ ಜನಗಳೆಲ್ಲ ಒಂದು ಗುಂಪಾಗಿದ್ದಾರೆ. ಇದರಿಂದ ಕರಪ್ಷನ್ ಜಾಸ್ತಿಯಾಗುತ್ತಿದೆ. ಬರತಕ್ಕ ರೆವಿನ್ಯೂ ಖೋತಾ ಆಗುತ್ತಿದೆ. ಈ ಬಗ್ಗೆ ಒಂದು ಕೀನ್ ಸೂಪರ್‌ವಿಜನ್ ಇಲ್ಲ. ಇದನ್ನೆಲ್ಲಾ ನೋಡಿಯೇ ನಾನೀಗ ಹಣಕಾಸಿನ ಮಂತ್ರಿಗಳಲ್ಲಿ ಬಿಗಿ ಸಾಲದು ಎಂತ ಹೇಳುತ್ತಿದ್ದೇನೆ. ಅರಣ್ಯಶಾಖೆ ವಿಚಾರದಲ್ಲೂ ಮಂತ್ರಿಗಳು ಬಹಳ ಎಚ್ಚರಿಕೆಯಿಂದಿರಬೇಕು. ಈ ದಿವಸ ಬಹಿರಂಗದಲ್ಲಿ ನಾಟಾ ಕಳವು ಸಾಗುತ್ತಿದೆ. ನಾನೇ ಈ ವಿಚಾರವಾಗಿ ಒಂದು ಪ್ರಶ್ನೆ ಕಳುಹಿಸಿದ್ದೆನು. ಆದರೆ ಕಾರಣಾಂತರಗಳಿಂದ ನಾನಾ ದಿವಸ ಈ ಸಭೆಯಲ್ಲಿ ಇರಲು ಅವಕಾಶವಾಗಲಿಲ್ಲ. ಈ ದಿವಸ ಅರಣ್ಯದಲ್ಲಿರತಕ್ಕ ಮರಗಳನ್ನು ಇಲಾಖೆಯವರೂ ಕಡಿಯುತ್ತಾರೆ. ಕಳ್ಳತನದಲ್ಲೂ ಮರಗಳು ಕಡಿಯಲ್ಪಡುತ್ತಿವೆ. ಆದರೆ ಇಲಾಖೆಯವರು ಕಡಿದ ಕಡೆಗಳಲ್ಲೆಲ್ಲಾ ಅಲ್ಲಿ ಮರಗಳ ಮೇಲೆ ಒಂದು ಮಾರ್ಕಿರುತ್ತದೆ. ಅಂದರೆ ಒಂದು ಸೀಲಿರುತ್ತೆ. ಕಳವಿನಲ್ಲಿ ಕಡಿದ ಮರಗಳ ಹತ್ತಿರ ಈ ಸೀಲಿರುವುದಿಲ್ಲ. ಈ ದಿವಸ ಮಂತ್ರಿಗಳು ಸ್ಥಳಕ್ಕೆ ಹೋಗಿ ನೋಡಲಿ, ಗೊತ್ತಾಗುತ್ತೆ. ಈ ಬಾಬಿನಲ್ಲಿ ಈ ದಿವಸ ಸರ್ಕಾರಕ್ಕೆ ಎಷ್ಟು ವರಮಾನ ಬರಬೇಕಾಗಿತ್ತೋ ಅದರಲ್ಲಿ ಅರ್ಧ ಸಹ ಬರುತ್ತಿಲ್ಲ. ಹೀಗೆ ಈ ದಿವಸ ಈ ರೀತಿ ಅನೇಕಬಾಬುಗಳಲ್ಲಿ ಲೀಕೇಜ್ ಮೂಲಕ ಹೋಗುತ್ತಿರುವ ಹಣವನ್ನು ತಡೆಗಟ್ಟಿದ್ದಲ್ಲಿ ನಾವೀ ದಿವಸ ಹೀಗೆ ಹೊರಗಡೆಯಿಂದ ಸಾಲ ಎತ್ತಬೇಕಾದ ಅಗತ್ಯವೇನೂ ಇರುತ್ತಿರಲಿಲ್ಲ. ಆದರೆ ಇಲಾಖೆಯಲ್ಲಿರತಕ್ಕ ಕೆಲವರು ಈ ಕಳ್ಳರ ಗುಂಪಿಗೆ ಹೊಂದಿಕೊಂಡಿರುತ್ತಾರೆ. ಸರ್ಕಾರದವರು ಬೇಕಾಗಿದ್ದರೆ ಕೂಡಲೇ ಒಂದು ಸಮಿತಿಯನ್ನು ನೇಮಕ ಮಾಡಲಿ. ಆಗ ಇದು ಎಷ್ಟರ ಮಟ್ಟಿಗೆ ನಿಜವಾಗಿದೆ ಎಂಬುದು ತಿಳಿಯುತ್ತೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಕೂಡಲೆ ಒಂದು ಕಮಿಟಿಯನ್ನು ನೇಮಿಸಬೇಕೆಂದೂ ಮತ್ತು ಈ ಲೀಕೇಜನ್ನು ತಡೆಗಟ್ಟಬೇಕೆಂದೂ ಹೇಳುತ್ತೇನೆ. ಅನೇಕ ವೇಳೆಗಳಲ್ಲಿ ಕೆಳದರ್ಜೆ ನೌಕರರು ಕಳ್ಳತನದಲ್ಲಿ ನಾಟಾ ಸಾಗುತ್ತಿದ್ದುದನ್ನು ಪತ್ತೆ ಹಚ್ಚಿ ರಿಪೋರ್ಟು ಮಾಡಿ ಪೋಲೀಸರಿಗೆ ತಿಳಿಸಿದರೂ ಅವರು ಕೇಸ್ ಹಾಕುತ್ತಿಲ್ಲ. ಕಾರಣವೇನೆಂದರೆ ಫಾರೆಸ್ಟ್ ಇಲಾಖೆಯ ಕೆಲವು ಮೇಲಧಿಕಾರಿಗಳು ಇದರಲ್ಲಿ ಷರೀಕಾಗಿರುವುದರಿಂದ ಪೋಲೀಸರಿಗೆ ಕೇಸ್ ಹಾಕುವುದನ್ನು ತಡೆಗಟ್ಟುತ್ತಿದ್ದಾರೆ. ಹೀಗೆಲ್ಲ ಈ ದಿವಸ ದೇಶದ ಸಂಪತ್ತು ಲೂಟಾಗುತ್ತಿದೆ. ಈ ಅವ್ಯವಸ್ಥೆಯನ್ನೆಲ್ಲ ಸರಿಪಡಿಸಿ ಈ ಲೀಕೇಜ್ ಆಗದಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

(ಶ್ರೀ ಯು. ಎಂ. ಮಾದಪ್ಪ)

ಇನ್ನು ಮಂತ್ರಿಗಳು ಸಂಚಾರ ಹೋಗತಕ್ಕ ವಿಷಯದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಅವರು ಸಂಚಾರ ಹೋಗಬಾರದೆಂದೇನೂ ಹೇಳುವುದಿಲ್ಲ. ಅವರು ಸಂಚಾರ ಮಾಡಲಿ, ಆದರೆ ಅವರು ಅವರ ಪಾರ್ಟಿ ಪ್ರಚಾರ ಕಾರ್ಯಕ್ಕೆ ಮಾತ್ರ ಹೋಗಬಾರದೆಂದು ಹೇಳುತ್ತೇನೆ. ಈ ಹಿಂದೆ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಒಂದು ಜಿಲ್ಲೆಗೆ ಏಕಕಾಲದಲ್ಲಿ ಇಬ್ಬರು ಮಂತ್ರಿಗಳು ಹೋಗಬಾರದೆಂದು ಒಂದು ನೇಮಕವನ್ನು ಮಾಡಿದ್ದರು. ಆದರೆ ಅದೀಗ ಇಲ್ಲವಾಗಬಹುದು.

ನಮ್ಮ ತಾಲ್ಲೂಕಿನಲ್ಲಿರುವ ಬ್ಲಾಕಿನಲ್ಲಿ ಕೊತ್ತಲವಾಡಿ ಎಂಬ ಗ್ರಾಮದಲ್ಲಿ ಸಾರ್ವಜನಿಕರು ಹಣ ಕೂಡಿಸಿ ಡಿಪಾಜಿಟ್ ಮಾಡಿದ್ದಾರೆ. ಆದರೆ ಇನ್ನೂವರೆಗೆ ಸ್ಕೂಲು ಕಟ್ಟಡವಾಗಿಲ್ಲ. ನ್ಯಾಯವಾಗಿ ದೊರೆಯಬೇಕಾದ ಸ್ಥಳಗಳಲ್ಲಿ ಸ್ಕೂಲ ಕಟ್ಟಡ ಕೊಡುತ್ತಿಲ್ಲ. ದಯವಿಟ್ಟು ಇದನ್ನು ಪರಿಶೀಲನೆ ಮಾಡಿ ನ್ಯಾಯ ದೊರಕಿಸಿಕೊಡಬೇಕು ಇದನ್ನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಚಾಮರಾಜನಗರ ತಾಲ್ಲೂಕಿನಲ್ಲಿ ಕೊತ್ತಲವಾಡಿ ಎಂಬ ಗ್ರಾಮದ ಬಗ್ಗೆ ನಾನು ಈಗ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳು ಗಮನ ಕೊಡುತ್ತಾರೆಂದು ನಾನು ನಂಬಿದ್ದೇನೆ.

†ಶ್ರೀ ಬಿ. ಕೆ. ನಾಗೂರ್.—ಮಾನ್ಯ ಸಭಾಪತಿಗಳೇ, ಈಗ ನಾನು ಮಾತನಾಡುವಾಗ್ಗೆ ಸಭೆಯಲ್ಲಿ ಮುಖ್ಯ ಮಂತ್ರಿಗಳು ಶ್ರೀ ಟಿ. ಸುಬ್ರಹ್ಮಣ್ಯರವರು ಇರಬೇಕಾಗಿತ್ತು. ನನ್ನ ಜಿಲ್ಲೆಯವರೇ ಆಗಿರುವ ಮುಖ್ಯ ಮಂತ್ರಿಗಳಿಗೂ ಮತ್ತು ಸಭಾಧ್ಯಕ್ಷರವರಿಗೂ ನಮ್ಮ ವಿಜಾಪುರ ಜಿಲ್ಲೆಯ ಕಷ್ಟನಷ್ಟಗಳು ಏನಿವೆ ಎಂಬುದು ಗೊತ್ತಿದೆ. ಉಳಿದ ಮಂತ್ರಿಗಳಿಗೆ ಮನದಟ್ಟಾಗುವಂತೆ ನಮ್ಮ ಜಿಲ್ಲೆಯ ದುಸ್ಥಿತಿಯನ್ನು ತಿಳಿಸಿಕೊಡಬೇಕಾದುದು ನನ್ನ ಕರ್ತವ್ಯ. ಅಲ್ಲಿಯ ಪರಿಸ್ಥಿತಿಯನ್ನು ವಿವರಿಸಿ ಹೇಳುವಾಗ್ಗೆ ಸ್ವಲ್ಪ ಕಟುವಾಗಿ ಗಂಭೀರವಾಗಿ ಮಾತನಾಡಬೇಕಾಗಿದೆ.

ಈ ವರ್ಷದ ಆಯವ್ಯಯ ಪಟ್ಟಿ 4½ ಕೋಟಿ ರೂಪಾಯಿ ಕೊರತೆಯದು ಆಗಿದೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ರಾಜ್ಯಪದ್ಧತಿ ನಡೆದಿದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಅದು ಪ್ರಜಾಪ್ರಭುತ್ವವಾಗಿರದೆ ಪ್ರಜಾಭೂತವಾಗಿದೆ ಎಂದು ಹೇಳಬೇಕಾಗಿದೆ ಬಡ ಪ್ರಜೆಗಳಿಂದ ಬರತಕ್ಕ ದುಡ್ಡನ್ನು ಯಾರೋ ಹೇಗೋ ಖರ್ಚು ಮಾಡುತ್ತಿದ್ದಾರೆ. ಯಾರ ಹಿತಕ್ಕೋಸ್ಕರ ಖರ್ಚು ಮಾಡಲಾಗುತ್ತಿದೆ? ಯಲ್ಲಮ್ಮನ ಜಾತ್ರೆಯಲ್ಲಿ ಜತ್ತಿಯವರಿಗೆ ಆರತಿ ಮಾಡಲಾಗುತ್ತಿದೆ. ಹೀಗೆ ವ್ಯರ್ಥವಾಗಿ ಸರಕಾರದ ಹಣ ಖರ್ಚು ಆಗುವುದಾದರೆ ದೇಶದ ಉದ್ಧಾರ ಹೇಗೆ ಆಗಬೇಕು ? ನಮ್ಮ ರಾಜ್ಯದ ಎರಡು ಕೋಟಿ ಪ್ರಜೆಗಳ ಹಿತರಕ್ಷಣೆಗೋಸ್ಕರ ಈ ಮಂತ್ರಿಮಂಡಳವು ರಾಜ್ಯದಾಡಳಿತೆಯನ್ನು ನಡೆಸುತ್ತಿಲ್ಲ. ಇದಕ್ಕೂ ಕಟುವಾಗಿ ಮಾತನಾಡುವದಕ್ಕೆ ನನ್ನ ಮನಸ್ಸು ? ಒಪ್ಪುತ್ತಿಲ್ಲ. ಯಾಕಂದರೆ ಕರ್ಮ-ಧರ್ಮ ಸಂಯೋಗದಿಂದ ಮುಖ್ಯ ಮಂತ್ರಿಗಳು ನನ್ನ ಜಿಲ್ಲೆಯವರೇ ಆಗಿದ್ದಾರೆ. ಪ್ರತಿಯೊಂದು ಕಾರ್ಯದಲ್ಲಿ ದೇಶದ ಹಿತದೃಷ್ಟಿ ಮುಖ್ಯವಾಗಿ ಇರಬೇಕು. ಒಳ್ಳೇ ರೀತಿಯಲ್ಲಿ ಮಂತ್ರಿಗಳು ಕೆಲಸ ಮಾಡಿದರೆ ಅವರಿಗೂ ಭೂಷಣ, ಜನತೆಗೂ ಭೂಷಣ. ಇದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ಅರ್ಥ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಅಂಕಿಅಂಶಗಳನ್ನು ಕೊಟ್ಟು ಅನೇಕ ಯೋಜನೆಗಳ ಬಗ್ಗೆ ಹಣ ಖರ್ಚು ಮಾಡುವುದನ್ನು ವಿವರವಾಗಿ ಹೇಳಿದ್ದಾರೆ ಆದರೆ ಈ ವಿಚಾರದಲ್ಲಿ ದೇಶದ ಹಿತದೃಷ್ಟಿ ಇಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಎರಡು ಕೋಟಿ ಕನ್ನಡಿಗರ ಹಿತದೃಷ್ಟಿಯಿಂದ ಈ ಸಂದರ್ಭದಲ್ಲಿ ನಾನು ಈ ರೀತಿ ಹೇಳಬೇಕಾಗಿದೆ. ವೈಯಕ್ತಿಕವಾಗಿ ಮಂತ್ರಿಗಳ ಬಗ್ಗೆ ಟೀಕೆ ಮಾಡಬೇಕೆಂಬ ಇಚ್ಛೆ ನನಗಿಲ್ಲ. ಅದರಲ್ಲಿಯೂ ಶ್ರೀ ಮರಿಯಪ್ಪನವರು ಮಂಡಿಸಿದ ಬಡ್ಜೆಟ್

ಬಗ್ಗೆ ಮಾತನಾಡುವಾಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಯಾಕಂದರೆ ಶ್ರೀ ಮರಿಯಪ್ಪನವರು ಬಹಳ ಬುದ್ಧಿವಂತರೂ ಚತುರರೂ, ಆಗಿದ್ದಾರೆ. ಪ್ರತಿಯೊಂದು ವಿಷಯವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಅಂಕಿಅಂಶಗಳನ್ನು ಕೊಟ್ಟು ವಿವರವಾಗಿ, ಸ್ಪಷ್ಟವಾಗಿ ಅವರು ಹೇಳುತ್ತಾರೆ. ಅವರು ಬೆಂಕಿಪಟ್ಟಣ ಇದ್ದ ಹಾಗೆ ಇದ್ದಾರೆ. ಬೆಂಕಿ ಪಟ್ಟಣದಿಂದ ಒಲೆ ಹೊತ್ತಿಸಿ ಅದರಿಂದ ಅಡಿಗೆಯನ್ನು ಮಾಡಬಹುದು. ಇಲ್ಲವೆ ಬಣವಿಗೆ ಬೆಂಕಿ ಹಚ್ಚಿ ದೊಡ್ಡ ಉರಿ ಮೂಡಿ ಪ್ರಜ್ವಲಿಸಬಹುದು. ಆದುದರಿಂದ ಅವರು ಬಹಳ ಬುದ್ಧಿವಂತರಾಗಿದ್ದಾರೆಂದು ನಾನು ಹೇಳುವುದು. ದೇಶದಲ್ಲಿಯ ಬಡ ಜನರಿಗೆ ಅನ್ನ ಸಿಕ್ಕುವ ಹಾಗೆ ಮಾಡಿ ಎಂದು ನಾನು ಹೇಳುತ್ತೇನೆ. ಇದು ಕೇವಲ ನಿರೀಕ್ಷೆಯೋ ಅಥವಾ ಕೇಂದ್ರ ಸರ್ಕಾರದ ಆದೇಶವೋ ಎಂದು ಕೇಳುತ್ತೇನೆ. ಇದು ನಿರೀಕ್ಷೆಯಾದರೆ ತಾವು ದೊಡ್ಡ ಮನಸ್ಸು ಮಾಡಿ, ಪ್ರಯತ್ನಿಸಿ, ಏನು ಶಕ್ತಿ ಇದೆಯೋ ಅದನ್ನು ಉಪಯೋಗಿಸಿ 18 ಕೋಟಿ 19 ಲಕ್ಷ ರೂಪಾಯಿಗಳನ್ನು ಕೇಂದ್ರದಿಂದ ತೆಗೆದುಕೊಂಡು ಬಂದರೆ ದೇಶದ ಹಿತದೃಷ್ಟಿಯಿಂದ ಒಳ್ಳೆಯದೆಂದು ಕೇಳುಕೊಳ್ಳುತ್ತಿದ್ದೇನೆ.

6-00 P.M.

ಮೊನ್ನೆಯ ದಿನ ಶ್ರೀಮಾನ್ ದೇವರಾಜ ಅರಸ್‌ರವರು ಮಾತನಾಡುವಾಗ ವಿರೋಧ ಪಕ್ಷದವರು ಈ ಆಯವ್ಯಯ ಪಟ್ಟಿಯನ್ನು ಟೀಕೆಮಾಡಿದ ವಿಚಾರದಲ್ಲಿ ಕೆಲವು ಹೇಳಿದ ಮಾತುಗಳನ್ನು ಹೇಳಿದರು. ಅದನ್ನು ನಾನು ಒಪ್ಪುವುದಿಲ್ಲ. ದಿವಂಗತ ವಲ್ಲಭಾಯಿ ಪಟೇಲರು ರಾಷ್ಟ್ರದ ಹಿತದೃಷ್ಟಿಯಿಂದ ಬರತಕ್ಕ ಟೀಕೆಗಳನ್ನು ಸಂತೋಷದಿಂದ ಸ್ವಾಗತ ಮಾಡಿಕೊಳ್ಳುತ್ತಿದ್ದರು. ವಿರೋಧಪಕ್ಷದವರು ಹೇಳುವಂಥ ಒಳ್ಳೆಯ ಮಾತನ್ನು ಕೇಳಿಕೊಂಡು ರಾಜ್ಯಾಡಳಿತ ಮಾಡುವುದು ನ್ಯಾಯ ಮತ್ತು ಧರ್ಮ. ಶ್ರೀಮಾನ್ ಮಲ್ಲಾರಾಧ್ಯರು ಅಂಕಿಸಂಖ್ಯೆಗಳ ಆಧಾರದಮೇಲೆ ನಮ್ಮೆಲ್ಲರ ಮನಸ್ಸಿಗೆ ನಾಟುವಂತೆ ಸಾಧುವಾಗಿ ಮಾತನಾಡಿದರು. ಆಡಳಿತ ಪಕ್ಷದವರ ಮನಸ್ಸಿನಲ್ಲಿ ಕೂಡ ಶ್ರೀ ಮಾನ್ ಮಲ್ಲಾರಾಧ್ಯರು ಮಾತನಾಡಿದ್ದು ಸರಿಯಾಗಿದೆ ಎಂದು ಹೇಳುತ್ತಿದ್ದರೂ ಕೂಡ ಅವರು ಒಂದು ಕೊಂಟು ನೆಪ ತೆಗೆಯುತ್ತಾರೆಂದರೆ ಕೊಂಟರು ಯಾರು ಎನ್ನುವುದನ್ನು ಜನರು ತಿಳಿಯಬೇಕು: ಶ್ರೀಮಾನ್ ನರಸಿಂಹನ್ ಮತ್ತು ಇತರರೂ ಕೂಡ ಈ ಕಡೆಯಿಂದ ಮಾತನಾಡಿದರು. ನಾವುಗಳು ಮಾತನಾಡಿದ್ದು ಒಳ್ಳೆಯದಿದ್ದರೆ ಅದನ್ನು ಸ್ವೀಕಾರ ಮಾಡಿರಿ; ಕೆಟ್ಟ ರೀತಿಯಲ್ಲಿ ಮಾತನಾಡಿದ್ದರೆ ಅದನ್ನು ಬಿಟ್ಟುಬಿಡಿರಿ, ಅಡ್ಡಿಯಿಲ್ಲ. ನ್ಯಾಯಸಮ್ಮತವಾದ ಮಾತನ್ನು ಕೇಳಲೇಬೇಕು.

ಮಾನ್ಯ ಸದಸ್ಯರಾದ ಮೊಹಸಿನ್ ಅವರು ಮಾತನಾಡುತ್ತ ಹೇಳಿದ ಕೆಲವು ಮಾತುಗಳನ್ನು ಹೇಳುತ್ತೇನೆ. ಯಾವುದೋ ಕೆಲಸಕ್ಕೆ ಹೋಗಿದ್ದು ವಾಪಸು ಬರುವ ಕಾಲದಲ್ಲಿ ಅವರು ಪ್ರಯಾಣ ಮಾಡುತ್ತಿದ್ದ ಕಾರು ಕೆಟ್ಟುಹೋಗಿ ಒಂದು ಟ್ರಕ್‌ನಲ್ಲಿ ಕುಳಿತುಕೊಂಡು ಪ್ರಯಾಣ ಮಾಡುವ ಪರಿಸ್ಥಿತಿ ಬಂತು, ಕಾಂಗ್ರೆಸ್ ಚುನಾವಣಾ ಪ್ರಚಾರ ಕಾರ್ಯಕ್ಕೆ ಹೋಗಿದ್ದಾಗ ಈ ಪರಿಸ್ಥಿತಿ ಒದಗಿತು. ಇವರು ಟ್ರಕ್‌ನಲ್ಲಿ ಕುಳಿತುಕೊಳ್ಳಬಾರದೆಂದು ಕಾಯಿದೆಯಿದೆ. ಇವರು ದುಡ್ಡು ಕೊಟ್ಟು ಕುಳಿತುಕೊಂಡರೆ ಹೇಗೆ? ಇವರು ಟ್ರಕ್‌ನಲ್ಲಿ ಪ್ರಯಾಣಮಾಡುವಾಗ ಟ್ರಕ್‌ನವರು ದಾರಿಯಲ್ಲಿ ಪ್ರತಿಯೊಂದು ಕಡೆಯೂ ಲಂಚಕೊಡುತ್ತ ಬಂದರು ಎಂದು ಹೇಳಿದರು, ಇವರು ಅದನ್ನು ಹೇಗೆ ನೋಡಿಕೊಂಡು ಬಂದರು? ಇದು ಪ್ರಜಾಪ್ರಭುತ್ವದಲ್ಲಿರುವ ಮಾನ್ಯ ಮಂತ್ರಿಗಳ ಮತ್ತು ಕಾಂಗ್ರೆಸ್ ಎಂ. ಎಲ್. ಎ ಇವರ ಎದುರಿಗೆ ನಡೆದಂಥಾದ್ದು. ಲಂಚ ಕೊಡುವುದನ್ನು ನೋಡಿದ ತಕ್ಷಣ ಪೋಲೀಸಿನವರಾಗಲಿ, ಯಾರೇ ಆಗಲಿ, ಅವರನ್ನು ಅರೆಸ್ಟ್ ಮಾಡಬೇಕಾಗಿತ್ತು. ಮೋಟಾರ್ ಕಾರ್ ಪುಕ್ಕಟೆ ಬಂದುದರ ಸಲುವಾಗಿ ಪೋಲೀಸರಿಗೆ ಏನೂ ಮಾಡಲಿಲ್ಲ. ಇದು ನ್ಯಾಯಸಮ್ಮತವಾದ ಮಾತಲ್ಲ. ಇದಕ್ಕೆ ಮಾನ್ಯ ಮಂತ್ರಿಗಳು ಏನು ಜವಾಬು ಕೊಡುತ್ತಾರೆ?

(ಶ್ರೀ ಬಿ. ಕೆ. ನಾಗೂರ್)

ಈ ರೀತಿಯಾಗಿ ದೇಶದ ಆಡಳಿತವನ್ನು ನಡೆಸಿದರೆ ಹೇಗೆ? ಜನರ ಹಿತರಕ್ಷಣೆಯ ಜವಾಬ್ದಾರಿ ನಿಮ್ಮ ಮೇಲಿರುವಾಗ ಈ ರೀತಿ ನಡೆದುಕೊಳ್ಳುತ್ತ ಬಂದರೆ ಹೇಗೆ ಎನ್ನುವುದನ್ನು ಜನತೆಗೇ ಬಿಟ್ಟುಬಿಡುತ್ತೇನೆ. ಹೆಚ್ಚು ಹೇಳಲಿಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ. ಏನು ಕಾಂಗ್ರೆಸ್ ಎಂ. ಎಲ್. ಎ. ಗಳು ಮತ್ತು ಮಂತ್ರಿಗಳು ನಿಮ್ಮ ಫೋಟೋಗಳನ್ನು ಬೀದಿಯಲ್ಲಿ ತೂಗು ಹಾಕಬೇಕು!

ಪೋಲೀಸರಿಂದಲೇ ಜಾಸ್ತಿ ಜಗಳಗಳಾಗುತ್ತವೆ ಎಂದು ಹೇಳಿದರು. ನಮ್ಮ ಜಿಲ್ಲೆಯೊಳಗೆ ಎರಡು ಕಡೆ ಬಿಜಾಪುರ ಮತ್ತು ಬಾಗಲಕೋಟೆಯಲ್ಲಿ ಜಗಳಗಳಾದವು. ಕಾರಣ ದೇವರಿಗೇ ಗೊತ್ತು, ಕಟ್ಲೆಗಳು ಕೋರ್ಟಿನಲ್ಲಿರಬಹುದಾದ್ದರಿಂದ ಸಬ್‌ಜುಡಿಸ್ ಆಗುವ ಪರಿಸ್ಥಿತಿಗೆ ಹೋಗುವುದಿಲ್ಲ, ಈ ಎರಡು ಕಡೆಗಳಲ್ಲೂ ಅದಂಥ ಜಗಳಗಳು ಪೋಲೀಸರಿಂದ ಆಗಿಲ್ಲವೆಂದು ಹೇಳುತ್ತೇನೆ. ನಾನು ಅವರ ಪರವಾಗಿ ಏನನ್ನೂ ಮಾತನಾಡುತ್ತಿಲ್ಲ. ಮುಂದೆ ಪೋಲೀಸರ ಬಗ್ಗೆ ಕಟುವಾಗಿ ಟೀಕೆ ಮಾಡುತ್ತೇನೆ. ಅನ್ಯಾಯವಾಗಿ ಪೋಲೀಸರ ಮೇಲೆ ಹೇಳುವುದನ್ನು ನಾನು ಒಪ್ಪುವುದಿಲ್ಲ. ಬಿಜಾಪುರ ಜಿಲ್ಲೆಯೊಳಗೆ ಆದದ್ದು ನನಗೆ ಗೊತ್ತಿದೆ. ಪೋಲಸರಿಂದ ಜಾತಿ ದ್ವೇಷಗಳ ಗಲಾಟೆಯಾಗಿಲ್ಲವೆಂದು ಹೇಳುತ್ತೇನೆ.

ಪಾನಪ್ರತಿಬಂಧದ ವಿಷಯದಲ್ಲಿ ಒಂದು ವಿಷಯ ಹೇಳಿದರು. ಮಠದ ಗುರುಗಳನ್ನು ಪಾನ ಪ್ರತಿಬಂಧದ ವಿಷಯದಲ್ಲಿ ಪ್ರಚಾರಮಾಡಲಿಕ್ಕೆ ಹಚ್ಚಿರಿ ಎಂದು ಕೇಳಿದರು, ಇದರಿಂದ ಬೆಂಕಿ ಕಡೆ ಅರಿವೆ ಹಾಕಿದ ಹಾಗಾಗುತ್ತದೆ. ಈ ಸಲಹೆ ಸರಿಯಾದುದಲ್ಲ. ಧರ್ಮಗುರುಗಳು ಯಾರಾದರೂ ಉಳಿದಿದ್ದಾರೆಯೇ ಎನ್ನುವಂಥಾದ್ದೇ ಒಂದು ಸಮಸ್ಯೆಯಾಗಿದೆ. ಪ್ರತಿಯೊಬ್ಬ ಧರ್ಮ ಗುರುಗಳ ವಿಷಯದಲ್ಲಿಯೂ ಬೇರೆ ಬೇರೆ ಕೇಳುತ್ತಿದ್ದೇವೆ. ನೀವು ಕುಡಿಯಬಾರದು, ಕುಡಿದರೆ ತೊಂದರೆಯಾಗುತ್ತದೆ ಎಂದು ಪ್ರಚಾರಮಾಡಲು ಧರ್ಮಗುರುಗಳನ್ನು ಕರೆದುಕೊಂಡು ಬಂದರೆ ಅವರನ್ನು ರಾಜಕೀಯಕ್ಕೆ ಹಾಕುವುದು ಬೇಡ. ಪಾನಪ್ರತಿಬಂಧದ ವಿಷಯ ಚರ್ಚೆಗೆ ಬಂದಾಗ ಇದರ ಬಗ್ಗೆ ವಿವರವಾಗಿ ಹೇಳುತ್ತೇನೆ.

ಹುಬ್ಬಳ್ಳಿ ಪೋಲಿಸ್ ಪ್ರಕರಣದ ಬಗ್ಗೆ ಮೊನ್ನೆ ಪ್ರಶ್ನೆ ಕೇಳಿದ್ದೆ. ಇಂಥ ಪ್ರಕರಣ ನಮ್ಮ ಜಿಲ್ಲೆಯಲ್ಲಿ ಕೂಡ ನಡೆದಿದೆ. ಪ್ರಶ್ನೆಯನ್ನು ಕೇಳಿದಾಗ ಸಬ್‌ಜುಡಿಸ್ ಎಂದು ಹೇಳಿದರು. ಇದರಿಂದ ಜನತೆಗೆ ತೊಂದರೆ ಇದೆ ಮತ್ತು ಮಂತ್ರಿಗಳಿಗೆ ಉಳಿಯಲಿಕ್ಕೆ ಒಂದು ಹೊಸ ಶಬ್ದ ಸಿಕ್ಕಿದೆ. ಜನಗಳು ಸಾಯುತ್ತಿದ್ದಾರೆ, ನೀವು ಏನು ಮಾಡುತ್ತೀರಿ? ನಿದ್ರೆ ಮಾಡುತ್ತೀರಾ? ಅಸೆಂಬ್ಲಿಯಲ್ಲಿ ನೀವು ಮಾಡುವ ಕೆಲಸವಾದರೂ ಏನು ಎಂದು ಕೇಳುತ್ತಾರೆ. ಅಸೆಂಬ್ಲಿಯಲ್ಲಿ ಇಂಥ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ಹೇಳುವ *Sub judice* I want notice ಎನ್ನುವ ಶಬ್ದಗಳು ಮಂತ್ರಿಗಳಿಗೆ ರಕ್ಷಾಕವಚವಿದ್ದ ಹಾಗೆ.

ಅಧ್ಯಕ್ಷರು.—ದೇಶದ ಹಿತದೃಷ್ಟಿಯಿಂದ ಕೆಲವು ವಿಷಯಗಳು ನ್ಯಾಯಾಲಯದ ಮುಂದೆ ಇರುವಾಗ ಅವನ್ನು ಚರ್ಚೆ ಮಾಡುವುದರಿಂದ '' ಸಬ್‌ಜುಡಿಸ್ ಆಗುತ್ತದೆ. ಅಂಥ ಸಂದರ್ಭಗಳಲ್ಲಿ ಆ ವಿಷಯವನ್ನು ಕುರಿತು ಮಾತನಾಡಬಾರದು. ಸೂಚನೆ ಬೇಕು ಎನ್ನುವುದು ಮಂತ್ರಿಗಳಿಗೆ ಸೇರಿದ್ದು, ಆದರ ವಿಷಯವಾಗಿ ಬೇಕಾದರೆ ತಾವು ಹೇಳಬಹುದು.

ಶ್ರೀ ಬಿ. ಕೆ. ನಾಗೂರ್.—ಪತ್ರಿಕೆಗಳಲ್ಲಿ ಆ ದಿನ ನಡೆದ ವಿಷಯ ಬಂದಿತ್ತು. ನಾನು ಒಂದು ಪ್ರಶ್ನೆಯನ್ನು ಕಳಿಸಿದ್ದೆ. ಅದು ಸಭೆಯ ಮುಂದೆ ಬಂದಿದ್ದು, ಹೀಗೆಲ್ಲ ನಡೆದಿರುವ ಕಾಲದಲ್ಲಿ ಹೆಚ್ಚಿಗೆ ಹೇಳುವುದಿಲ್ಲ.

ಬಿಜಾಪುರದಲ್ಲಿ ಇಂಥದೇ ಒಂದು ವಿಷಯ ನಡೆಯಿತು. ಒಬ್ಬ ಕಳುವು ಮಾಡಿದ. ಆ ಕಳ್ಳತನ ಮಾಡಿದವನು ಅದೇ ಊರಿನಲ್ಲಿಯೇ ಇದ್ದ. ಒಬ್ಬ ಮಾರವಾಡಿಯ ತಮ್ಮ ಷೋಲಾಪುರಕ್ಕೆ

ಹೋಗಿದ್ದಾಗ ಆತನ ಮನೆಯಲ್ಲಿ ಕಳ್ಳತನವಾಯಿತು. ಆಗ ಮಾರವಾಡಿ ನನ್ನ ತಮ್ಮನ ಮನೆಯಲ್ಲಿ ಕಳುವಾಗಿದೆ ಎಂದು ಅರ್ಜಿ ಕೊಟ್ಟರೆ, ಅರ್ಜಿ ಕೊಟ್ಟವನನ್ನೇ ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ಖೂಬ್ ಹೊಡೆದರು. ಕಳ್ಳನಾದವನು ಅದೇ ಊರಿನಲ್ಲಿಯೇ ಇದ್ದರೂ ಅವನನ್ನು ಹಿಡಿಯುವ ಪ್ರಯತ್ನಮಾಡಲಿಲ್ಲ. ಮಾರವಾಡಿಗೆ ಏಟು ಬಿದ್ದಿರುವುದರ ವಿಷಯದಲ್ಲಿ ಸಿವಿಲ್ ಸರ್ಜನ್ ಸರ್ಟಿಫಿಕೇಟ್ ಸಹ ಕೊಟ್ಟಿದ್ದಾರೆ. I. G. P. ಅಲ್ಲಿಗೆ ಬಂದಿದ್ದಾಗ ನಾನು ಮಾರವಾಡಿಯನ್ನು ಕರೆದುಕೊಂಡು ಹೋಗಿ ಭೇಟಿ ಮಾಡಿಸಿದೆ. ಅದಕ್ಕೆ ಕಾರಣವಿಷ್ಟೇ: ಹಿಂದೆ ಒಂದು ವಿಷಯ ಹೇಳುತ್ತಿದ್ದುದು ಜ್ಞಾಪಕಕ್ಕೆ ಬರುತ್ತದೆ. ಒಬ್ಬ ಮನುಷ್ಯನನ್ನ ಮನೆಯಲ್ಲಿ ಕಳುವಾಯಿತು ಎಂದು ದೂರು ಕೊಟ್ಟರೆ, ಪೋಲಿಸಿನವರು ಬಂದು ಯಾರ ಮನೆಯಲ್ಲಿ ಕಳುವಾಯಿತು ಎಂದು ದೂರು ಕೊಟ್ಟವನನ್ನೇ ಹೊಡೆದು ನಿನ್ನ ಮನೆಯಲ್ಲಿ ಹೇಗೆ ಕಳುವಾಯಿತು ಹೇಳು ಎಂದು ಕೇಳುತ್ತಿದ್ದರು. ಇವರ ಪೆಟ್ಟುಗಳನ್ನು ತಿನ್ನಲಾರದೆ ತಾನು ದೂರುಕೊಟ್ಟ ತಪ್ಪಿತಕ್ಕಾಗಿ ಮನೆಯಲ್ಲಿದ್ದ ಕೆಲವು ಒಡವೆ-ವಸ್ತುಗಳನ್ನು ತಂದು ಪೋಲೀಸರಿಗೆ ಒಪ್ಪಿಸಿದ ನಂತರ ಕಳುವಾದ ಮಾಲು ಸಿಕ್ಕಿ ಅವನ ಮಾಲು ಎಲ್ಲ ವಾಪಸು ಬಂತು. ಈಗ ಇಂಥ ಪರಿಸ್ಥಿತಿ ಒದಗಿದೆ.

ಪೋಲೀಸರು ಈ ರೀತಿಯಾಗಿ ನಡೆದರು ಎಂದರೆ, ಇದು ಏನು ಎಂತ ಹೇಳಬೇಕು? ನಾನು ಬರೀ ಹುಡುಗಾಟಿಕೆಗಾಗಿ ಹೇಳುತ್ತಿಲ್ಲ. ನಾನು ಹೇಳುವುದನ್ನು ಕೇಳಿಕೊಂಡು ತಾವು ಎಲ್ಲರೂ ನಗುವ ಮಾತಲ್ಲ. ಈ ಪೋಲೀಸಿನವರು ಈ ರೀತಿ ಮಾಡುತ್ತಿರುವುದರಿಂದ ಇವರನ್ನು ಹೇಳುವವರೂ ಇಲ್ಲ, ಕೇಳುವವರೂ ಇಲ್ಲ.

ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಶ್ರೀ ಪಟ್ಟಣ್‌ರವರು ಕೆಲವು ಆರೋಪಣೆಗಳನ್ನು ಈ ಹಿಂದೆ ಮಾಡಿದ್ದರು. ದೇಶಕ್ಕಾಗಿ ದುಡಿದ ಮತ್ತು ದೇಶಕ್ಕೆ ತ್ಯಾಗ ಮಾಡಿದಂತಹ ಶ್ರೀ ಮುರುಗೋಡು ಅವರ ಕೇಸಿನಲ್ಲಿ ಎಷ್ಟು ಕಟುವಾಗಿ ಪೋಲೀಸಿನವರು ವರ್ತಿಸಿದರು ಎನ್ನುವುದಕ್ಕೆ 178 ಪುಟಗಳ ಒಂದು ಜಡ್ಜ್‌ಮೆಂಟು ಈಗ ನನ್ನಲ್ಲಿದೆ. ಇದರಲ್ಲಿ ಪೋಲೀಸಿನವರು ಎಷ್ಟು ಪ್ರಯತ್ನ ಪಟ್ಟು ಕಟ್ಟಳೆಗಳನ್ನು ಹಾಕಲಿಕ್ಕೆ ಬಂದಿದ್ದರು ಎನ್ನುವುದು ತಿಳಿಯುತ್ತದೆ. ಪೋಲೀಸಿನವರು ವಿರೋಧಪಕ್ಷದ ಜನಕ್ಕೆ ಈ ರೀತಿ ಅನ್ಯಾಯ ಮಾಡಲಿಕ್ಕೆ ಹೊರಟರೆ ದೇವರೂ ಸಹ ಮೆಚ್ಚಲಿಕ್ಕೆ ಶಕ್ಯವಿಲ್ಲ. ಮನುಷ್ಯ ಸತ್ತಮೇಲೆ ಅವನ ಪಾಪಪುಣ್ಯ ಹೋಗಲಿಕ್ಕೆ ಎಂದು ಎಳ್ಳನ್ನು ಹಾಕುತ್ತಾರೆ. ಅದನ್ನು ನಾನು ನಂಬುವುದಿಲ್ಲ. ನಾವು ಮಾಡುವ ಕೆಲಸ ಒಳ್ಳೆಯದಾಗಿ ಜನಕ್ಕೆ ಅನುಕೂಲವಾಗುವುದಿದ್ದರೆ, ದೇವರು ಒಪ್ಪುತ್ತಾನೆ. ಹಾಗಿಲ್ಲದೆ ಅಧಿಕಾರದಲ್ಲಿದ್ದೇವೆಂದು ಇನ್ನೊಬ್ಬರ ಮೇಲೆ ಸುಳ್ಳು ಆರೋಪಣೆಗಳನ್ನು ಬರೆಯಿಸುವ ಪರಿಸ್ಥಿತಿ ಈ ಕಾಲದಲ್ಲಿ ಬಂದಿದೆ. ಇವೊತ್ತು, ನಾನು ಚೀಫ್‌ಮಿನಿಸ್ಟರಾಗಿದ್ದೇನೆ, ಶ್ರೀ ರುದ್ರಪ್ಪನವರು ನಾನು ಮಂತ್ರಿಗಳಾಗಿದ್ದೇನೆಂದು, ಅಧಿಕಾರದಲ್ಲಿದ್ದು ಕೆಲಸ ಮಾಡುವುದು ನನಗೆ ಬರುತ್ತದೆ ಎಂದು ಹೀಗೆ ಮಾಡಬಹುದು. ಒಂದು ವೇಳೆ ನಾವೇ ಮಂತ್ರಿಯಾಗಿ 1962ರಲ್ಲಿ ಬಂದರೂ ನಾನು ಈ ರೀತಿ ಮಾಡುವುದಿಲ್ಲ. ಈಗ ಅಧಿಕಾರದಲ್ಲಿಲ್ಲ. ಅಧಿಕಾರದಲ್ಲಿದ್ದರೂ ಈ ರೀತಿ ಮಾಡುವುದಿಲ್ಲ. ಅಧಿಕಾರದಲ್ಲಿದ್ದು ಬಂದ ಮೇಲೆ ಆದರೂ ಜನಕ್ಕೆ ಒಳ್ಳೆಯದನ್ನು ಮಾಡಬೇಕು ಎನ್ನುವುದು ಮನುಷ್ಯನ ತತ್ವದ ಮತ್ತು ಧರ್ಮದ ವಿಚಾರ ಎನ್ನುವುದನ್ನು ಸರಿಯಾಗಿ ಸ್ವಲ್ಪ ತಿಳಿದುಕೊಳ್ಳಬೇಕು. ಎಂ. ಎಲ್. ಎ. ಗಳಾಗಿ ನಾವು ಐದು ವರ್ಷಕಾಲವಿದ್ದು ಅನಂತರ ಹೊರಗೆ ಹೋದಾಗ ಹೊರಗಿನ ಜನರು ಇವರಿಗೆ ಮರ್ಯಾದೆ ಕೊಡುವುದಿಲ್ಲ. ಏಕೆಂದರೆ ಅವರು ಮಾಡಿರುವ ಕೆಲಸ ಜನಕ್ಕೆ ಒಳ್ಳೆಯದಲ್ಲದಿರಬೇಕು. ಎಂ. ಎಲ್. ಎ. ಗಳಾಗಿರುವವರೂ ಮನುಷ್ಯರೇ. ಮಂತ್ರಿಗಳಾಗಿರುವವರೂ ಮನುಷ್ಯರೇ. ಇಂದು ಮಂತ್ರಿಗಳಾಗಿದ್ದು ಅಧಿಕಾರ ಬಿಟ್ಟ ನಂತರ ಹೊರಗೆ ಅಡ್ಡಾಡುವಾಗ ನಿಮಗೆ ಜನ ಸರಿಯಾದ ಗೌರವ ಕೊಡಲಿಕ್ಕಿಲ್ಲ. ಹಾಗೆ ಮಾಡಬಾರದು. ಮೊನ್ನೆ ಮಂತ್ರಿಗಳಾಗಿದ್ದಾಗ ಜನಕ್ಕೆ ಒಳ್ಳೆಯದಾಗುವ ಒಂದು ಕೆಲಸವನ್ನೂ ಮಾಡಲಿಲ್ಲ. ಇಂತಹವರು ಈಗ ಎಲೆಕ್ಷನ್ನಿಗೆ ಪುನಃ ನಿಂತಿದ್ದಾರೆ ಎಂದು ಜನ

(ಶ್ರೀ ಬಿ. ಕೆ. ನಾಗೂರ್)

ಹೇಳುತ್ತಾರೆ. ಆಗ ಏನಾಗುತ್ತದೆ ಎನ್ನುವುದು ಅವರಿಗೇ ಗೊತ್ತು. ಇವೊತ್ತು ಅಧಿಕಾರ ನಮ್ಮ ಕೈಯೊಳಗೆ ಸಿಕ್ಕಿದೆ ಎಂದು ಜನಕ್ಕೆ ಅನ್ಯಾಯವಾಗುವ ಹಾಗೆ ಮಾಡಬಾರದು. ಹಾಗೆ ಮಾಡಿದರೆ, ನಿಮಗೆ ದೇವರು ಒಳ್ಳೆಯದು ಮಾಡುವುದಿಲ್ಲ. ಈಗ ಪೋಲೀಸರಿಗೆ ಅಧಿಕಾರ ಸಿಕ್ಕಿದೆ ಎಂದು ಸಿಕ್ಕಾಪಟ್ಟೆ ಮಾಡುವಂತಹ ಕಾಲ ಇಂದು ಬಂದಿದೆ.

ಬಿಜಾಪುರದಲ್ಲಿ ಅಕ್ಕಿ ಕಳ್ಳಸಾಗಾಣಿಕೆ ಬಗ್ಗೆ ಎಷ್ಟೋ ಸಾರಿ ಹೇಳಿದ್ದೇನೆ. ಕಾಗದವನ್ನೂ ಬರೆಸಿದ್ದೇನೆ. ಅಷ್ಟು ಹೇಳಿದರೂ ಏನೂ ಆಗಿಲ್ಲ. ಮೈಸೂರು ರಾಜ್ಯದಲ್ಲಿ ಬರೆದ ಕಾಗದಕ್ಕೆ ಉತ್ತರ ಕೊಡುವ ಚಟ ಯಾವ ಕಾಲಕ್ಕೂ ಇಲ್ಲ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಮರಿಯಪ್ಪ ನವರ ಬಗ್ಗೆ ವರ್ಷಕ್ಕೊಮ್ಮೆ ಇಲ್ಲಿ ಮಾತನಾಡುವ ಅವಕಾಶ ಸಿಗುತ್ತದೆ. ಆದರೆ ಉಳಿದ ಮಂತ್ರಿಗಳಿಗೆ ಬರೆದ ಪತ್ರಕ್ಕೆ ಉತ್ತರ ಕೊಡದೇ ಇರುವುದು ಒಂದು ವ್ಯಸನದ ಸಂಗತಿ. ಹಳೆಯ ಮೈಸೂರಿನ ಜನತೆಗೆ ಮೈಸೂರಿನ ಮಹಾರಾಜರ ಬಗ್ಗೆ ಎಷ್ಟು ಅಭಿಮಾನವಿದೆಯೋ ಅದಕ್ಕೆ ಹತ್ತು ಪಟ್ಟಿನಷ್ಟು ಅಭಿಮಾನ ನಮ್ಮ ಉತ್ತರ ಕರ್ನಾಟಕದ ಬೊಂಬಾಯಿ ಭಾಗದ ಬಿಜಾಪುರದ ಜನಕ್ಕೆ ಇದೆ. ಮೊನ್ನೆ ಈ ಸಭೆಯ ಅಧಿವೇಶನವನ್ನು ಆರಂಭಿಸುವ ಭಾಷಣವನ್ನು ಕನ್ನಡದಲ್ಲೇ ಮಾಡಬೇಕೆಂದು ಪತ್ರ ಬರೆದು ವಿಜ್ಞಾಪನೆ ಮಾಡಿ ಕೊಂಡೆ. ಅದೇ ಪತ್ರದ ಕಾಪಿಯನ್ನು ಮಾನ್ಯ ಮುಖ್ಯಮಂತ್ರಿಗಳ ಕಡೆಗೂ ಕಳುಹಿಸಿ ಕೊಟ್ಟೆ. ಇದಕ್ಕೆ ಉತ್ತರ ಕೊಡದೇ ಹೋದುದು ನನ್ನ ದುರ್ದೈವ. ಕನ್ನಡ ರಾಜ್ಯಕ್ಕಾಗಿ ಸ್ವಾತಂತ್ರ್ಯ ಬಂದು ನಮ್ಮ ಕನ್ನಡ ರಾಜ್ಯವಾದರೂ ಈ ಪರಿಸ್ಥಿತಿ ಬಂದಿದೆ. ಮತ್ತೊಂದು ವಿಚಾರ ಹೇಳುತ್ತೇನೆ. ಕನ್ನಡದಲ್ಲಿ ಮಾತನಾಡಬೇಕೆಂದು ನಾನು ಎಷ್ಟೋ ಸಲ ನಮ್ಮ ಮಂತ್ರಿಗಳನ್ನು ಕೇಳಿಕೊಂಡರೂ, ಎಷ್ಟೋ ಮಂತ್ರಿಗಳು ಇಂಗ್ಲೆಂಡಿನಿಂದ ಬಂದವರಂತೆ ಇಂಗ್ಲೆಂಡಿನಲ್ಲಿ ಒಂದು ಕಾಲು ಹಡಗಿನಲ್ಲಿ ಒಂದು ಕಾಲು ಇಟ್ಟವರಂತೆ ಇಲ್ಲಿ ಇಂಗ್ಲಿಷಿನಲ್ಲಿ ಮಾತನಾಡುತ್ತಾರೆ. ಬೊಂಬಾಯಿನಲ್ಲಿಲ್ಲದೆ ಈಗ ಕನ್ನಡ ನಾಡಾಗ ಬೇಕು ಎಂದು ಹೇಳಿ ಕನ್ನಡ ರಾಜ್ಯವಾದಮೇಲೂ ಕನ್ನಡದಲ್ಲಿ ಮಾತನಾಡುವುದನ್ನು ಬಿಟ್ಟು ಇಂಗ್ಲಿಷಿನಲ್ಲೇ ಟ್ರಿಂ ಆಗಿ ಹೇಳುತ್ತಿದ್ದಾರೆ. ಇದನ್ನು ತಪ್ಪಿಸಲು ಇನ್ನು ಕರ್ಣಾಟಕಮಾತೆ ಯಾದವಳೇ ಬಂದು ಕಿವಿ ಹಿಂಡಿಬೇಕೋ ಏನೋ. ಇಂಡಿಯಾ ದೇಶದ ಇತರ ರಾಜ್ಯಗಳನ್ನು ನೋಡಿದರೆ, ಮಹಾರಾಷ್ಟ್ರದಲ್ಲಿ, ಮರಾಠಿ ಭಾಷೆ ಮಾತನಾಡುತ್ತಾರೆ, ಮಹಾರಾಷ್ಟ್ರದ ಹೈಕೋರ್ಟು ಎಂದಾಗಿದೆ. ಮಹಾರಾಷ್ಟ್ರ ದೇಶವಾದಾಗ ಗುಜರಾತಿನ ರಾಜ್ಯವಾದಾಗ ನಮ್ಮ ಮಾನ್ಯ ಸ್ಪೀಕರ್‌ರವರು ಅಲ್ಲಿನ ಮುಖ್ಯಮಂತ್ರಿಗಳಿಗೆ ಧನ್ಯವಾದ ಬರೆದ ಪತ್ರಕ್ಕೆ ಉತ್ತರವಾಗಿ ಅವರಿಗೆ ಮರಾಠಿಯಲ್ಲಿ ಉತ್ತರ ಬರೆದಿದ್ದಾರೆ. ಗುಜರಾತಿನಿಂದ ಬಂದ ಪತ್ರ ಗುಜರಾತಿನ ಭಾಷೆಯಲ್ಲಿದೆ.

ಅಧ್ಯಕ್ಷರು.—ಮಹಾರಾಷ್ಟ್ರದಲ್ಲಿರುವ ಮಂತ್ರಿಗಳು ಮತ್ತು ಉಪಮಂತ್ರಿಗಳಲ್ಲ ಎಷ್ಟೋ ಜನರ ಪರಿಚಯ ನನಗಿದೆ. ಅವರಿಗೆ ಬರೆದ ಕಾಗದಗಳಿಗೆ ಉತ್ತರಗಳು ಕೆಲವು ಇಂಗ್ಲಿಷಿನಲ್ಲಿವೆ, ಕೆಲವು ಕಾಗದಗಳನ್ನು ಮರಾಠಿಯಲ್ಲ ಬರೆದಿದ್ದಾರೆ. ಮುಖ್ಯಮಂತ್ರಿ ಗಳು ಬರೆದ ಕಾಗದ ಇಂಗ್ಲಿಷಿನಲ್ಲಿಯೇ ಇದೆ.

ಶ್ರೀ ಬಿ. ಕೆ. ನಾಗೂರ್.—ಯಾವುದೇ ಇರಲಿ. ಕರ್ಣಾಟಕದ ಹೆಸರು ಈ ರಾಜ್ಯಕ್ಕೆ ಆಗಬೇಕೆಂದು ಕಾಂಗ್ರೆಸ್ಸಿನವರೇ ಆ ಶ್ರೀಮಾನ್ ದೊಡ್ಡಮೇಟಿಯವರೇ ತಂದಿದ್ದರೂ ಕೂಡ ಬರೋಬರಿ ಅವರನ್ನು ನೆತ್ತಿ ಬಡಿದು ಕುಳ್ಳಿರಿಸಿಬಿಟ್ಟರು. ಈ ರಾಜ್ಯವಾಗಬೇಕೆಂದು ಚಳುವಳಿ ಆದಾಗ 1933ನೇ ಇಸವಿಯಲ್ಲಿ ನನ್ನನ್ನು ಪೋಲೀಸರು ಹಿಡಿದುಕೊಂಡು ಹೋದರು. 1941ನೇ ಇಸವಿಯಲ್ಲಿ ನಾನು ಮತ್ತು ಮಾನ್ಯ ಸಭಾಪತಿಗಳೂ ಇಬ್ಬರೂ

ಒಂದೇ ಜೈಲನಲ್ಲಿದ್ದೆವು. 1942 ಆದಮೇಲೆ 1948ನೇ ಇಸವಿಯಲ್ಲಿ ಹೈದರಾಬಾದಿನಲ್ಲಿ ನಮ್ಮ ಶರಣಗಾಡರ ಚಳುವಳಿಯಿಂದಾಗಿ ಒಂದು ವರ್ಷ ಜೈಲಿನಲ್ಲಿರಬೇಕಾಯಿತು. 1953ರಲ್ಲಿ ಈ ಚಳುವಳಿಯಾದಾಗ ಆರು ತಿಂಗಳ ಕಾಲ ಪೋಲೀಸರ ಕೈಗೆ ಸಿಕ್ಕಲಿಲ್ಲ. ನಮ್ಮ ಮಾನ್ಯ ಸಭಾಪತಿಗಳು ಬೊಂಬಾಯಿನಲ್ಲಿ ಡೆಪ್ಯುಟಿ ಸ್ಪೀಕರಾಗಿದ್ದರು. ಅವರೂ, ನಾವೂ ಎಲ್ಲ ಸೇರಿ ಹೋರಾಡಿ ಈ ಕರ್ಣಾಟಕ ಏಕೀಕರಣವಾಯಿತು. ಇನ್ನೂ ಮುಂದೆ ಸ್ವಾತಂತ್ರ್ಯ ಬಂದು ಕರ್ಣಾಟಕ ರಾಜ್ಯವಾಯಿತು. ಕನ್ನಡಿಗರೇ ಆದವರು ನಮ್ಮ ಜಿಲ್ಲೆಯವರೇ ಆದ ಶ್ರೀಮಾನ್ ಜತ್ತಿಯವರು ಮುಖ್ಯಮಂತ್ರಿಗಳಾಗಿದ್ದರೂ ಇನ್ನೂ ಕನ್ನಡದಲ್ಲಿ ಮಾತನಾಡದೇ ಇದ್ದರೆ, ಕನ್ನಡದಲ್ಲಿಯೇ ಕಾಗದ ಪತ್ರಗಳನ್ನು ಬರೆಯುವಂತೆ ಆಗದಿದ್ದರೆ, ಗುಂಪು ಕಟ್ಟಿಕೊಂಡು ಸಾವಿರಾರು ಜನರು ಸೇರಿ ಈ ಆಫೀಸಿನ ಮುಂದೆ ಸತ್ಯಾಗ್ರಹ ಹೂಡಲಿಕ್ಕೆ ಬರಬೇಕೇನು?. 1962ರೊಳಗೇ ಖಂಡಿತವಾಗಿ ತಿಳಿಸಬೇಕೆಂದು, ಕನ್ನಡ ಆ ವೇಳೆಗೆ ಬಾರದಿದ್ದರೆ ಕರ್ಣಾಟಕ ತಾಯಿ ಒಪ್ಪುವುದಿಲ್ಲ. 1962ರೊಳಗೆ ಕನ್ನಡ ಬಾರದೇ ಹೋದರೆ ನಮ್ಮ ಕನ್ನಡ ದೇಶದ ಕಲ್ಯಾಣವನ್ನು ಮಾಡಿದಂತಾಗುವುದಿಲ್ಲ. ನಮ್ಮ ಕನ್ನಡ ನಾಡಿನಲ್ಲಿ ಕನ್ನಡಿಗರು ಹೋರಾಡಿ ಈ ದೇಶವಾದ ಮೇಲೂ ಕನ್ನಡದಲ್ಲಿ ಭಾಷಣ ಮಾಡದೇ ಇರುವುದನ್ನು ನೋಡಿ ನನಗೆ ಬಹಳ ವ್ಯಸನವಾಗಿದೆ. ಇಲ್ಲಿ ಮರಾಠಿಯಲ್ಲಿ ಮಾತನಾಡಿದವರಿಗೆ ಮರಾಠಿಯಲ್ಲಿ ಉತ್ತರ ಕೊಡಲಿ, ಹಿಂದಿಯಲ್ಲಿ ಮಾತನಾಡಿದರೆ ಹಿಂದಿಯಲ್ಲೇ ಉತ್ತರ ಕೊಡಲಿ, ತೆಲುಗಿನಲ್ಲಿ ಮಾತನಾಡಿದರೆ ತೆಲುಗಿನಲ್ಲೇ ಉತ್ತರ ಕೊಡಲಿ, ನಾನು ಬೇಡವೆನ್ನುವುದಿಲ್ಲ. ಆದರೆ ಕನ್ನಡದಲ್ಲಿ ಕೇಳಿದಾಗ ಇಂಗ್ಲೀಷಿನಲ್ಲಿ ಉತ್ತರ ಕೊಡುವುದು ಸರಿಯಲ್ಲ. ನಮ್ಮ ನಾಡು ನಿಜವಾಗಿಯೂ ಕನ್ನಡ ನಾಡಾಗಬೇಕಾದರೆ ಮುಂದಿನ ಜನರಲ್ ಎಲೆಕ್ಷನ್ನು ವೇಳೆಗೆ ಎಂದರೆ 1961ರ ವೇಳೆಗೆ ಆಗಬೇಕು. ಆ ರೀತಿ ಮಾಡಬೇಕೆಂದು ನಾನಿಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಮೈಸೂರು ದೇಶಕ್ಕೆ ಕರ್ನಾಟಕವೆಂಬ ಹೆಸರನ್ನು ಇಡುವ ಬಗ್ಗೆ ಹೊರಗಿನಿಂದ ಬಂದಂತಹ ಜನ ನಾವು ಏನಾದರೂ ಒಂದು ಚಳುವಳಿಯನ್ನು ಶುರು ಮಾಡಿದರೆ ಅದನ್ನು ಬಂದ್ ಮಾಡುವುದಕ್ಕೆ ಈಗಿನ ಮಂತ್ರಿಗಳಿಗೇ ಆಗಲಿ ಅಥವಾ ಯಾರಿಗೇ ಆಗಲಿ ಶಕ್ತಿ ಇಲ್ಲವೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು.—ಸದಸ್ಯರು ಚಳವಳಿಯನ್ನು ಮಾಡಿದರೆ ಅವರ ಕಡೆಯಿಂದಾದರೂ ಅದನ್ನು ಬಂದ್ ಮಾಡುವುದಕ್ಕೆ ಆಗಬೇಕಲ್ಲಾ!

ಡಾ. ಬಿ. ಕೆ. ನಾಗೂರ್.—ನಮ್ಮ ಕೈಯಲ್ಲಿ ಆಗುತ್ತದೆ. ಅಷ್ಟು ಕಂಟ್ರೋಲ್ ಇಟ್ಟುಕೊಂಡು ನಾವು ಆ ಚಳುವಳಿಯನ್ನು ಮಾಡುತ್ತೇವೆ. ಬ್ರಿಟಿಷರನ್ನು ಇಲ್ಲಿಂದ ಓಡಿಸಿದ ಕಾಲದಲ್ಲಿ ಅವರು ಯಾವ ರೀತಿ ಬಿಟ್ಟು ಹೋದರೋ ಆ ರೀತಿ ನಾವು ಕರ್ನಾಟಕವೆಂಬ ಹೆಸರನ್ನು ನಮ್ಮ ಮೈಸೂರಿಗೆ ಇಡಲು ನಾವು ಒಂದು ಚಳುವಳಿಯನ್ನು ಹೂಡಿದರೆ ನೀವೇ ಬಿಟ್ಟುಹೋಗುವ ಪರಿಸ್ಥಿತಿ ಬಂದೀತು ಎಚ್ಚರಿಕೆಯಿರಲಿ! ಏಕೆಂದರೆ ಕರ್ನಾಕವೆಂಬ ಹೆಸರು ಬಂದೇ ಬರುತ್ತದೆ. ಕನ್ನಡ ಮಾತೆ ನಮ್ಮನ್ನು ಬಿಟ್ಟು ಕೊಡುವುದಿಲ್ಲ. ಕನ್ನಡ ಮಾತನಾಡುವವರು ಜಾಸ್ತಿಯಾಗುತ್ತಿದ್ದಾರೆ. ಆದ್ದರಿಂದ ಕರ್ನಾಟಕವೆಂಬ ಹೆಸರನ್ನು ಇಡಲು ಜಾಗ್ರತೆಯಾಗಿ ಪ್ರಯತ್ನಮಾಡಿ. ನಿಮಗೆ ದೇವರು ಒಳ್ಳೆಯದನ್ನು ಮಾಡುತ್ತಾನೆ. ಕರ್ಣಾಟಕ ತಾಯಿ ನಿಮಗೆ ಆಯುರಾರೋಗ್ಯವನ್ನು ಕೊಡಲಿ ಎಂದು ದೇವರಿಗೂ ಒಂದು ಸ್ಪೆಷಲಾಗಿ ಲೆಟರ್ ಕೂಡ ಬರೆಯುತ್ತೇನೆ.

ಒಬ್ಬ ಸದಸ್ಯರು.—ಕನ್ನಡದಲ್ಲಿ ಬರೆಯುತ್ತೀರೋ, ಇಂಗ್ಲೀಷ್‌ನಲ್ಲಿ ಬರೆಯುತ್ತೀರೋ?

ಡಾ. ಬಿ. ಕೆ. ನಾಗೂರ್.—ಕನ್ನಡಾಭಿಮಾನಿಯಾದ ನಾನು ಕನ್ನಡದಲ್ಲಿಯೇ ಬರೆಯುತ್ತೇನೆ.

ಇನ್ನು ಬಿಜಾಪುರದ ಮುನಿಸಿಪಲ್ ಸ್ಕೂಲ್ ಬೋರ್ಡಿನ ವಿಷಯ. ಈ ಬೋರ್ಡಿನಲ್ಲಿ ನಿಮಗೆ ಸಂಬಂಧಪಟ್ಟವರನ್ನು ಹಾಕಿಕೊಳ್ಳುತ್ತಿದ್ದೀರಿ. ಕನ್ನಡ ಓದಲಿಕೆ, ಬರೆಯಲಿಕ್ಕೆ ಬಾರದೇ ಇರುವಂತಹವರನ್ನು ಈ ಬೋರ್ಡಿಗೆ ನಾಮಿನೇಷನ್ ಮಾಡುತ್ತಿದ್ದೀರಿ. ಇದು ಬಹಳ ದುರ್ದೈವ

(ಶ್ರೀ ಬಿ. ಕೆ. ನಾಗೂರ್)

ಸಂಗತಿ. ತಮ್ಮ ಪಕ್ಷದ ಕಡೆಯುವರಿಗೇ ಆ ಸ್ಥಾನಗಳನ್ನು ಕೊಡುತ್ತಿದ್ದೀರಿ. ಇದು ಸರಿಯಲ್ಲ. ನಿಜವಾಗಿಯೂ ಇತ್ತೀಚೆಗೆ ಜನ ಎಚ್ಚೆತ್ತಿದ್ದಾರೆ. ರೈತರೂ ಕೊಡತಕ್ಕ ಕಂದಾಯದ ಮೇಲೆ ಸರ್ಛಾರ್ಜನ್ನು ಬೇರೆ ವಿಧಿಸಲಿಕ್ಕೆ ಹೊರಟಿದ್ದೀರಿ. ಈಗಾಗಲೇ ಅವರು ಸಾಕಷ್ಟು ತೆರಿಗೆಗಳನ್ನು ಕೊಡುತ್ತಿದ್ದಾರೆ. ಆದರೂ ಈ ಹೊಸ ತೆರಿಗೆಯನ್ನು ವಿಧಿಸುತ್ತೀರಿ. ಚುನಾವಣೆ ಸಮಯದಲ್ಲಿ ಇದರಿಂದ ಬಹಳವಾಗಿ ತೊಂದರೆಯಾಗುತ್ತದೆ ಎಂದು ನನ್ನ ಭಾವನೆ. ಭಾರತ ದೇಶ ಅವರಿಂದಲೇ ಉದ್ಧಾರವಾಗಬೇಕು; ರೈತನೇ ದೇಶದ ಬೆನ್ನುಮೂಳೆ ಎಂದು ದಿವಂಗತ ಜಗತ್ತಿನ ತಂದೆಯಾಗಿರತಕ್ಕ ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದರು. ಅಂದಮೇಲೆ ಅಂತಹ ರೈತನ ಬೆನ್ನು ಮೂಳೆ ಮುರಿದುಹೋಗುವಂತಹ ತೆರಿಗೆಗಳನ್ನು ಈಗ ವಿಧಿಸುತ್ತಿದ್ದೀರಿ. ಇದರಿಂದ ದೇಶಕ್ಕೆ ಹಾನಿಯೇ ಹೊರತು ಕ್ಷೇಮವಿಲ್ಲ. ಇದರಿಂದೇನಾಗುತ್ತದೆಂದರೆ ಅವನು ಸಾಗು ಮಾಡುವ ಕಾರ್ಯವನ್ನೇ ಬಿಡಬೇಕಾಗಿ ಬರುತ್ತದೆ. ಆಗ ನೀವು ಕೇಳಿದರೆ ಅವನು ಸಾಗು ಮಾಡುವ ಪರಿಸ್ಥಿತಿ ಬರುತ್ತದೆ. ನಾನು ತೆರಿಗೆಗಳೇ ಬೇಡವೆಂದು ಹೇಳುವುದಿಲ್ಲ. ತೆರಿಗೆಗಳನ್ನು ಹಾಕದೆ ಯಾವ ಸರ್ಕಾರವೂ ಆಡಳಿತ ನಡೆಸಲಾರದು. ಆದರೆ ಅದಕ್ಕೂ ಮಿತಿ, ಅವಧಿ ಇರುತ್ತದೆ ಏಕೆಂದರೆ ಈಗಾಗಲೇ ನಾನಾ ವಿಧವಾದ ತೆರಿಗೆಗಳನ್ನು ಕೊಡಲಿಕ್ಕೆ ಶಕ್ಯವಿಲ್ಲದೆ ಅನೇಕರ ಕೈ ಸುಟ್ಟಿದೆ. ಸಾಯುವ ಗತಿ ಬಂದಿದೆ. ಎಷ್ಟೋ ಜನ ರೈತರು ತಮ್ಮ ಕಸುಬನ್ನೇ ಬಿಟ್ಟುಬಿಟ್ಟಿದ್ದಾರೆ. ಶ್ರೀಮಾನ್ ಮರಿಯಪ್ಪನವರು ಈ ರೀತಿ ತೆರಿಗೆ ಹಾಕುತ್ತಿದ್ದರೆ ರೈತ ಹೇಗೆ ಉಳಿಯಬೇಕು ? ಈಗ ಕೇವಲ 9–10 ತಿಂಗಳುಗಳು ಮಾತ್ರ ನಿಮಗೆ ಉಳಿದಿವೆ. ಚುನಾವಣೆ ಕಾಲದಲ್ಲಿ ನೀವು ಅವರನ್ನು ಓಟು ಕೊಡಬೇಕೆಂದು ಕೇಳುವಾಗ ನಿಮಗೆ ಆಗ ಚೆನ್ನಾಗಿ ಬುದ್ಧಿ ಕಲಿಸುತ್ತಾರೆ. ನಮ್ಮ ವಿಷಯದಲ್ಲಿ ಹೇಗಾದರೂ ಪರವಾಯಿಲ್ಲ. ನಿಮಗಿಂತಲೂ ನಮಗೆ ಹೆಚ್ಚಿನ ಜವಾಬ್ದಾರಿ ಇದೆ. ನಿಮ್ಮ ಜವಾಬ್ದಾರಿಯನ್ನೂ ಸಹ ಅಗಾಗ್ಗೆ ಎಚ್ಚೆತ್ತು ಕೊಂಡು ಸರ್ಕಾರಿ ಕೆಲಸ ಕಾರ್ಯಗಳನ್ನು ಸಮರ್ಪಕವಾಗಿ ನಿಷ್ಠೆಯಿಂದ ನಡೆಸಬೇಕು.

ಇನ್ನು ಶ್ರೀಮಾನ್ ಮಾದಪ್ಪನವರು ಮಂತ್ರಿಗಳ ಪ್ರವಾಸದ ವಿಷಯವಾಗಿ ಕೆಲವು ಮಾತುಗಳನ್ನು ಹೇಳಿದರು. ನಾನು ಅದನ್ನು ಅನುಮೋದಿಸುತ್ತೇನೆ. ಶ್ರೀಮಾನ್ ಹನುಮಂತಯ್ಯನವರನ್ನು ಒಂದು ವಿಷಯದಲ್ಲಿ ವಂದಿಸಬೇಕಾಗಿದೆ. ಏಕೆಂದರೆ ಅವರು ಈ ವಿಧಾನಸೌಧವನ್ನು ಕಟ್ಟಿಸಿದಾಗ ಎರಡು ಗಾಲಿಯನ್ನು ಇದಕ್ಕೆ ಇಡಲಿಲ್ಲ. ಆ ರೀತಿ ಗಾಲಿಗಳು ವಿಧಾನಸೌಧಕ್ಕೆ ಇದ್ದಿದ್ದರೆ ವಿಧಾನಸೌಧ ಪೂರ್ತಿ ಹಾಗೆಯೇ ಪ್ರವಾಸಕ್ಕೆ ಹೋಗಬಿಡುತ್ತಿತ್ತೋ ಏನೋ ಎಂದು ನನಗೆ ಒಂದು ಸಂಶಯ ಬಂದಿದೆ. (ನಗು). ಅಂದಮೇಲೆ ಈಗಿನ ಮಂತ್ರಿಗಳ ಪ್ರವಾಸ ನಿಜವಾಗಿ ಬಹಳವಾಗಿ ಹೆಚ್ಚಾಗಿದೆಯೆಂದು ನಾನು ನಿಸ್ಸಂದೇಹವಾಗಿ ಧೈರ್ಯವಾಗಿ ಹೇಳುತ್ತೇನೆ ಶ್ರೀಮಾನ್ ಮರಿಯಪ್ಪನವರೇ, ಶ್ರೀಮಾನ್ ರುದ್ರಪ್ಪನವರೇ, ನಗಬೇಡಿರಿ. ಜನ ನಿಮ್ಮನ್ನು ಬಹಳವಾಗಿ ಬೈಯುತ್ತಿದ್ದಾರೆ, ನೀವು ನಗುತ್ತಾ ಇದ್ದೀರಲ್ಲಾ ! ಇದು ಸರಿಯೇ, ನೀವೇ ಹೇಳಿ. ಸಾಧಾರಣವಾಗಿ 6 ಆಣೆ ಸೀಸೆ ಸೀಮೆಯೆಣ್ಣೆ, 6 ಬಿಲ್ಲೆ ಬೆಂಕಿಪೆಟ್ಟಿ ಅದನ್ನು ತೆಗೆದುಕೊಂಡು ಆತ್ಮಹತ್ಯ ಮಾಡಿಕೊಳ್ಳುವ ಮನುಷ್ಯನಿಗೂ ಈಗಿನ ಹೊಸ ತೆರಿಗೆಯಿಂದ ಅನಾನುಕೂಲವಾಗುತ್ತದೆ ಎಂದು ಹೇಳಬಹುದು. ಈ ರೀತಿಯಾದ ಹೊಸ ತೆರಿಗೆಗಳನ್ನು ಜನತೆಯ ಮೇಲೆ ವಿಧಿಸುವುದರಿಂದ ರೈತರಿಗೆ ಭಾರಿ ಹೊರೆಯಾಗುತ್ತದೆ. ಇದನ್ನು ನೋಡಿ ನನಗೆ ಈ ಸಭೆಯಲ್ಲಿರುವುದಕ್ಕೆ ನನಗೆ ನಾಚಿಕೆಯಾಗುವಾಗ ನಿಮಗೆ ನಾಚಿಕೆಯಾಗುವುದಿಲ್ಲವೇ ! ನೀವು ಎಷ್ಟೆಷ್ಟು ಮೈಲಿ ಟೂರ್ ಮಾಡುವುದು, ಹಗಲೆಲ್ಲಾ ಟೂರ್, ರಾತ್ರಿಯೆಲ್ಲಾ ವಿಶ್ರಾಂತಿ--ಯಾವಾಗ ನೋಡಿದರೂ ಮಂತ್ರಿಗಳ ಪ್ರವಾಸದಲ್ಲಿದ್ದಾರೆ ಎಂಬುದನ್ನೇ ವಿಶೇಷವಾಗಿ ಕೇಳುತ್ತೇವೆ. ಒಂದೊಂದು ಊರಿಗೆ ನಾಲ್ಕೈದು ಮಂತ್ರಿಗಳು ಒಂದೇ ಸಾರಿ ಹೋಗಿರುತ್ತಾರೆ. ನಿಜವಾದ ಸಂಗತಿ

ಒಂದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಒಬ್ಬ ಮಂತ್ರಿ ಒಂದು ಊರಿಗೆ ಪ್ರವಾಸ ಮಾಡಿದರು, ಆಗ ಯಾರೂ ಇರಲಿಲ್ಲ. ಎರಡನೆ ಭಾರಿ ಇನ್ನೊಬ್ಬ ಮಂತ್ರಿ ಅಲ್ಲಿಗೆ ಬಂದಾಗ ಗೌಡ, ಓಲೆಕಾರ, ಕುಲಕರ್ಣಿಗಳು ಬಂದರು. ಮತ್ತೊಬ್ಬ ಮಂತ್ರಿ ಮೂರನೆ ಬಾರಿ ಅಲ್ಲಿಗೇ ಬಂದಾಗ ನಾಯಿಗಳು ಬವ್ ಬವ್ ಎಂದು ಕೂಗಾಡಿದವು. ನಿಮಗೆ ಇದನ್ನು ನಾನು ವೈಯಕ್ತಿಕವಾಗಿ ಹೇಳುತ್ತಾ ಇಲ್ಲ. ಇದು ನಿಜ. ಒಟ್ಟಿನಲ್ಲಿ ಈ ರೀತಿ ಟೂರ್‌ಗಳನ್ನು ವಿಶೇಷವಾಗಿ ಮಂತ್ರಿಗಳು ಮಾಡಬಾರದು.

ಇನ್ನು ಬಿಜಾಪುರ ಮುನಿಸಿಪಾಲಟಿಯ ಪ್ರಕರಣದ ಬಗ್ಗೆ ಮಾನ್ಯ ಶ್ರೀ ಸುಬ್ರಹ್ಮಣ್ಯ ಅವರಿಗೆ ನಾನು ಕಾಗದ ಬರೆದಿದ್ದರೂ ಅವರು ತುಂಬಾ ಅಲಕ್ಷ್ಯಭಾವನೆಯಿಂದ ನೋಡುತ್ತಿದ್ದಾರೆ. ಮಂತ್ರಿಗಳು ಯಾವ ರೀತಿ ನಮಗೆ ಗೌರವ ಕೊಡುತ್ತಾರೋ ಅದೇ ರೀತಿ ನಾವೂ ಸಹ ಗೌರವ ಕೊಡುತ್ತೇವೆ. ಅವರನ್ನು ನಾವೂ ಕೂಡ ಒಂದು ಯೋಗ್ಯ ದೃಷ್ಟಿಯಿಂದ ನೋಡುತ್ತೇವೆ. ಅವರು ಯಾವ ರೀತಿ ನಮ್ಮನ್ನು ಟ್ರೀಟ್ ಮಾಡುತ್ತಾರೋ ನಾವೂ ಆ ರೀತಿ ಅವರನ್ನು ಟ್ರೀಟ್ ಮಾಡುವುದು ನಮ್ಮ ಕರ್ತವ್ಯ. ಆದರೆ ನನ್ನ ಮಗನಿಗೆ ಕೆಲಸ ಕೇಳಲಿಕ್ಕೆ ನಾನು ಮಂತ್ರಿಗಳ ಹತ್ತಿರ ಬರಲಿಲ್ಲ. ಆ ಬಗ್ಗೆ ಯಾವ ಕಾಗದ ಪತ್ರಗಳನ್ನೂ ಸಹ ತೆಗೆದುಕೊಂಡು ಹೋಗಿರಲಿಲ್ಲ.

ಇನ್ನು ವಿಜಾಪುರ ನಗರ ಸಭೆಯ ವಿಷಯ. ಅಲ್ಲಿನ ಆಡಳಿತ ಅಧಿಕಾರಿಗಳ ವರ್ತನೆ ಏನೂ ಸರಿಯಾಗಿಲ್ಲ. ಸುಮಾರು 2 ಲಕ್ಷ 50 ಸಾವಿರ ರೂಪಾಯಿಗಳನ್ನು ಕಂಟ್ರಾಕ್ಟು ಕೆಲಸಗಳಿಗಾಗಿ ಕೊಡುತ್ತಿದ್ದಾರೆ. ಅದು ಸರಿಯಾದ ಕೆಲಸ ಕಾರ್ಯಗಳಿಗೆ ವಿನಿಯೋಗವಾಗದೆ ದುರ್ವಿನಿಯೋಗವಾಗುತ್ತಿದೆ. ನಾನು ಆ ಕಾಗದ ಪತ್ರಗಳನ್ನು ಮಂತ್ರಿಗಳಿಗೆ ತೋರಿಸಿದ್ದೇನೆ. ಆ ರೀತಿ ಕಂಟ್ರಾಕ್ಟುಗಳನ್ನು ಕೊಡುವುದರಿಂದ ಮುನಿಸಿಪಾಲಟಿಗೆ ಏನೂ ಲಾಭವಿಲ್ಲ. ಎಷ್ಟೋ ಷ್ಟು ಅನ್ಯಾಯಗಳಾಗುತ್ತಿವೆ ಎಂಬುದಕ್ಕೆ ನನ್ನಲ್ಲಿ ಎಲ್ಲ ಅಂಕಿಅಂಶಗಳೂ ಇವೆ. ನಾನು ಮಾನ್ಯ ಮುಖ್ಯ ಮಂತ್ರಿಗಳಿಗೂ, ಶ್ರೀಮಾನ್ ಸುಬ್ರಹ್ಮಣ್ಯ ಅವರಿಗೂ ಅವನ್ನು ಇನ್ನೂ ದಾಖು ಮಾಡಿಲ್ಲ. ಇಲ್ಲಿ ಇವತ್ತೂ ಹೇಳುತ್ತಿದ್ದೇನೆ. ಇದನ್ನು ಸರಿಮಾಡಲು ತಕ್ಕ ಯೋಚನೆಯನ್ನು ಸರ್ಕಾರದವರು ಮಾಡಬೇಕು. ಇದರಿಂದ ವಿಜಾಪುರ ನಾಗರಿಕರ ಹಿತರಕ್ಷಣೆ ಸರಿಯಾಗಿ ಆಗುತ್ತಿಲ್ಲ, ಇದು ಸತ್ಯ. ಇದು ನಗರಸಭೆಯ ಕಾರ್ಯಾಲಯ ಇಲ್ಲಿರತಕ್ಕದ್ದು ಯಾರ ದುಡ್ಡು, ನಾಗರಿಕರ ದುಡ್ಡು. ಅಂಥಾದನ್ನು ಲಕ್ಷ್ಯಕೊಟ್ಟು ನಾವೂ ನೋಡಬೇಕು, ನೀವೂ ನೋಡಬೇಕು, ಏಕೆಂದರೆ ನಾವು ಒಂದು ಲಕ್ಷ ಜನಗಳ ಪ್ರತಿನಿಧಿಗಳು. ಆದ್ದರಿಂದ ಈ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಚೆನ್ನಾಗಿ ತಿಳಿದು ಸರಿಮಾಡಬಹುದು ಎಂದು ನಾನು ತಿಳಿದಿದ್ದೇನೆ. ಇದು ನಮ್ಮ ಕರ್ತವ್ಯ. ಆದರೆ ಅದರ ಪರಿಣಾಮ ಅಷ್ಟು ಸರಿಹೋಗುವುದಿಲ್ಲವೆಂದು ನನಗೆ ತೋರುತ್ತಿದೆ. ಇವತ್ತಿನ ದಿವಸ ಶ್ರೀ ಟಿ. ಸುಬ್ರಹ್ಮಣ್ಯ ಅವರಿಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇದು ದುರ್ದೈವದ ಸಂಗತಿ. ಈ ಕಡೆಗೆ ಹೆಚ್ಚಿನ ಗಮನವನ್ನು ಸರ್ಕಾರದವರು ಕೊಡಬೇಕಾಗಿದೆ.

ಇನ್ನೊಂದು ವಿಷಯ ಬಹಳ ಮಹತ್ವದ್ದು. ವಿಜಾಪುರ ಜಿಲ್ಲೆಯಲ್ಲಿ ಮಂಡಲ ಕಾಂಗ್ರೆಸ್ ಕಮಿಟಿ, ಅಧಿಕಾರ ವರ್ಗದವರು, ಆ ಜಿಲ್ಲೆಯ ಮುಖಂಡರು ಮತ್ತು 3–4 ಜನ ಎಂ. ಪಿ. ಸಿ. ಸಿ. ಸದಸ್ಯರುಗಳೂ ಇವರೆಲ್ಲರೂ ಸೇರಿಕೊಂಡು ಈಗ ಪಿ. ಡಬ್ಲ್ಯು. ಡಿ. ಕಂಟ್ರಾಕ್ಟ್ ಕೆಲಸವನ್ನು ತೆಗೆದುಕೊಂಡಿದ್ದಾರೆ. ಇದರಿಂದ ಬೇರೆಯವರು ಅರ್ಜಿಗಳನ್ನು ಕೊಟ್ಟರೆ ಅವರಿಗೆ ನೀವು ಕಂಟ್ರಾಕ್ಟ್ ಕೊಡುವುದಿಲ್ಲ. ಅವರು ನಾವೇ ಆ ಕೆಲಸಕ್ಕೆ ಇಳಿದಿದ್ದೇವೆಂದು ಹೇಳುತ್ತಿದ್ದಾರೆ. ಅಲ್ಲದೆ ಶ್ರೀಮಾನ್ ಸುರಪೂರ್ ಮಲ್ಲಪ್ಪನವರ ಏರಿಯಾದಲ್ಲಿ ಈಗ ಅವರಿಂದಲೇ ಒಂದು ಕಂಟ್ರಾಕ್ಟು ಕೆಲಸ ನಡೆಯುತ್ತಿದೆ. ನಿಮ್ಮದು ದೇಶದಲ್ಲಿ ಚೆನ್ನಾಗಿ ನಡೆಯುತ್ತದೆಂದು, ಅಧಿಕಾರ ನಮ್ಮದೇ ಇದೆ ಎಂದು ತಿಳಿದು ಅಂತಹವರಿಗೆಲ್ಲಾ ಪಿ. ಡಬ್ಲ್ಯು. ಡಿ. ಕಂಟ್ರಾಕ್ಟ ಕೊಡುವುದು ಕಾನೂನಿಗೆ

(ಶ್ರೀ ಬಿ. ಕೆ. ನಾಗೂರ್)

ವಿರುದ್ಧವಾಗಿದೆ. ಇದರಿಂದ ಅವರು ತಲೆಯ ಮೇಲೆ ಕಾಲು ಇಟ್ಟು ಕೆಲಸಕಾರ್ಯ ಗಳನ್ನು ನಡೆಸಿದರೆ ಏನು ಪ್ರಯೋಜನ ? ಇಂಥಾದ್ದನ್ನೆಲ್ಲಾ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಸರ್ಕಾರದವರನ್ನು ಕೇಳಿಕೊಳುತ್ತೇನೆ.

ಶ್ರೀ ಜಿ. ಶಿವಪ್ಪ.—ಅವರು ವೈಯಕ್ತಿಕವಾಗಿ ಮಾಡುತ್ತಿದ್ದಾರೋ ? ಕಾಂಗ್ರೆಸ್ ಸಂಸ್ಥೆ ಪರವಾಗಿ ಮಾಡುತ್ತಿದ್ದಾರೋ ?

ಶ್ರೀ ಬಿ. ಕೆ. ನಾಗೂರ್.—ಮಂತ್ರಿಗಳಾಗಿ ಅವರ ಕೈಗೆ ದುಡ್ಡು ಎಲ್ಲಾ ಅನುಕೂಲ ಗಳು ಸಿಕ್ಕಿರುವಾಗ, ಅವರು ವೈಯಕ್ತಿಕವಾಗಿ ಖಾಸಗಿಯಾಗಿ, ಹೋಗುತ್ತಿದ್ದಾರೆಂದು ಹೇಗೆ ಹೇಳುವುದು? ಕಂಠಿಯವರು ಬಾಗಲಕೋಟೆಗೆ ಬಂದಿದ್ದಾರೆ. ಅವರು ಮಾನ್ಯ ಸಭಾಪತಿ ಗಳು ಮೈಸೂರು ರಾಜ್ಯದ ಸ್ಪೀಕರ್‌ರವರು. ಅವರು ಅಲ್ಲಿಗೆ ಬಂದಾಗ ಸ್ಪೀಕರ್ ಪದವಿಯನ್ನು ಇಲ್ಲಟ್ಟು ಬಂದಿರುತ್ತಾರೇನು ? ಮುಖ್ಯಮಂತ್ರಿಗಳು ಎಲ್ಲಿಯಾದರೂ ಟೂರ್ ಮಾಡಿದರೆ, ಜಂಖಂಡಿಗೆ ಗುರ್ತುಮಾಡಿ ಒಬ್ಬರೇ ಬರುತ್ತಾರೇನು ? ಏನು ಶಿವಪ್ಪನವರೇ, ನೀವೂ ಅವರೂ ವ್ಯಯಕ್ತಿಕವಾಗಿ ಮಾಡುತ್ತೀರೋ, ಕಾಂಗ್ರೆಸ್ ಕಮಿಟಿ ಪರವಾಗಿ ಮಾಡುತ್ತೀರೋ ಎಂದು ಕೇಳುವುದು ನಿಜವಾಗಿ ಸಾರ್ಥಕವೇ !

ಎಸ್, ಟಿ. ಬಸ್. ವಿಚಾರ ಎರಡು ಮಾತು ಹೇಳಿ ಮುಗಿಸುತ್ತೇನೆ. ರಾಷ್ಟ್ರೀಕರಣ ಮಾಡು ತ್ತಿದ್ದೀರಿ. ಬಿಜಾಪುರದ್ದು ಉದಾಹರಣೆಯಾಗಿ ಕೊಡುತ್ತಿದ್ದೇನೆ. ಹೋದ ತಿಂಗಳು ಒಂದನೇ ತಾರೀಖು ಮದುವೆ ಇತ್ತು. ಹಿಂದಿನ 30ನೆಯ ತಾರೀಖು ಬಸ್ ಕೊಡುತ್ತೇವೆಂದು ಹೇಳಿದ್ದರು. ಆದರೆ ಆ ಸಂಜೆಗೆ ನಮ್ಮಲ್ಲಿ ಬಸ್ ಸ್ಟಾಕ್ ಇಲ್ಲ ಎಂದು ಹೇಳಿಬಿಟ್ಟರು. ಮಾರನೆಯ ದಿವಸ ಲಗ್ನದ ದಿನ. ಹೊರಗಡೆ ಬಸ್ ತೆಗೆದುಕೊಳ್ಳೋಣವೆಂದರೆ, ಅದಕ್ಕೆ ಅವ ಕಾಶವಿಲ್ಲ. ಅಲ್ಲಿ ಟ್ಯಾಕ್ಸಿಯೂ ಇಲ್ಲ. 60 ಜನ ಹೋಗಬೇಕು, ಬಸ್ ಕೊಡಿ ಎಂದರೆ, ಕೊಡು ವುದಿಲ್ಲವೆನ್ನುತ್ತಾರೆ, ಏನು ಮಾಡುವುದು? ನಾನೇ ಡಿವಿಜನಲ್ ಕಂಟ್ರೋಲರಿಗೆ ಫೋನ್ ಮಾಡಿದೆ. ನಾನು ಎಂ. ಎಲ್. ಎ. ಆಗಿ ಈ ಪರಿಸ್ಥಿತಿಯಾದುದೂ ದುರ್ದೈವದ ಸಂಗತಿ. ಅವರೂ ಕೊಡ ಲಿಲ್ಲ. ಯಾರನ್ನು ಕೇಳಿದರೂ ಮಾನ್ಯ ಸಭಾಪತಿಗಳೂ, ಮುಖ್ಯಮಂತ್ರಿಯವರೂ ನಿಮ್ಮ ಜಿಲ್ಲೆಯವರೇ, ನಿಮಗೇನು ಕೊರತೆ ಅನ್ನುತ್ತಾರೆ ! ಅವರುಗಳನ್ನು ನೋಡಿಕೊಂಡು ಆನಂದ ಪಟ್ಟುಕೊಂಡು ಹೊಟ್ಟೆ ಹಸಿವು ಬರಗಾಲದೊಳಗೆ ತೀರಿಸಿಕೊಳ್ಳಲಾಗುತ್ತದೆಯೇ ? ಇಷ್ಟರ ಮಟ್ಟಿಗೆ ಆಗಿದೆ! ಇವರಿಬ್ಬರನ್ನೂ ನೋಡಿಕೊಂಡು ನಾವು ಸಂತೋಷವಾಗಿರುವ ಕಾಲ ಬಂದಿದೆ. ನೀವಿಬ್ಬರೂ ನಮ್ಮ ಜಿಲ್ಲೆಯ ಪರಿದುಬಿಟ್ಟರೆ, ಬೆಳೆ ಬೆಳೆದು ಹೊಟ್ಟೆಗೆ ಕೂಳು ಸಿಕ್ಕಿಬಿಡು ತ್ತದೆಯೇ ?

ಇನ್ನು ಒಂದೇ ಒಂದು ವಿಚಾರ. ಹತ್ತು ಲಕ್ಷ ರೂಪಾಯಿ ಮಿಲ್ಲಿನ ಸಲುವಾಗಿ ಬ್ಯಾಂಕಿ ನೊಳಗೆ ಇಟ್ಟಿದ್ದೇವೆ. ಹತ್ತು ಲಕ್ಷ ಜನರು ಈ ಮಿಲ್ಲು ಬಿಜಾಪುರದೊಳಗೆ ಆಗಬೇಕೆಂದು ಅಭಿಪ್ರಾಯಪಟ್ಟಿದ್ದಾರೆಂದು ಶ್ರೀ ಸಿದ್ಧಾಂತಿಯವರು ತಿಳಿಸಿರುವ ರಾಜಕೀಯ ಮುಖಂಡರು ಗಳ ಆಶ್ವಾಸನದ ಮೇಲೆ ಬ್ಯಾಂಕಿನೊಳಗೆ ದುಡ್ಡು ಇಟ್ಟುಬಿಟ್ಟಿದ್ದೇವೆ. ದುಡ್ಡು ಬ್ಯಾಂಕಿನಲ್ಲಿ ಕೊಳೆಯುತ್ತಾ ಇದೆ. ಸ್ಪೀಕರ್‌ರವರ ಏರಿಯಾದಲ್ಲಿ ಅದನ್ನು ಹಾಕಬೇಕೆಂದು ಬಡಿದಾಟವಾಗುತ್ತಿದೆ. ಮುಖ್ಯಮಂತ್ರಿಗಳು ದೊಡ್ಡ ಮನಸ್ಸು ಮಾಡಿ, ಬಿಜಾಪುರಕ್ಕೇ ಆ ಮಿಲ್ಲನ್ನು ಕೊಡಬೇಕು. ಮಿಲ್ಲು ಕೊಡಲಿಕ್ಕೆ ರಾಜಕೀಯ ನಡೆಯುತ್ತಾ ಇರುವುದು ಬಹಳ ವ್ಯಸನವಾಗಿದೆ. ಮುಖ್ಯಮಂತ್ರಿಗಳು ರಾಜಕೀಯಕ್ಕೆ ಒಳಗಾಗದೆ, ಆದಷ್ಟು ಜಾಗ್ರತೆ ನಮಗೆ ಮಿಲ್ಲು ಕೊಡಲು ಮನಸ್ಸು ಮಾಡಬೇಕು. ಈಗ ಅವರಿಗೆ ಮನಶಾಂತಿ ಇದೆ. ಕಾಂಗ್ರೆಸ್ಸಿನೊಳಗೆ ಏನು ವ್ಯತ್ಯಾಸಗಳಿದ್ದಾವೋ ಅವುಗಳೆಲ್ಲಾ ಈಗ ಹೋಗಿದೆ ಎಂದು ಹೇಳು

ತ್ರಿದ್ವೀರಿ. ಈಗ ಕಾಂಗ್ರೆಸ್ ಪರಿಸ್ಥಿತಿ ಚೊಕ್ಕಟವಾಗಿದೆ. ಅದ್ದರಿಂದ ತಾವು ದೇಶದ ಹಿತದೃಷ್ಟಿಯಿಂದ ಈ ಬಿಲ್ಲನ್ನು ಮಾಡಿಕೊಡಲು ಲಕ್ಷ್ಯ ಕೊಡಬೇಕು.

6–30 P.M.

ಪೋಲೀಸರ ವಿಷಯದಲ್ಲಿ ಶ್ರೀ ಚೆನ್ನಬಸಪ್ಪನವರು ಹೆಚ್ಚು ಗಮನ ತೆಗೆದುಕೊಳ್ಳಬೇಕು. ಅವರು ಪಿ. ಡಬ್ಲ್ಯು. ಡಿ. ಪೋರ್ಟ್‌ಫೋಲಿಯೋ ಇದ್ದಾಗ ಚೆನ್ನಾಗಿ ಕೆಲಸ ಮಾಡಿದ್ದಾರೆಂದು ಅಭಿಮಾನದಿಂದ ಹೇಳುತ್ತೇನೆ. ಅವರು ಈಗ ಪೋಲೀಸು ಇಲಾಖೆಯಿಂದ ಜನತೆಗೆ ಉಪಕಾರವಾಗುವಂತೆ ನೋಡಿಕೊಳ್ಳಬೇಕು. ಪೋಲಿಸರ ಉಪಟಳ ಅತಿ ಹೆಚ್ಚಾಗಿದೆ. ಅವರಿಗೆ ಒಳ್ಳೆಯ ಪಗಾರ ಕೊಡಬೇಕು. ಚಲೋ ಇದ್ದವರಿಗೆ ಅವಾರ್ಡ್ ಬಡ್ತಿ ಕೊಡಬೇಕು. ಆದರೆ ಅಯೋಗ್ಯ ಪೋಲಿಸರ ಬಗ್ಗೆ ತೀವ್ರ ಆಕ್ಷನ್ ತೆಗೆದುಕೊಳ್ಳಬೇಕು. ಜನತೆಗೆ ನೆಮ್ಮದಿ ತಂದು ಕೊಡಬೇಕು.

ಅಧ್ಯಕ್ಷರು ನನಗೆ ಹೆಚ್ಚು ಟೈಮ್ ಕೊಟ್ಟದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

MR. SPEAKER –The House will not rise and meet to-morrow at 8-30 A.M.

The House adjourned at Thirty-five Minutes past Six of the Clock to meet again at Thirty Minutes Past Eight of the Clock on Saturday, the 25th March 1961.